
# ಅಖಿಲ ಭಾರತ ಪತ್ರಿಕೆ

ಫೆಬ್ರವರಿ 2022



# ಪ್ರಕೃತಿಯ ಗೂಢ-ಆಯಾಮ

ಬೆಲೆ : 15/-



ಉದಯಗಳ ಸದನದಿಂದರಳಿ ವದನ ಉಜ್ವಲದ ಛಂದದಲ್ಲಿ
ಸುವಿಶಾಲವಾದ ಬುವಿ ಹೃದಯವೀಗ ಕೋಮಲದ ಭಾವದಲ್ಲಿ,
ಬ್ರಹ್ಮಾಂಡ ಬ್ರಹ್ಮದಾರ್ಣವದ ಮೇಲೆ ಇದು ನಾದ–ಯಾತ್ರೆಯೀಗ
ದಿವ್ಯಾತ್ಮ ಯತ್ನ ಆ ಭೂಮ ಭವ್ಯ ಸ್ಪಂದನದ ಸನಿಹವೀಗ.

**ಅನು: ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 2 ಪುಟ 115)**

**ಅಖಿಲ ಭಾರತ ಪತ್ರಿಕೆ**
**ಫೆಬ್ರವರಿ 2022**

ಸಂಪುಟ: 32 ಸಂಚಿಕೆ: 02

# ಪರಿವಿಡಿ

## "ಪ್ರಕೃತಿಯ ಗೂಢ–ಆಯಾಮ"

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಪ್ರಕೃತಿ ಎಂದರೇನು?** 3
ಅನು: ಡಾ॥ ಮಹಾದೇವ ಸಕ್ರಿ

**ಪ್ರಕೃತಿಯ ಅವಸ್ಥೆಗಳು** 17
ಅನು: ಶ್ರೀ ಪುಟ್ಟು ಕುಲಕರ್ಣಿ

**ಪ್ರಗತಿಯ ಪ್ರತಿಮೆ; ಈ ವೃಕ್ಷ** 22
ಅನು: ಡಾ॥ ಬಿ.ಆರ್. ಭೀಡ

**ಪ್ರಕೃತಿ ಮತ್ತು ನವ–ಸೃಷ್ಟಿ** 27
ಅನು: ಪ್ರೊ. ವೀರಭದ್ರಪ್ಪ ಕೆ.

**ಪ್ರಕೃತಿ ಮತ್ತು ಶ್ರೀಮಾತೆ** 32
ಅನು: ನಾಗಜ್ಯೋತಿ ಎಲಿಗಾರ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 34
ಅನು: ಜಾನ್ವಿ

**ಶ್ರೀ ಅರವಿಂದರ 'ವೇದದ ಪ್ರತಿಮಾತತ್ತ್ವ'** 48
ಅನು: ಶ್ರೀ ಪುಟ್ಟು ಕುಲಕರ್ಣಿ

**ಸಾವಿತ್ರಿ ಉಪನಿಷತ್ತು ಮತ್ತು ಶ್ರೀ ಅರವಿಂದರ 'ಸಾವಿತ್ರಿ'** 54
– ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 150ನೇ ಜನ್ಮದಿನದ ವಾರ್ಷಿಕೋತ್ಸವ ವಿಶೇಷ** 67

**ವಾರ್ತಾಪತ್ರ** 68

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

ಸುಪ್ತಪ್ರಜ್ಞಾವಸ್ಥೆಯಲ್ಲಿಯೇ ಬಲವು, ನಿಯತಿಯ ಅನುಸಾರವಾಗಿಯೇ ನಿಗದಿತವಾಗಿ ಸೃಷ್ಟಿಯಲ್ಲಿ ಸರ್ವಸ್ವವನ್ನೂ ಚಲನೆಗೊಳಿಸುತ್ತಿರುತ್ತದೆ ಎಂದೇ ಸಾಮಾನ್ಯವಾಗಿ ಪ್ರಕೃತಿಯ ಬಗೆಗೆ ಪರಿಗಣನೆ ಇದೆ. ಪ್ರಕೃತಿಯ ಕುರಿತಾಗಿ ಸರ್ವಾಂಗೀಣ ಮತ್ತು ಸಮಗ್ರ ಆಯಾಮದಲ್ಲಿ ಅಧ್ಯಯನ ಮಾಡಿದ್ದೇ ಆದಲ್ಲಿ, ಈ ಪ್ರಕೃತಿಯ ಪ್ರತಿಯೊಂದು ಅಂಶವನ್ನೂ ಅರಿತುಕೊಳ್ಳಲು ಸಾಧ್ಯವಾಗುತ್ತದೆ, ಅಷ್ಟೇ ಅಲ್ಲದೇ ಪ್ರತಿಯೊಂದನ್ನೂ ಅರಿತುಕೊಳ್ಳುವ ಮತ್ತು ಅವುಗಳ ಪ್ರಭುತ್ವವನ್ನೂ ಹೊಂದಲು ಸಾಧ್ಯವಾಗುತ್ತದೆ ಎಂದೇ ವಿಶ್ವಾಸವೂ ಇದೆ. ಪ್ರಕೃತಿಯ ವಿಷಯವಾಗಿ ಮತ್ತೂ ಸ್ವಲ್ಪ ಗಂಭೀರವಾದ ಅಧ್ಯಯನವನ್ನು ನಡೆಸಿದಲ್ಲಿ, ಈ ಯಾಂತ್ರೀಕೃತ ಮತ್ತು ಸುಪ್ತಪ್ರಜ್ಞಾವಸ್ಥೆಯ ಹಂತದಿಂದ ಮುಂದೆ ಸಾಗಲು, ನಮಗೆ ಪ್ರಕೃತಿಯೇ ನಿರ್ಮಿಸಿರುವ ಹಲವು ಪಥಗಳಿವೆ. ಈ ಯಾನದಿಂದ ನಮಗೆ, ಪ್ರಕೃತಿಯ ಈ ಕ್ರಿಯೆಗಳ ಆಧಾರದಲ್ಲಿ ಇರುವ ಪರಿಪಕ್ವ ಪ್ರಜ್ಞಾವಸ್ಥೆಯ ಶಕ್ತಿಯನ್ನು ಕಾಣಲು ಸಾಧ್ಯವಾಗುತ್ತದೆ. ಇದು ಒಂದು ನಿಗದಿತವಾದ ಆಕೃತಿಯಲ್ಲಿಯೇ ಪರಿಪೂರ್ಣ–ಗೊಳ್ಳುವಂತೆಯೇ ಇರುವ ಮಾರ್ಗಗಳನ್ನು ಅಳವಡಿಸಿಕೊಂಡಿದೆ.

ಈ ಸಂಚಿಕೆಯಲ್ಲಿ ಈ ರೀತಿಯಲ್ಲಿ ಇರುವ ಪ್ರಕೃತಿಯ ಗೂಢ ಆಯಾಮಗಳ ಬಗೆಗೆ ಹಾಗೂ ಅವುಗಳು ರಹಸ್ಯವಾಗಿಯೇ ಕಾರ್ಯ ಮಾಡುತ್ತಿರುವದರ ಕುರಿತು, ಶ್ರೀ ಅರವಿಂದರು ಮತ್ತು ಶ್ರೀಮಾತೆಯವರು ಅಭಿವ್ಯಕ್ತಿಸಿದ ಆಧ್ಯಾತ್ಮಿಕ ಜ್ಞಾನದ ಚಿಂತನಗಳಿವೆ. (ಎಐಎಮ್)

*

# ಪ್ರಕೃತಿ ಎಂದರೇನು?

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ಅಂತರಾತ್ಮ ಮತ್ತು ಪ್ರಕೃತಿಯ ರಹಸ್ಯಗಳು

ದೈವೀಯ ಒಂದಂಶವು ವಾಸಿಸುವಂಥ ಆಂತರಿಕ ಪ್ರದೇಶಗಳ ಕಡೆಗೆ ನಮ್ಮನ್ನು ಮಿಲನಗೊಳಿಸಿಕೊಂಡಾಗ, ಅದನ್ನು ನಾವು ಅರಿತುಕೊಂಡಾಗ, ಬೇರೆಯ ಜಗತ್ತುಗಳು ಮಾತ್ರವಲ್ಲದೆ, ಈ ಜಗತ್ತಿನ ಮತ್ತು ಪ್ರಕೃತಿಯಲ್ಲಿನ ರಹಸ್ಯಗಳನ್ನು, ಪ್ರಕೃತಿಯ ಇರುವಿಕೆಯ ಸತ್ಯವನ್ನು ನಾವು ನೋಡುತ್ತೇವೆ – ಪ್ರಕೃತಿಯು ಹೇಗೆ ಕೆಲಸ ಮಾಡುತ್ತದೆ, ಅವಳು ಹೇಗೆ ಸೃಷ್ಟಿಸುತ್ತಾಳೆ, ಪ್ರತಿಯೊಬ್ಬರಿಗೂ ಮತ್ತು ಪ್ರತಿ ವಸ್ತುವಿನಲ್ಲೂ ಅದರ ವ್ಯಕ್ತಿತ್ವಕ್ಕೆ ಸೂಕ್ತವಾದಂಥ ಒಂದು ಪಥವನ್ನು ಕೊಡುತ್ತಾಳೆ ಮತ್ತು ತನ್ನದೇ ಸ್ವಂತ ರೀತಿಯಲ್ಲಿ ದೈವಕ್ಕೆ ಸಂಬಂಧಿಸಿದ ತನ್ನ ಮೂಲದಲ್ಲಿ ಅದು ಪೂರ್ಣವಾಗಿ ಅರಳಲು ಪ್ರಗತಿಯ ಬೀಜವನ್ನು ಬಿತ್ತುತ್ತಾಳೆ.

ಆದುದರಿಂದ, ಪ್ರಾಣಿಯಲ್ಲಿನ ಪ್ರತಿಯೊಂದು ವಸ್ತುವಿನಲ್ಲಿ, ಎಲ್ಲ ಜೀವಿಗಳಿಗೆ (ಜಡ ಅಥವಾ ಚೇತನ) ಜೀವನವನ್ನು ಕೊಡುವಂಥ ದೈವೀ ಪ್ರಕಾಶದ ಆ ಅಗ್ನಿಕಣವನ್ನು ನಾವು ಕಂಡುಕೊಳ್ಳುತ್ತೇವೆ.

ಈ ದೈವೀ ಪ್ರಕಾಶವು, ವೃದ್ಧಿಯಾಗಲೆಂದು ಸೃಷ್ಟಿಸಲು, ಪುನರ್ನಿರ್ಮಿಸಲು, ಒಂದು ಹೊಸ ಹಂತದ ಕಡೆಗೆ ವಿಕಸಿಸಲು, ರೂಪಗೊಳ್ಳಲು ಹಾಗೂ ಅಭಿವೃದ್ಧಿಯಾಗಲು, ಹೊಸ ಬೆಳಕಿಗೆ ಅರಳಲು, ಉತ್ಸುಕತೆಯನ್ನು, ಹೊಂದಿಕೆಯಾಗುವ ಸಾಮರ್ಥ್ಯವನ್ನು ಕೊಡುತ್ತದೆ. ಪ್ರತಿ ಅಣುವಿನಲ್ಲೂ ಅಡಗಿರುವ ದೈವತ್ವವನ್ನು ಪುನಃ ಅನ್ವೇಷಿಸಲು, ಈ ರಚನೆಯಲ್ಲಿ ಇದೆಲ್ಲವೂ ನಡೆದು ಹೋಗುತ್ತದೆ...

ಈ ಎಲ್ಲ ಹೊರಹೊನಲುಗಳು ರಚನೆಯಲ್ಲಿ, ಇಡೀ ವಿಶ್ವದಲ್ಲಿ, ದೈವವು ಸ್ವ–ಅವಿರ್ಭಾವದಲ್ಲಿ ಸ್ವತಃ ನೀಡಿದವುಗಳಾಗಿವೆ – ಅವುಗಳು ಅವನ ಉಪಸ್ಥಿತಿಯಲ್ಲಿ ಕಂಪಿಸುತ್ತವೆ, ಅವುಗಳು ಅವನ ಬೆಳಕಿನಿಂದ ಬದುಕುತ್ತವೆ, ಅವನ ಪ್ರೀತಿಯಲ್ಲಿ ಬೆಳೆಯುತ್ತವೆ.

ಒಂದು ತ್ಯಾಗವಾಗಿ, ಒಂದು ದುರಂತವಾಗಿ, ಅವನು ತನ್ನನ್ನು ತಾನು ಉತ್ತಮಗೊಳಿಸಿಕೊಳ್ಳಲೆಂದು ಬಹು ಸಂಖ್ಯೆಯಲ್ಲಿ ಪುನಃ ಅನ್ವೇಷಿಸಬೇಕಾಗಿದೆ.

**– ಪ್ರಕೃತಿಯ ಸ್ಪಂದನ, ಪು. 3**

*

**ಧ್ಯಾನದಲ್ಲಿ ಪ್ರಕೃತಿ**

ಪ್ರೇಮದ ಆಂದೋಲನವು ಮಾನವ ಜೀವಿಗಳಿಗೆ ಸೀಮಿತವಾಗಿಲ್ಲ ಮತ್ತು ಬಹುಶಃ ಮನುಷ್ಯ ಜಗತ್ತಿಗಿಂತ ಬೇರೆ ಜಗತ್ತುಗಳಲ್ಲಿ ಅದು ಕಡಿಮೆ ವಿರೂಪಗೊಳಿಸಲ್ಪಟ್ಟಿದೆ. ಹೂವುಗಳ ಕಡೆಗೆ ಮತ್ತು ಮರಗಳ ಕಡೆಗೆ ನೋಡಿ. ಸೂರ್ಯಾಸ್ತವಾದಾಗ ಮತ್ತು ಎಲ್ಲವೂ ನಿಶ್ಯಬ್ದವಾದಾಗ, ಒಂದು ಕ್ಷಣ ಕುಳಿತುಕೊಳ್ಳಿ ಮತ್ತು ನಿಮ್ಮನ್ನು ನೀವು ಪ್ರಕೃತಿಯೊಡನೆ ತಾದಾತ್ಮ್ಯಗೊಳಿಸಿಕೊಳ್ಳಿ: ಆಗ ನೀವು ಭೂಮಿಯಿಂದ ಮೇಲಕ್ಕೆ, ಮರಗಳ ಬೇರುಗಳ ಕೆಳಗಿನಿಂದ ಆರೋಹಣಗೈಯುತ್ತ ಮತ್ತು ಅವುಗಳ ತಂತುಗಳ ಪಥದ ಮುಖಾಂತರ ಎತ್ತರದಲ್ಲಿ ಹೊರಚಾಚಿದ ಕೊಂಬೆಗಳವರೆಗೆ ಹೋಗುವ ಅನುಭವ ಹೊಂದುವಿರಿ, ಒಂದು ತೀವ್ರವಾದ ಪ್ರೇಮದ ಮತ್ತು ತವಕದ ಹಂಬಲವನ್ನು ಹೊಂದುವಿರಿ – ಬೆಳಕು ಆ ಕಡೆಗೆ ಹೋಗಿದ್ದರಿಂದ ಆ ಬೆಳಕನ್ನು ತಿರುಗಿ ತರುವ ಬಯಕೆ, ಬೆಳಕನ್ನು ತರುವಂಥ ಹಾಗೂ ಆನಂದವನ್ನು ಕೊಡುವಂಥ ಯಾವುದೋ ಒಂದಕ್ಕೆ ತವಕ. ಮರಗಳಲ್ಲಿಯ ಚಲನೆಯನ್ನು ನೀವು ಅನುಭವಿಸಿದರೆ ಅಲ್ಲೊಂದು ಶುದ್ಧವಾದ ಹಾಗೂ ತೀವ್ರತಮವಾದ ಹಂಬಲವು ಎಷ್ಟರಮಟ್ಟಿಗೆ ಇರುತ್ತದೆ ಎಂದರೆ, ನಿಮ್ಮ ಸ್ವ–ಪುರುಷನು ಸಹ ಒಂದು ಪ್ರಖರವಾದ ಪ್ರಾರ್ಥನೆಯಲ್ಲಿ, ಇಲ್ಲಿ ಅಭಿವ್ಯಕ್ತವಾಗದ ಶಾಂತಿಗಾಗಿ, ಬೆಳಕಿಗಾಗಿ, ಮತ್ತು ಪ್ರೇಮಕ್ಕಾಗಿ ಮೇಲೆ ಹೋಗುತ್ತಾನೆ. ಒಮ್ಮೆ ನೀವು ಈ ಬೃಹತ್ತಾದ, ಶುದ್ಧವಾದ ಮತ್ತು ನೈಜ ದೈವೀ ಪ್ರೀತಿಯ ಸಂಪರ್ಕದಲ್ಲಿ ಬಂದರೆ, ನೀವು ಅದನ್ನು ಅದರದೇ ಸೂಕ್ಷ್ಮ ರೂಪದಲ್ಲಿ ಒಂದು ಕ್ಷಣಮಾತ್ರದವರೆಗೆ ಅನುಭವಿಸಿದರೆ, ಮಾನವ ಬಯಕೆಯನ್ನು ಮಾಡಿದಂಥ ಆ ತುಚ್ಛ ವಸ್ತು ಯಾವುದೆಂದು ನೀವು ಅರಿಯುವಿರಿ. ಮಾನವ ಸಹಜ ಗುಣದಲ್ಲಿ (ಪ್ರಕೃತಿಯಲ್ಲಿ) ಅದು ಒಂದಷ್ಟು ನಿಮ್ನವಾಗಿದೆ, ಕ್ರೂರವಾಗಿದೆ, ಸ್ವಾರ್ಥಿಯಾಗಿದೆ, ಹಿಂಸಾತ್ಮಕವಾಗಿದೆ, ಕುರೂಪವಾಗಿದೆ ಅಥವಾ ಒಂದಷ್ಟು ಬಲಹೀನ ಮತ್ತು

ಭಾವನಾತ್ಮಕವಾಗಿದೆ, ಅಂದವಾದ ಭಾವನೆಯಿಂದ ಮಾಡಲ್ಪಟ್ಟಿದೆ, ಗಡುಸಾಗಿದೆ, ಬಲವಂತದ್ದಾಗಿದೆ, ತೋರಿಕೆಯದಾಗಿದೆ. ಈ ಅಸಭ್ಯತೆ ಮತ್ತು ಕ್ರೂರತೆಯನ್ನು ಅಥವಾ ಸ್ವ–ಸಂಬಂಧ ಬಲಹೀನತೆಯನ್ನು ಅವರು ಪ್ರೇಮವೆಂದು ಕರೆಯುತ್ತಾರೆ!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/72**

**ಪ್ರಕೃತಿಯ ಚಟುವಟಿಕೆಗಳ ಹಿಂದೆ**

ನಮ್ಮ ಇರುವಿಕೆಯ ಒಳಗಡೆಯ ಕದಗಳನ್ನು ತೆರೆಯುವಂಥ ಅಂತರ್ದೃಷ್ಟಿ ನಮ್ಮಲ್ಲಿದ್ದಾಗ ಮತ್ತು ಸಂಗತಿಗಳ ಹಿಂದಿರುವ ಸತ್ಯವನ್ನು ನೋಡಲಾರಂಭಿಸಿದಾಗ, ನಮ್ಮ ಸಾಮಾನ್ಯ ದೃಷ್ಟಿಯಿಂದ ತಪ್ಪಿಸಿಕೊಳ್ಳುವಂಥ ಬಹಳಷ್ಟು ವಿಷಯಗಳು ಈ ಲೌಕಿಕ ಜಗತ್ತಿನಲ್ಲಿಯೂ ಸಹ ಇವೆ ಎಂಬುದನ್ನು ನಾವು ಗ್ರಹಿಸುತ್ತೇವೆ. ಸೂಕ್ಷ್ಮ ದರ್ಶಕದ ಕೆಳಗಡೆ ಅಥವಾ ದೂರದರ್ಶಕದ ಮುಖಾಂತರ ಸಹ ನಾವು ಏನನ್ನು ನೋಡುತ್ತೇವೊ ಅಥವಾ ಆಧುನಿಕ ಛಾಯಾಗ್ರಹಿಕೆಯಿಂದ ನಾವು ಏನನ್ನು ಪುನರ್ನಿರ್ಮಿಸಲು ನಮಗೆ ಸಾಧ್ಯವಾಗುವುದೊ ಅವೆಲ್ಲವೂ ಈ ಗುಂಪುಗಳಾಗಿವೆ – ಪ್ರಕೃತಿಯ ರಹಸ್ಯಗಳನ್ನು ಕಂಡುಕೊಳ್ಳುವೆಡೆಗಿನ ಮೊದಲ ಹೆಜ್ಜೆ. ಮನುಷ್ಯ ನಿರ್ಮಿತ ಯಾವ ಯಂತ್ರವೂ ಸೃಷ್ಟಿಯ ಕಾರ್ಯ ಚಟುವಟಿಕೆಗಳ ಹಿಂದೆ ಏನಿದೆ ಎಂಬುದನ್ನು ವರ್ಣಿಸಲಾರದು. ಅದು ತನ್ನ ಅತಿಸೂಕ್ಷ್ಮ ಕ್ರಿಯೆಗಳ ಪರಿಪೂರ್ಣತೆಯಲ್ಲಿ, ತನ್ನ ನಿಖರತೆಯಲ್ಲಿ ಅದು ಎಷ್ಟೊಂದು ಸುಂದರ, ಎಷ್ಟೊಂದು ವೈವಿಧ್ಯ, ಎಷ್ಟೊಂದು ಸೂಕ್ಷ್ಮ ಮತ್ತು ಎಷ್ಟೊಂದು ಭವ್ಯವೆಂದರೆ, ಅವುಗಳನ್ನು ಈ ಅಶಕ್ತ ಮೆದುಳಿನಿಂದ ವರ್ಣಿಸಲು ನಮಗೆ ಎಂದಿಗೂ ಸಾಧ್ಯವಿಲ್ಲ.

ಮನುಷ್ಯ ತನ್ನ ಯಂತ್ರಗಳಿಂದ ಮತ್ತು ತನ್ನ ಅನ್ವೇಷಣೆಗಳಿಂದ ಪ್ರಕೃತಿಯ ಕಾರ್ಯಗಳನ್ನು ಸುಧಾರಿಸಬಹುದೆಂದು, ಭೌತಿಕ ಕ್ಷೇತ್ರದಲ್ಲಿ ತಾನು ಪಡೆದುಕೊಂಡ ಸಾಮರ್ಥ್ಯಗಳಿಂದ ಅವುಗಳನ್ನು ವೈಜ್ಞಾನಿಕ ರೀತಿಯಲ್ಲಿ ಬದಲಿಸಬಹುದೆಂದು ಯೋಚಿಸುತ್ತಾನೆ. ತನ್ನ ಸೂತ್ರಗಳಿಂದ ಪ್ರಕೃತಿಯನ್ನು ನಿಯಂತ್ರಿಸುವ ಎದೆಗಾರಿಕೆ ಇದೆ ಎಂದು ನಂಬುತ್ತಾನೆ, ಪ್ರಕೃತಿಯ ಕಾರ್ಯಗಳನ್ನು ಮತ್ತು ಅದರ ರಚನೆಯನ್ನು ಗೆಲ್ಲುವೆಡೆಗೆ ಒಯ್ಯುವ ಅವನ ಅನುಭವದ ವಿಧಾನಗಳು ಮತ್ತು ಅವನ ಶೋಧಗಳು... ಏನು ಮೂರ್ಖತನ, ಏನು ಹುಚ್ಚುತನ!... ಏನು ಹೋಲಿಕೆ!

ಅನಂತವನ್ನು ಅಪ್ಪಿಕೊಳ್ಳುವಂಥ ಪ್ರಕೃತಿಯ ಸಾಮರ್ಥ್ಯದ ತುದಿಗಳನ್ನೂ ಸಹ ಅವನು ಇನ್ನೂ ಮುಟ್ಟಿಲ್ಲ ಮತ್ತು ಪ್ರಕೃತಿಯನ್ನು ಆಳುವ ಹಕ್ಕನ್ನೂ ಕೇಳುತ್ತಾನೆ – ಮನುಷ್ಯನ ವಣ ಪ್ರತಿಷ್ಠೆ ಮತ್ತು ಅವನ ಅಹಂ, ಪೀಡಿಸುವಂಥ ಮತ್ತು ಅವರ ಇರುವಿಕೆಯನ್ನು ನುಂಗುವಂಥ, ವಾಸಿಮಾಡಲಾಗದ ಒಂದು ರೋಗದ ಹಿಡಿತದಲ್ಲಿರುವ ಮನುಷ್ಯರ ವ್ಯರ್ಥ ಉಡಾಫೆಗಳು... ಆದಾಗ್ಯೂ, ಅವನು ಸೂಕ್ಷ್ಮಮತಿ, ನಿರ್ಧರಿಸಿದ ಮತ್ತು ಗೆಲ್ಲುವ ಇಚ್ಛೆಯನ್ನು ಹೊಂದಿದ್ದಾನೆ; ಆದರೆ ಅವನು ಗುರಿಯೆಡೆಗೆ ಬರಲು ಹೆಚ್ಚು ಸಮಯವನ್ನು ತೆಗೆದುಕೊಳ್ಳುವ ಮತ್ತು ಹಲವು ಬಳಸುದಾರಿಗಳನ್ನು ಅನುಸರಿಸುತ್ತಾನೆ.

**– ದಯಾಳುವಿನ ಕೃಪೆ: 77–78**

*

**ಪ್ರಕೃತಿಯ ಸ್ವರೂಪ**

ದೀರ್ಘಕಾಲದವರೆಗೆ, ನಿಯಮಿತವಾಗಿ ನಾನು ಪ್ರಕೃತಿಯನ್ನು ನೋಡಿದ್ದೇನೆ, ನಾನು ನೋಡಿದ ವ್ಯಕ್ತಿ ಇವಳು; ಬಹಳ ವರ್ಷಗಳಿಂದ ಅವಳು ನನಗೆ ಪ್ರಕೃತಿಯಾಗಿದ್ದಾಳೆ. ಅದು "ನೆಂಟಸ್ತಿಕೆಯಲ್ಲ," ನನ್ನ ತಾಯಿಯ ಹಾಗೆ ನನ್ನ ಸಹೋದರಿಯಾಗಿರಬಹುದು ಅಥವಾ ನನ್ನ ಸಹೋದರಿ ನನ್ನ ತಾಯಿಯಾಗಿರಬಹುದು ಎಂಬಂತೆ (ಸಂಗತಿಗಳು ಅಷ್ಟೊಂದು ಸ್ಪಷ್ಟವಾಗಿಲ್ಲ, ಶಬ್ದಗಳು ಅಮಾನ್ಯ) ಅವಳು ಎತ್ತರವಾಗಿದ್ದಾಳೆ, ಒಬ್ಬ ಸುಂದರವಾದ ಮಹಿಳೆ ಮತ್ತು ಅವಳು ಅತ್ಯಂತ ಸರಳವಾಗಿದ್ದಾಳೆ ಹಾಗೂ ಅತ್ಯಂತ ಅದ್ಭುತವಾಗಿದ್ದಾಳೆ. ಆದರೆ, ನನ್ನೊಂದಿಗೆ ಅವಳು ಒಂದು ಪುಟ್ಟ ಮಗುವಿನಂತೆ. ಅವಳು ನನ್ನೊಂದಿಗೆ ಒಂದು ಸುತ್ತು ಸುತ್ತಿ ಹೀಗೆ ಹೇಳಿದಳು: ನೋಡು, ನಾನು ನಿನ್ನ ಉಡುಗೆಯನ್ನು ತೊಟ್ಟುಕೊಂಡಿದ್ದು ಯಾಕೆಂದರೆ ಅದು ಸ್ವೀಕೃತವಾಗಿದೆ ಎಂದು ನಿನಗೆ ಹೇಳಲು. ಆ ಉಡುಗೆಯ ಬಣ್ಣ ಚರ್ಮದ ಬಣ್ಣದಂತೆ ಇದೆ (ಶ್ರೀಮಾತೆಯವರ ಚರ್ಮದಂತೆ), ಅದು ಸ್ವಲ್ಪ ಚರ್ಮದ ಬಣ್ಣದಂತೆ ಇತ್ತು ಮತ್ತು ಉಡುಗೆಯು ಥೇಟ ಅದೇ ಬಣ್ಣದ್ದಾಗಿತ್ತು. ಅದು ಕೊಂಚ ಅದರಂತೆಯೇ ತೇಜಸ್ಸನ್ನು ಹೊಂದಿತ್ತು, "ಹೂ ಅರಳಿದಂತೆ." ಚರ್ಮವೂ ಸಹ ಹಾಗಿತ್ತು. ಲಿಂಗದ ಅಂಶ ಅಲ್ಲಿರಲಿಲ್ಲ, ಹೆಣ್ಣೊ ಅಥವಾ ಗಂಡೊ, ಲಿಂಗವಿಲ್ಲ. ಅದು ಈ ತೆರನಾಗಿತ್ತು (ಶ್ರೀಮಾತೆಯವರು ಒಂದು ಆಕರ್ಷಕವಾದ ಆಕೃತಿಯನ್ನು ಆಕಾಶದಲ್ಲಿ

ಬಿಡಿಸುತ್ತಾರೆ, ನಮ್ಮ ದೇಹವನ್ನು ಹೋಲುವ ಒಂದು ಆಕಾರ), ಆದರೆ ಲಿಂಗರಹಿತ: ಎರಡೂ ಕಾಲುಗಳು ಒಟ್ಟಿಗೆ ಕೂಡಿದ್ದವು.

ಅದು ಸುಂದರವಾಗಿತ್ತು.....

"ಸುಪ್ರಮಾನಸ (ಚೈತನ್ಯಪೂರ್ಣ) ದೇಹವು ಹೇಗಿದೆ? ಅದನ್ನು ನಾನು ನೋಡ ಬಯಸುತ್ತೇನೆ," ಎಂದು ನಾನು ಯಾವಾಗಲೂ ಕೇಳುತ್ತಿದ್ದೆ. ನಾನದನ್ನು ನೋಡಿದೆ, ನಾನು ನನ್ನ ದೇಹವನ್ನು ನೋಡಿದೆ, ಅದು ಹೇಗಿದ್ದಿರಬಹುದು. ಅದು ಚನ್ನಾಗಿದೆ! (ನಗುತ್ತಾ) ಅದು ಚನ್ನಾಗಿದೆ!... ಅದೊಂದು ದೇಹ... ಅದು ಅಷ್ಟೊಂದು ಬೇರೆಯಲ್ಲ, ಆದರೆ ಬಹಳ ಪರಿಷ್ಕೃತಗೊಂಡಿದೆ! ಎಷ್ಟೊಂದು ಪರಿಷ್ಕೃತವಾದ ವಸ್ತು! ಆ ಎಲ್ಲ ಚಲನೆಗಳು – ಆ ಒರಟು ಚಲನೆಗಳು – ಸಾಮಾನ್ಯವಾದ ಮನುಷ್ಯ ಚಲನೆಗಳು ಅಲ್ಲಿ ಇರಲಾರವು; ಎರಡೂ ಒಟ್ಟಿಗೆ ಇರಲಾರವು; ಅವುಗಳಲ್ಲಿ ಒಂದು ಅಲ್ಲಿದ್ದಾಗ ಇನ್ನೊಂದು ಅಲ್ಲಿರಲಾರದು. ಅದೇ ಅಖಂಡ ಅಂಶವಾಗಿದೆ, ಅದನ್ನು ಮಾಡಬೇಕು... ಸ್ಪಷ್ಟಪಡಿಸಬೇಕು – ದೈವೀ ಆನಂದ ಹೊರತುಪಡಿಸಿ ಯಾವುದೂ ಉಳಿಯಬಾರದು...

ನಾನು ಅವಳನ್ನು ನೋಡುತ್ತೇನೆ, ನಾನು ಈಗಲೂ ಪ್ರಕೃತಿಯನ್ನು ನೋಡುತ್ತೇನೆ.... ಅವಳ ಕೂದಲಿನ ಬಣ್ಣ ನಮ್ಮ ಕೂದಲಿನ ಬಣ್ಣದಂತೆ ಇಲ್ಲ: ಅದು ಎಲ್ಲ ಬಣ್ಣಗಳು ಒಟ್ಟಿಗೆ ಇದ್ದಂತೆ ಇದೆ. ಅವಳು ತನ್ನ ಕೂದಲನ್ನು ಯಾವಾಗಲೂ ನಾನು ಕಟ್ಟಿದಂತೆ ಕಟ್ಟುತ್ತಾಳೆ (ಶ್ರೀಮಾತೆಯವರು ತಮ್ಮ ತಲೆಯ ಹಿಂದಿನ ತುರುಬನ್ನು ತೋರಿಸುತ್ತಾರೆ). ಅವಳು ಉದ್ದನೆಯ ಪ್ರಶಾಂತ ಮುಖವನ್ನು ಹೊಂದಿದ್ದಾಳೆ... ಯುವತಿಯೂ ಅಲ್ಲ ಹಿರಿಯಳೂ ಅಲ್ಲ, ಅಜರಾಮರ ಮತ್ತು ಮುಖದಲ್ಲಿ ಒಂದು ಅಪೂರ್ವವಾದ ಶಕ್ತಿ ಇದೆ.

ಅದು ಲೌಕಿಕ ಪ್ರಕೃತಿ, ಭೌತಿಕ ಪ್ರಕೃತಿ, ಲೌಕಿಕ–ಭೌತಿಕ ಪ್ರಕೃತಿ. "ನಾನು ತೊಡಿಗೆಯನ್ನು ತೊಟ್ಟಿದ್ದೇನೆ, ನಿನ್ನ ತೊಡಿಗೆಯನ್ನು ತೊಟ್ಟಿದ್ದೇನೆ, ನಾನದನ್ನು ಸ್ವೀಕಾರ ಮಾಡಿದ್ದೇನೆ" ಎಂದು ಹೇಳಿದಳು.

ಅಂದರೆ, ಲೌಕಿಕ ಪ್ರಕೃತಿಯು ಹೊಸ ರಚನೆಯನ್ನು ಸ್ವೀಕರಿಸಿದೆ ಎಂದು ಅರ್ಥ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮೇ 9, 1970**

## ಪ್ರಕೃತಿಯ ಉಲ್ಲಾಸ

ಪ್ರಕೃತಿಯು ಪ್ರಶಾಂತವಾಗಿ, ವಿಶಾಲವಾಗಿ, ಅಭೀಪ್ಸೆಯ ಹಾಗೆ ಶುದ್ಧವಾಗಿ, ಪ್ರಾರ್ಥನೆಯ ಹಾಗೆ ಪವಿತ್ರವಾಗಿ ಇರುವಂಥ – ಯಾವುದೇ ಮನುಷ್ಯ ಪ್ರಾಣಿಯ ವಾತಾವರಣದಿಂದ ಎಂದೂ ಬಳಕೆಯಾಗದ ಅಥವಾ ಹಳ್ಳಿಯ ನಿಷ್ಕಳಂಕ ಪ್ರದೇಶದ ಮುಖಾಂತರ – ನಾವು ಒಂಟಿಯಾಗಿ ಅಥವಾ ಪರಿಪೂರ್ಣವಾದ ಸಾಮರಸ್ಯದಲ್ಲಿ ಇರುವಂಥ ಸಂಗಾತಿ ಜೊತೆ ಪರ್ವತಗಳ ಮೇಲೆ, ಕಾನನಗಳಲ್ಲಿ, ನಿರ್ಮಲವಾದ ಹಳ್ಳಗಳ ಬದಿಗಿರುವ ಒಂಟಿ ಮಾರ್ಗದುದ್ದಕ್ಕೂ ಅಥವಾ ಅಮಿತವಾದ ಸಾಗರದ ತೀರಗಳ ಮೇಲೆ ನಡೆದಾಡುವಾಗ ಸಂವೇದನೆಯಲ್ಲಿ ನಾವು ಮಧುರವಾದ ಮತ್ತು ಗಹನವಾದ ಒಂದು ಸೂಕ್ಷ್ಮವಾದ ಉಲ್ಲಾಸವಿರುವುದನ್ನು ಅನುಭವಿಸುತ್ತೇವೆ. ಪ್ರಾಣವು ವೈಯಕ್ತಿಕವಾಗಿ ಇರುವವರೆಗೆ ಕೆಲವು ನಿಶ್ಚಿತ ಬಾಹ್ಯ ನಿಯಮಗಳು ನೆರವೇರಿದಾಗ ಈ ಉಲ್ಲಾಸವನ್ನೂ ಅನುಭವಿಸಬಹುದು. ಇನ್ನೊಂದೆಡೆ, ಪ್ರಾಣವು ವೈಯಕ್ತಿಕವಾಗಿಲ್ಲದಿದ್ದಾಗ, ವಿಶ್ವಾತ್ಮಕವಾದಾಗ, ಇದನ್ನು ಅನುಭವಿಸಲು ನಾವು ಯಾವುದೇ ನಿರ್ದಿಷ್ಟವಾದ ಲೌಕಿಕ ನಿಯಮಗಳಿಂದ ಆವೃತವಾಗಬೇಕಿಲ್ಲ.

ನರವ್ಯೂಹ (ಸಂರಚನಾ) ಸ್ತರದಲ್ಲಿ, ನಾವು ಎಲ್ಲ ಸನ್ನಿವೇಶಗಳಿಂದ ಪೂರ್ಣವಾಗಿ ಮುಕ್ತವಾಗಿರುತ್ತೇವೆ, ಸ್ವಾತಂತ್ರ್ಯವನ್ನು ಪಡೆದುಕೊಂಡಿರುತ್ತೇವೆ.

*

ನಾನು ತೆರೆಗಳ ಧ್ವನಿಯನ್ನು ಕೇಳಿದೆ ಮತ್ತು ಅದು ನನಗೆ ಹಲವು ವಿಸ್ಮಯಗಳನ್ನು ಹೇಳಿದವು. ಅವುಗಳು ನನ್ನೊಡನೆ ಜೀವನದ ಆನಂದದ ಮತ್ತು ಚಲನೆಯ ಅತ್ಯುತ್ಸಾಹಗಳ ಬಗ್ಗೆ ಮಾತನಾಡಿದವು. ಓ ಸಾಗರವೆ, ಅಂತ್ಯವಿರದ ಮತ್ತು ಎಂದಿಗೂ ನವೀಕೃತವಾಗದ ಹಾಡಿನಲ್ಲಿ ನೀನು ನನಗೆ ಮತ್ತೊಮ್ಮೆ ಎಲ್ಲ ವಿಷಯಗಳನ್ನು ಸತ್ಯವನ್ನಾಗಿ ಮಾಡುವ ಪ್ರೀತಿಯ ಸಾಮರ್ಥ್ಯದ ಬಗ್ಗೆ ಹೇಳಬೇಕು. ನಿಮ್ಮ ಅಜೇಯ ಕ್ರಿಯೆಯ ವೈಭವವನ್ನು ಧ್ಯಾನಿಸುತ್ತ ಅತ್ಯುನ್ನತ ಸತ್ಯದೆಡೆಗೆ ಒಯ್ಯುವಂಥ, ಎದುರಿಸಲಾಗದ ಪ್ರವಾಹವನ್ನು ನಾನು ಗ್ರಹಿಸಿದೆ. ನನ್ನನ್ನು ಮೇಲೆತ್ತುವ ಮತ್ತು ಮೇಲ್ಮೈಯನ್ನು ಪರ್ವತಗಳಾಗಿ ಬದಲಾಯಿಸುವ ಬಲವು ಜಗತ್ತನ್ನು ಅದರ ಜಡತ್ವದಿಂದ ಮೇಲೆತ್ತುವ ಮತ್ತು ಅದರಲ್ಲಿ ದೈವೀ ಹಂಬಲವನ್ನು ಎಬ್ಬಿಸುವ ಬಲದಂತೆ ಇದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/119–20**

## ಪ್ರಕೃತಿಯ ಶಕ್ತಿಗಳು

ಪ್ರಕೃತಿಯ ಶಕ್ತಿಗಳು ಸಹ ಕುರುಡು ಮತ್ತು ಘೋರ ಎಂದು ಹೇಳಲಾಗಿದೆ. ಆದರೆ ಅದು ಆ ರೀತಿ ಇಲ್ಲ. ಮನುಷ್ಯನು ಪ್ರಕೃತಿಯೊಂದಿಗಿನ ತನ್ನ ತುಲನಾತ್ಮಕ ಅನುಪಾತದಲ್ಲಿ ಆ ರೀತಿ ಭಾವಿಸುತ್ತಾನೆ. ಸ್ವಲ್ಪ ಇರಿ, ನಾವು ಈ ಉದಾಹರಣೆಯನ್ನು ತೆಗೆದುಕೊಳ್ಳೋಣ. ಭೂಕಂಪನ ಸಂಭವಿಸಿದಾಗ ಎಷ್ಟೋ ನಡುಗಡ್ಡೆಗಳು ಮುಳುಗಿ ಹೋಗುತ್ತವೆ ಮತ್ತು ಲಕ್ಷಾಂತರ ಜನರು ಸಾಯುತ್ತಾರೆ. ಆಗ ಜನರು ಹೀಗೆ ಹೇಳುತ್ತಾರೆ: "ಪ್ರಕೃತಿಯು ಅಮಾನುಷವಾಗಿದೆ." ಮಾನವರ ದೃಷ್ಟಿಕೋನದಿಂದ ಈ ಪ್ರಕೃತಿಯು ಅಮಾನುಷವಾಗಿದೆ. ಅದು ಏನನ್ನು ಮಾಡಿದೆ? ಅದು ಪ್ರಳಯವನ್ನು ಸೃಷ್ಟಿಸಿದೆ. ಆದರೆ, ನೆಗೆತದಲ್ಲಿ ಅಥವಾ ಓಟದಲ್ಲಿ ಅಥವಾ ಇನ್ನೇನನ್ನೋ ಮಾಡುವುದರಲ್ಲಿ ನೀವು ಹೇಗೆ ಒಂದು ಹೊಡೆತದಿಂದ ಗಾಯಗೊಳ್ಳುತ್ತೀರಿ ಎನ್ನುವ ಬಗ್ಗೆ ಯೋಚಿಸಿ. ಅದು ನಮ್ಮ ಕೋಶಗಳಿಗೆ ಒಂದು ಭೂಕಂಪನವಿದ್ದ ಹಾಗೆ; ನೀವು ಬಹು ಸಂಖ್ಯೆಯಲ್ಲಿ ಕೋಶಗಳನ್ನು ಹಾಳು ಮಾಡುತ್ತೀರಿ! ಅದು ಅನುಪಾತದ ಪ್ರಶ್ನೆಯಾಗಿದೆ. ಇದು ನಮಗೆ, ನಮ್ಮ ಅಲ್ಪ ಪ್ರಜ್ಞೆಗೆ ಏನೋ ಒಂದು ಭಯಾನಕ ಸಂಗತಿಯಾಗಿ ತೋರುತ್ತದೆ, ಆದರೆ ಭೂಮಿಯ ಮೇಲೆ ಇದೊಂದು ಸಾಮಾನ್ಯ ಹೊಡೆತವಾಗಿದೆ. ನಾವು ಬರೀ ಭೂಮಿಯ ಬಗ್ಗೆ ಮಾತನಾಡುತ್ತಿದ್ದೇವೆ, ವಿಶ್ವದ ಬಗ್ಗೆ ಅಲ್ಲ. ಅದು ಏನೂ ಅಲ್ಲ. ಅದು ವಿಶ್ವದಲ್ಲಿ ಒಂದು ಚಿಕ್ಕ ಕ್ರಿಯೆ ಮಾತ್ರ. ನಾವು ಈ ವಿಶ್ವದ ಬಗ್ಗೆ ಮಾತನಾಡಿದರೆ, ಆಗ ಅದು ಜಗತ್ತುಗಳ ಅಂತರ್ಧಾನವಾಗುತ್ತದೆ – ಇವುಗಳು ಬರೀ ಮಾತುಗಳು. ಅದು ಏನೂ ಅಲ್ಲ.

ಸಾಧ್ಯವಾದರೆ, ನಾವು ನಮ್ಮ ಪ್ರಜ್ಞೆಯನ್ನು ವಿಸ್ತಾರಗೊಳಿಸಿಕೊಳ್ಳಬೇಕು.

ಪ್ರಜ್ಞೆಯನ್ನು ವಿಸ್ತಾರಗೊಳಿಸಬೇಕೆಂದುಕೊಂಡ ಯಾರೋ ಒಬ್ಬರು ನನಗೆ ಗೊತ್ತಿದ್ದರು; ನಾನೊಂದು ಮಾರ್ಗವನ್ನು ಕಂಡುಕೊಂಡಿದ್ದೇನೆ ಎಂದು ಅವರು ಹೇಳಿದ್ದರು. ಅದೇನೆಂದರೆ – ಹೊರಗಡೆ, ರಾತ್ರಿ ವೇಳೆ, ಬೆನ್ನಮೇಲೆ ಮಲಗಿಕೊಂಡು ನಕ್ಷತ್ರಗಳ ಕಡೆಗೆ ನೋಡುವುದು ಮತ್ತು ನಮ್ಮನ್ನು ನಾವು ಅವುಗಳ ಜೊತೆ ಗುರುತಿಸಿಕೊಳ್ಳುವುದು, ಆಳವಾಗಿ ಅಗಾಧವಾದ ಪ್ರಪಂಚದಲ್ಲಿ ಆಳವಾಗಿ ಇಳಿದು ಸಂಪೂರ್ಣವಾಗಿ....... ಭೂಮಿಯ ಕ್ರಮದ ಮತ್ತು ಅದರ ಎಲ್ಲ ಚಿಕ್ಕ ವಿಷಯಗಳ ಎಲ್ಲ ಭಾವವನ್ನು ಕಳೆದುಕೊಳ್ಳುವುದು ಮತ್ತು ಆಕಾಶದಂತೆ ವಿಶಾಲವಾಗುವುದು – ವಿಶ್ವದಂತೆ ವಿಶಾಲ ಎಂದು ನೀವು ಹೇಳಲಿಲ್ಲ. ಏಕೆಂದರೆ, ನಾವು ಅದರ ಚಿಕ್ಕ

ಅಂಶವನ್ನು ಮಾತ್ರ ನೋಡುತ್ತೇವೆ. ಚಿಕ್ಕ ದೋಷಗಳು ಸದ್ಯಕ್ಕೆ ಬಿದ್ದುಹೋಗುತ್ತವೆ ಮತ್ತು ನಾವು ಬಹು ದೊಡ್ಡ ಮಾಪಕದ ಮೇಲೆ ವಿಷಯಗಳನ್ನು ತಿಳಿದುಕೊಳ್ಳುತ್ತೇವೆ. ಅದೊಂದು ಉತ್ತಮ ಪ್ರಯೋಗ.

ಎರಡೂ ಉತ್ತಮವಾದ ಪ್ರಯೋಗಗಳು. ನೀವು ನಿಮ್ಮ ಸಂಗಾತಿಯ ಜೊತೆಗೆ ಮಾತನಾಡುತ್ತ ಹೋಗುತ್ತಿದೀರಿ (ಕೆಳಗೆ ನೋಡದೆ). ಇರುವೆಗಳ ಗುಂಪೊಂದು ಒಂದು ಗೂಡಿನಿಂದ ಇನ್ನೊಂದು ಗೂಡಿಗೆ ಹೋಗುತ್ತಲಿವೆ. ನಿರ್ಲಕ್ಷ್ಯದಿಂದ ನೀವು ನಿಮ್ಮ ಪಾದಗಳನ್ನು ಇರುವೆಗಳ ಮೇಲಿಟ್ಟು ಅವುಗಳನ್ನು ಹೊಸಕಿ ಹಾಕುತ್ತೀರಿ, ಆದರೆ ಅದರ ಅರಿವು ನಿಮಗಿಲ್ಲ. ಒಂದು ವೇಳೆ ನೀವು ಇರುವೆಯಾಗಿದ್ದರೆ: "ಎಂತಹ ದುಷ್ಟ ಮತ್ತು ಮೃಗೀಯ ಶಕ್ತಿ!" ಎಂದು ಹೇಳುತ್ತಿದ್ದಿರಿ. ನೀವು ಸುಮ್ಮನೆ ನಡೆದುಕೊಂಡು ಹೋಗುತ್ತಿದ್ದೀರಿ. ನೀವು ಅದರ ಕಡೆಗೆ ಗಮನವನ್ನು ಹರಿಸಿಲ್ಲ. ಈ ರೀತಿಯ ಜೀವಿಗಳಿದ್ದವು ಎಂದುಕೊಳ್ಳಿ, ಆಗ ನಾವು ಅವುಗಳಿಗೆ ಅತಿ ಚಿಕ್ಕ ಇರುವೆಗಳಾಗಿ ಕಾಣುತ್ತಿದ್ದೆವು. ಆ ಜೀವಿಗಳು ನಮ್ಮ ಮೇಲೆ ತಮ್ಮ ಪಾದಗಳನ್ನು ಇಡುತ್ತಿದ್ದರು, ಆಗ ಲಕ್ಷಾಂತರ ಜನರು ಕೊಲ್ಲಲ್ಪಡುತ್ತಿದ್ದರು. ಆದರೆ, ಈ ಸಂಗತಿ ಆ ಜೀವಿಗಳ ಲಕ್ಷ್ಯಕ್ಕೆ ಬಂದಿಲ್ಲ! ಅವುಗಳು ಈ ಕೃತ್ಯವನ್ನು ಬೇಕು ಅಂತಲೆ ಮಾಡಿಲ್ಲ. ಅವರು ಸುಮ್ಮನೆ ನಡೆದುಕೊಂಡು ಹೋಗುತ್ತಿದ್ದಾರೆ, ಅಷ್ಟೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/151–52 – ಶ್ರೀಮಾತೆ**

**ಪ್ರಕೃತಿಯ ಮಾರ್ಗಗಳು**

"ಉದ್ದೇಶಪೂರ್ವಕ", ಇದು ಮನುಷ್ಯರು ತಿಳಿದುಕೊಂಡ ರೀತಿ/ಮಾರ್ಗ ಅಲ್ಲ. ಆದರೆ, ಇದು ನಿಶ್ಚಿತವಾಗಿಯೂ ನಾವು ಒಂದು ಉದ್ದೇಶದ ಹಾಗೂ ಗುರಿಯ ಕಡೆಗೆ ಹೋಗುತ್ತಿರುವ ಅಭಿವ್ಯಕ್ತಿಯಾಗಿದೆ. ಎಲ್ಲವೂ ಪ್ರಜ್ಞೆಯ ಪ್ರಮಾಣದ ಮೇಲೆ ಅವಲಂಬಿತವಾಗಿದೆ. ಮನುಷ್ಯನಿಗೆ ಇದು ಗೊಂದಲಮಯವೆಂದು ತೋರುವುದರಿಂದ ಅವನು ವಿವರಗಳನ್ನು ಮಾತ್ರ ನೋಡುವುದರಿಂದ ಅವನಿಗೆ ಅದು ಸಮಯದ ಹಾನಿ ಎಂದು ತೋರುತ್ತದೆ. ಯಾಕೆಂದರೆ, ಅವನಿಗೆ ಸಮಯದ ಕಲ್ಪನೆಯು ಅವನ ಪುರುಷನ (ವ್ಯಕ್ತಿಯ) ಅವಧಿಗೆ ಸೀಮಿತವಾಗಿರುತ್ತದೆ. ಆದರೆ, ಪ್ರಕೃತಿ ಮಾತೆಯ ಎದುರಿಗೆ ಅನಂತತೆ

ಇದೆ. ಪ್ರಕೃತಿಯು ಒಂದು ದೊಡ್ಡ ಕಡಾಯಿ ಹೊಂದಿದಂತೆ ಇದ್ದುದರಿಂದ ಹಾನಿ ಮಾಡಲು ಅವಳಿಗೆ ಅದೆಲ್ಲವೂ ಒಂದೇ ಆಗಿದೆ; ಅವಳು ಎಲ್ಲ ವಸ್ತುಗಳನ್ನು ಎಸೆಯುತ್ತಾಳೆ ಮತ್ತು ಅದರ ಮಿಶ್ರಣವನ್ನು ಮಾಡುತ್ತಾಳೆ. ಅದು ಸಫಲವಾಗದಿದ್ದರೆ, ಅವಳು ಇದೆಲ್ಲವನ್ನೂ ಹೊರಗೆ ಎಸೆಯುತ್ತಾಳೆ. ಯಾಕೆಂದರೆ ಅದೇ ವಸ್ತುಗಳನ್ನು ತಿರುಗಿ ತೆಗೆದುಕೊಂಡು ತಾನು ಇನ್ನೊಂದು ಮಿಶ್ರಣವನ್ನು ಮಾಡುತ್ತೇನೆ ಎಂದು ಅವಳಿಗೆ ಗೊತ್ತು. ಅದು ಎಲ್ಲ ಕಾಲಕ್ಕೂ ಉಪಯೋಗದಲ್ಲಿ ಬರುವುದರಿಂದ ಏನನ್ನೂ ಕಳೆದುಕೊಂಡಂತಾಗುವುದಿಲ್ಲ. ಸ್ವರೂಪಗಳು ಮುರಿಯಲ್ಪಡುತ್ತವೆ, ವಸ್ತುಗಳು ಹಿಂಪಡೆಯಲ್ಪಡುತ್ತವೆ ಮತ್ತು ಇದು ಹೀಗೆಯೇ ನಿರಂತರವಾಗಿ ಸಾಗುತ್ತದೆ. ಅದು ರಚಿಸಲ್ಪಡುತ್ತದೆ, ಅದು ಮುರಿಯಲ್ಪಡುತ್ತದೆ, ಅದು ತಿರುವುಮುರುವಾಗಿ ಬದಲಾಗುತ್ತದೆ – ಆ ಕಾರ್ಯ ಅವಳನ್ನು ಸಂತುಷ್ಟಳನ್ನಾಗಿ ಮಾಡುತ್ತಿದ್ದರೆ, ನೂರು–ಸಾವಿರ ಸಲ ಆ ಕಾರ್ಯವನ್ನು ಪ್ರಯತ್ನ ಮಾಡುವುದರಿಂದ ಅದು ಅವಳಿಗೆ ಹೇಗೆ ಹಾನಿ ಮಾಡಬಹುದು! ಅವಳ ಕಾರ್ಯ ಒಂದನ್ನು ಬಿಟ್ಟು ಅಲ್ಲಿ ಹಾಳಾಗುವುದು ಏನೂ ಇಲ್ಲ. ಆದರೆ ಅವಳ ಕಾರ್ಯವೇ ಅವಳ ಆನಂದ. ಆ ಕಾರ್ಯವಿಲ್ಲದಿದ್ದರೆ ಅವಳ ಇರುವಿಕೆ ಇಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/342–43**

**ಶಕ್ತಿಗಳು ಮತ್ತು ಅಸ್ತಿತ್ವಗಳು**

ಉದಾಹರಣೆಗಾಗಿ, ಬೀಸುವ ಗಾಳಿಯನ್ನು ತೆಗೆದುಕೊಳ್ಳಿ; "ಈ ಅಭಿವ್ಯಕ್ತಿಗಳು ಪ್ರಕೃತಿಯ ಶಕ್ತಿಗಳಾಗಿವೆ, ಇದು ಕೆಲವು ವಿದ್ಯಮಾನಗಳ ಪರಿಣಾಮವಾಗಿದೆ," ಎಂದು ನಿಮಗೆ ವಿಜ್ಞಾನಿಗಳು ಹೇಳುತ್ತಾರೆ, ಅವರು ಶಾಖ ಮತ್ತು ತಂಪಿನ ಬಗ್ಗೆ, ಗರಿಷ್ಠ ಹಾಗೂ ಕನಿಷ್ಠಗಳ ಬಗ್ಗೆ ಮಾತನಾಡುತ್ತಾರೆ. ಅವರು ಹೇಳುತ್ತಾರೆ: "ಶಾಖ, ತಂಪು, ಗರಿಷ್ಠ ಮತ್ತು ಕನಿಷ್ಠಗಳು ಗಾಳಿ ಬೀಸಲು ಕಾರಣಗಳಾಗಿವೆ, ಇವುಗಳು ವಾತಾವರಣದಲ್ಲಿ ಉತ್ಪನ್ನವಾಗುವ ಪ್ರವಾಹಗಳಾಗಿವೆ." ಆದರೆ ಅದು ಹಾಗಲ್ಲ. ಅದರ ಹಿಂದುಗಡೆ ಅಸ್ತಿತ್ವಗಳಿವೆ, ಅವು ಎಷ್ಟು ಬೃಹತ್ತಾಗಿವೆ ಎಂದರೆ, ಅವುಗಳ ಸ್ವರೂಪ ನಮ್ಮನ್ನು ಮೋಸಮಾಡುತ್ತದೆ. ಅದು, ಒಂದು ಅಸ್ತಿತ್ವವನ್ನು ಒಬ್ಬ ಮನುಷ್ಯನ ರೂಪವನ್ನು ವರ್ಣಿಸು ಎಂದು ಕೇಳಿದಂತೆ – ಅದು ಮಾಡಲಾರದು,

ಅದು ಮಾಡುತ್ತದೆಯೆ? ಹೆಚ್ಚೆಂದರೆ, ಸಣ್ಣ ಬೆರಳಿನ ಚಿಕ್ಕ ತುದಿಯನ್ನು ಅದು ನೋಡುತ್ತದೆ ಮತ್ತು ಅದು ಪಾದದ ಮೇಲೆ ನಡೆದು ಹೋಗುತ್ತದೆ – ಅದೊಂದು ದೊಡ್ಡ ಯಾತ್ರೆ, ಮನುಷ್ಯನ ರೂಪ ಹೇಗಿದೆ ಎಂದು ಅದಕ್ಕೆ ಗೊತ್ತಾಗದು. ಗಾಳಿ, ಮಳೆ, ಭೂಕಂಪನಗಳು ಇತ್ಯಾದಿಗಳನ್ನು ತರುವಂಥ ಈ ಶಕ್ತಿಗಳು ಸೂಚಕಗಳ (ಸನ್ನೆಗಳ) – ಅಸಾಧಾರಣವಾದ ಕೆಲವು ಪ್ರಾಣಿಗಳ (ಜೀವಿಗಳ), (ಅವುಗಳ ಪಾದದ ಕೊನೆಯನ್ನು ನೋಡಲು ಮತ್ತು ಅವುಗಳ ಅಳತೆಯನ್ನು ಅರಿತುಕೊಳ್ಳುವುದು ನಮಗೆ ಕಷ್ಟ) ಚಲನೆಗಳ ಅಭಿವ್ಯಕ್ತಿಗಳು ಎಂದು ಹೇಳಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/383**

ಮೋಡಗಳಲ್ಲಿ, ಗಾಳಿಯಲ್ಲಿ ಸ್ವಚ್ಛ ಘಟಕಗಳಿರುವುದು ನಿಮಗೆ ಗೊತ್ತು. ಈ ಘಟಕಗಳು ಪ್ರಾಣದ ಕ್ಷೇತ್ರಕ್ಕೆ ಸಂಬಂಧಪಟ್ಟಿವೆ; ಅವೆಲ್ಲವೂ ಕೆಟ್ಟವುಗಳಲ್ಲ, ಆದರೆ ಆಗಾಗ ಅವು ಬಹಳೇ ಕಿಡಿಗೇಡಿಗಳಾಗಿರುತ್ತವೆ. ಬಹಳಷ್ಟು ಸಲ ಅವುಗಳು ಒಂದು ಅಗಾಧ ಮತ್ತು ಹೆಚ್ಚು ಸಾಮಾನ್ಯ ಶ್ರೇಣಿಯ ಪ್ರಕೃತಿಯ ನಿಯಮಗಳನ್ನು ಪಾಲಿಸುತ್ತವೆ. ಆದರೆ, ಇವುಗಳಲ್ಲಿ ಕೆಲವುಗಳು ಅರ್ಧ–ಸ್ವತಂತ್ರವಾಗಿರುತ್ತವೆ ಮತ್ತು ಸ್ಥಳೀಯವಾಗಿ ಮಳೆಯನ್ನು ತರುತ್ತವೆ. "ನಿಮ್ಮನ್ನು ವಿನಂತಿಸುತ್ತೇವೆ, ಸ್ವಲ್ಪ ದಯಾಪರವಾಗಿರಿ, ನಾಳೆ ನಮ್ಮದೊಂದು ಉದ್ಘಾಟನೆ ಇದೆ, ಕಿರಿಕಿರಿ ಮಾಡಬೇಡಿ, ಮಳೆಯನ್ನು ಬರಿಸುವುದೇ ಇದ್ದರೆ ಸಾಯಂಕಾಲದವರೆಗೆ ತಡೆಯಿರಿ, ನಮ್ಮ ಚಿಕ್ಕ ಸಭೆಯನ್ನು ಹಾಳುಮಾಡಲು ಬರಬೇಡಿ" ಎಂದು ಅವುಗಳಿಗೆ ಹೇಳಿದರೆ ಪ್ರಾಯಶಃ ಸ್ವಲ್ಪ ಪರಿಣಾಮವಾದೀತು (ಇವುಗಳು ಪ್ರಾರ್ಥನೆಯನ್ನು ಇಷ್ಟಪಡುತ್ತವೆ)!

ಮಳೆ ಬಾರದಿದ್ದಾಗ, ನಾವು ಪ್ರಾರ್ಥನೆ ಮಾಡಿದರೆ, ನಾವು ಮಳೆಯನ್ನು ಬರಿಸಬಹುದು ಎಂದು ಜನರು ಹೇಳಿದ್ದು ನಿಮಗೆ ನೆನಪಿದೆಯಾ? ಆ ರೀತಿ ಪ್ರಯತ್ನಿಸಿದಾಗ ಎಂತಹ ಹಿತವಾದ ಸಮಯವಿತ್ತು – ಮಳೆಯನ್ನು ಕೂಗಿದಾಗ ಅದು ಬರುತ್ತಿತ್ತು. ಆ ಮೇಲೆ ನಿಜವಾಗಿಯೂ ಮಳೆ ಬರುತ್ತಿತ್ತು. ಅದು ಹೀಗೆ ಸಂಭವಿಸುತ್ತಿತ್ತು. ಈ ಕ್ಷೇತ್ರವು ಪ್ರಾಣದ್ದಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/201**

## ಪ್ರಕೃತಿಯು ಭವಿಷ್ಯವನ್ನು ದರ್ಶಿಸುತ್ತದೆ

ಪ್ರಕೃತಿಯು ಸಾಕಷ್ಟು ಮುಂಗಾಣುತ್ತಿರುತ್ತದೆ (ಭವಿಷ್ಯವನ್ನು ದರ್ಶಿಸುತ್ತದೆ), ಅವಳು ಪ್ರತಿ ಹವಾಗುಣಕ್ಕೆ ಸರಿಯಾದುದನ್ನೇ ಉಂಟುಮಾಡುತ್ತಾಳೆ. ಮನುಷ್ಯನನ್ನು ಕೇಂದ್ರ ಸ್ಥಾನದಲ್ಲಿ ಇರಿಸಬಾರದು ಮತ್ತು ಪ್ರಕೃತಿಯು ಇದನ್ನು ಮನುಷ್ಯನ ಒಳಿತಿಗಾಗಿ ಮಾಡಿದ್ದಾಳೆ ಎಂದು ಹೇಳುವುದು ಸರಿಯಾದ ಸಂಗತಿ ಎಂದು ನನ್ನ ಭಾವನೆಯಲ್ಲ. ಏಕೆಂದರೆ, ಮನುಷ್ಯ ಭೂಮಿಯ ಮೇಲೆ ಕಾಣಿಸಿಕೊಳ್ಳುವ ಬಹಳ ಹಿಂದೆಯೆ ಪ್ರಕೃತಿಯು ಇದನ್ನು ಅನ್ವೇಷಿಸಿದ್ದಳು. ಆದರೆ, ಇದು ಒಂದು ದೇಶದ ಹವಾಮಾನ ಪರಿಸ್ಥಿತಿಗಳ ಮತ್ತು ಅದರ ಉತ್ಪತ್ತಿಯ ನಡುವೆ ಬೆಳೆಯುವಂಥ ಒಂದು ರೀತಿಯ ಸಾಮರಸ್ಯ. ಪ್ರಾಣಿಗಳ ಗಾತ್ರ ಮತ್ತು ಅವು ವಾಸಿಸುವ ದೇಶದ ವಿಶಾಲತೆಗಳ ಮಧ್ಯೆ ಸಾಮರಸ್ಯವಿರುವುದು ನಮಗೆ ಗೊತ್ತು. ಉದಾಹರಣೆಗಾಗಿ, ಭಾರತದ ಆನೆಗಳ ಗಾತ್ರ ಆಫ್ರಿಕಾದ ಆನೆಗಳ ಗಾತ್ರಕ್ಕಿಂತ ಚಿಕ್ಕದು. ಆಫ್ರಿಕಾದಲ್ಲಿ ಅಧಿಕ ಸ್ಥಳವಿರುವುದೇ ಇದಕ್ಕೆ ಕಾರಣ ಎಂದು ಹೇಳಲಾಗುತ್ತದೆ. ಆದ್ದರಿಂದ ಪ್ರಾಣಿಗಳ ಗಾತ್ರ ಅಲ್ಲಿ ಬಹಳ ದೊಡ್ಡದಿರುತ್ತದೆ.

ಸೃಷ್ಟಿಯಲ್ಲಿ ಸ್ಥಾಪಿತವಾದ ಸಾಮರಸ್ಯ ಇದಾಗಿದೆ. ದೇಶಗಳು ಚಿಕ್ಕದಾಗುತ್ತ ಹೋದಂತೆ, ಪ್ರಾಣಿಗಳು ವಾಸಿಸುವ ಪ್ರದೇಶಗಳು ಚಿಕ್ಕದಾಗುತ್ತ ಹೋಗುತ್ತವೆ. ಯಾವಾಗ ಬಯಲು ಪ್ರದೇಶಗಳ ಗಾತ್ರ ಮತ್ತು ಅಲ್ಲಿ ವಾಸಿಸುವ ಪ್ರಾಣಿಯ ಗಾತ್ರದ ನಡುವೆ ಯೋಗ್ಯವಾದ ಪರಿಮಾಣ ಉಳಿಯುವದಿಲ್ಲವೊ, ಅವು (ಪ್ರಾಣಿಗಳು) ಕಣ್ಮರೆಯಾಗುವವರೆಗೆ ಚಿಕ್ಕದಾಗುತ್ತ ಹೋಗುತ್ತವೆ. ಬಹಳಷ್ಟು ಮನೆಗಳನ್ನು ನಾವು ನಿರ್ಮಿಸಿದರೆ, ಯಾವುದೇ ಕರಡಿಗಳು ಮತ್ತು ತೋಳಗಳು ಅಲ್ಲಿರುವುದಿಲ್ಲ; ಸ್ವಾಭಾವಿಕವಾಗಿಯೇ ಮೊದಲು ಸಿಂಹಗಳು ಹಾಗೂ ಹುಲಿಗಳು ಮಾಯವಾಗುತ್ತವೆ, ಆದರೆ ಮನುಷ್ಯರು ಏನೋ ಮಾಡಿದ್ದಾರೆಂದು ನನ್ನ ನಂಬಿಕೆ... ಭಯವು ಅವುಗಳನ್ನು ವಿನಾಶಕಾರಿಗಳನ್ನಾಗಿ ಮಾಡುತ್ತದೆ. ಆದರೆ, ಮನುಷ್ಯರ ಜನ ಸಂಖ್ಯೆ ಹೆಚ್ಚಿಗೆ ಬೆಳೆದಂತೆಲ್ಲ ಸ್ಥಳಾವಕಾಶ ಕಡಿಮೆಯಾಗುತ್ತ ಹೋಗುತ್ತದೆ, ಅಂತೆಯೆ ಪ್ರಾಣಿಗಳ ಗಾತ್ರವೂ ಸಣ್ಣದಾಗುತ್ತ ಹೋಗುತ್ತದೆ. ಆಗ ನಾವು ನಿಯಮಗಳನ್ನು ಮಾಡಲು ಹೇಗೆ ಸಾಧ್ಯ?

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/53–54**

## ಪ್ರಕೃತಿಯ ತೆರೆಗಳು

ಪ್ರಕೃತಿಯಲ್ಲಿ ಸಂಗತಿಗಳು ಯಾವಾಗಲೂ ಕೆಟ್ಟದಾಗಿ ಕೊನೆಗೊಳ್ಳುತ್ತವೆ ಎಂದು ಸಾಮಾನ್ಯವಾಗಿ ನಂಬಲಾಗಿತ್ತು. ತಮ್ಮ ಜೀವನದಲ್ಲಿ ದೊಡ್ಡ ಯಶಸ್ಸನ್ನು ಆನಂದಿಸಿದ ತರುವಾಯದಲ್ಲಿ ಅವರು ಪ್ರಲಾಪದ ಕೊನೆಯನ್ನು ಕಂಡ ಕಥೆ ಎಲ್ಲರಿಗೂ ಗೊತ್ತಿದೆ; ಅಸಾಧಾರಣ ಸಾಮರ್ಥ್ಯಗಳನ್ನು ಹೊಂದಿ ಕೊನೆಯಲ್ಲಿ ಅವುಗಳನ್ನು ಕೆಳೆದುಕೊಂಡವರ ಕಥೆ ಎಲ್ಲರಗೂ ತಿಳಿದಿದೆ; ದೀರ್ಘಾವಧಿಯವರೆಗೆ ಒಂದು ಅದ್ಭುತ ನಾಗರೀಕತೆಯ ಮಾದರಿಯಾಗಿದ್ದ ಒಂದು ದೇಶದ ಕಥೆ ಎಲ್ಲರಿಗೂ ತಿಳಿದಿದೆ – ನಾಗರೀಕತೆಯು ಮಾಯವಾಗುತ್ತದೆ ಮತ್ತು ರಾಷ್ಟ್ರವು ಏನಾಗಿತ್ತು ಎಂದು ಯಾರೂ ಸ್ಮರಿಸಲೂ ಆಗದಂಥ ಪ್ರಲಾಪಿಸುವ ದೇಶವಾಗಿ ಬದಲಾಗುತ್ತದೆ. ಭೂಮಿಯ ಕಥೆಯು ವಿಜಯಗಾಥೆಗಳನ್ನು ಅನುಸರಿಸುವ ಅಪಜಯಗಳ ಕಥೆಯಾಗಿದೆ ಎಂದು ತೋರುತ್ತದೆ. ಆದರೆ ಅಪಜಯಗಳನ್ನು ಅನುಸರಿಸಿ ಬರುವ ಜಯಗಳ ಕಥೆಯಲ್ಲ.

ವಾಸ್ತವದಲ್ಲಿ, ವಿಶ್ವಾತ್ಮಕದ ಮತ್ತು ದೈವೀ ಸಂಗತಿಗಳ ಪ್ರಶ್ನೆ ಬಂದಾಗ, ವಿಶ್ವಾತ್ಮಕ ದೂರದೃಷ್ಟಿ ಮತ್ತು ಸತ್ಯವು ತನ್ನನ್ನು ತಾನು ಹೇಗೆ ಅಭಿವ್ಯಕ್ತಪಡಿಸಿಕೊಳ್ಳುತ್ತದೆ ಎಂದು ತಿಳಿದುಕೊಳ್ಳುವ ಸಲುವಾಗಿ ದೈವೀ ಸಂತಿಗಳ ತಿಳುವಳಿಕೆಯು ಬೇಕಾಗುತ್ತದೆ. ಒಮ್ಮೆ ಸಂಗತಿಗಳು ಉತ್ತಮವಾಗಿ ಆರಂಭವಾದರೂ ಅವು ಕೆಟ್ಟದಾಗಿ ಕೊನೆಯಾಗುತ್ತವೆ, ಅಂದರೆ ದುರ್ಬಲತೆಯ, ಕಪಟತೆಯ, ಅಸತ್ಯದ ಮತ್ತು ಕು–ಬುದ್ಧಿಯ ಕೈ ಯಾವಾಗಲೂ ಮೇಲಾಗುತ್ತದೆ. ಆದುದರಿಂದ ಜಗತ್ತನ್ನು ತಮ್ಮ ಸ್ವ–ವಯಕ್ತಿಕ ಆಯಾಮದಿಂದ ನೋಡುವವರು ಜಗತ್ತು ಕೆಟ್ಟದಾಗಿದೆ, ನಾವು ಅದರೊಂದಿಗೆ ಮಾತ್ರ ಮುಕ್ತಾಯಗೊಳಿಸಬೇಕು ಮತ್ತು ಸಾಧ್ಯವಾದಷ್ಟು ಬೇಗ ಅದರಿಂದ ಹೊರಬರಬೇಕು ಎಂದು ಹೇಳಿದ್ದಾರೆ. ಶಿಕ್ಷಕರು ಇದನ್ನು ಬೋಧನೆ ಮಾಡಿದ್ದಾರೆ, ಆದರೆ ಅವರ ಪಾಠಗಳು ಅವರ ದೂರದೃಷ್ಟಿ ತುಂಬಾ ಸಂಕುಚಿತವಾದದ್ದು ಮತ್ತು ಅವರ ವ್ಯಕ್ತಿಗತ ಆಯಾಮದಲ್ಲಿ ಎನ್ನುವುದನ್ನು ಮಾತ್ರ ಸಾಧಿಸುತ್ತದೆ.

ಸತ್ಯವೇನೆಂದರೆ, ಪ್ರಕೃತಿಯ ಆಂದೋಲನಗಳು ತೆರೆಗಳ ಚಲನೆಗಳಿದ್ದಂತೆ; ಅವು ಮುನ್ನುಗ್ಗುತ್ತವೆ, ಹಿಂದೆ ಸರಿಯುತ್ತವೆ, ಮುಂದೆ ಮತ್ತು ಹಿಂದೆ ಚಲಿಸುತ್ತವೆ;

ವಿಶ್ವ ಜೀವನದಲ್ಲಿ ಮತ್ತು ಭೂ–ಜೀವನದಲ್ಲಿಯೂ ಸಹ ಇದು ಪ್ರಗತಿಯ ಮುನ್ನಡೆ ಎಂದು ಅರ್ಥ (ಇದು ಮೇಲ್ನೋಟಕ್ಕೆ ಹಿಂದೆಗೆತಗಳಿಂದ ಕತ್ತರಿಸಲ್ಪಟ್ಟಿದ್ದರೂ). ಆದರೆ, ಈ ಹಿಂದೆಗೆತಗಳು ಕೇವಲ ಒಂದು ತೋರಿಕೆ ಮಾತ್ರ (ಮುನ್ನೆಗೆಯಲು ಒಬ್ಬರು ಹಿಂದೆ ಸರಿದಂತೆ). ನೀವು ಹಿಂದೆ ಸರಿದಂತೆ ಕಂಡರೂ, ಅದು ಬಹಳ ಮುಂದೆ ಹೋಗಲಿಕ್ಕಾಗಿ ಎಂದು ತಿಳಿಯಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/22–23**

## ಪ್ರಕೃತಿಯೊಂದಿಗೆ ಸಂವಹನ ಮಾಡುವುದು

ನಾವು ಪ್ರಕೃತಿಯೊಂದಿಗೆ ಸಂವಹನ ಮಾಡಲು ಸಾಧ್ಯವಾದರೆ, ಬಹಳ ಉಪಯುಕ್ತವಾದ ಜೀವನದ ಕೆಲವು ರಹಸ್ಯಗಳನ್ನು ಕಲಿತುಕೊಳ್ಳಬಹುದು. ನಾವು ಮುಂಚಿತವಾಗಿಯೇ ಪೀಡೆಗಳನ್ನು ಕಂಡುಕೊಳ್ಳಬಹುದು ಮತ್ತು ಅವುಗಳನ್ನು ನಿಯಂತ್ರಿಸಲೂಬಹುದು ಅಥವಾ ವಿಪ್ಲವಗಳನ್ನು ಮತ್ತು ಪ್ರಕೃತಿಯ ನಾಶವನ್ನು ತಡೆಯಬಹುದು. ಆದ್ದರಿಂದ, ಹಲವು ಲಾಭಗಳಿರುವುದನ್ನು ನೀವು ನೋಡಬಹುದು.

ಸಂವಹನ ಮಾಡುವುದೆಂದರೆ, ಇಡೀ ಅಸ್ತಿತ್ವದಲ್ಲಿ ನೆಲೆಸಿರುವ ಸಾಮರಸ್ಯದ ಆನಂದದಲ್ಲಿ ತಿಳುವಳಿಕೆಯನ್ನು ಕಂಡುಹಿಡಿಯುವುದು ಮತ್ತು ಅದರ ಪ್ರಜ್ಞೆಯಲ್ಲಿ ಕಂಪಿಸುವುದು. ಇದೊಂದು ಅರ್ಹ ಶೋಧನೆಯಾಗಿದೆ. ಇದು ಜೀವಮಾನದ ಕಾರ್ಯವಾಗಿದೆ.

ಈ ಪ್ರಜ್ಞೆಯನ್ನು ಕಂಡುಕೊಳ್ಳಿ ಮತ್ತು ಸೂಕ್ಷ್ಮ ಜಗತ್ತಿನೊಂದಿಗೆ ಸಂವಹನ ಮಾಡುವ ಆನಂದವನ್ನು ಹೊಂದಿರಿ. ಶಾಂತತೆಯಲ್ಲಿ ನಾವು ಸಂವಹನ ಮಾಡಬಹುದು ಮತ್ತು ಒಂದು ರೀತಿಯ ಸೂಕ್ಷ್ಮ ವಿನಿಮಯದಿಂದ ನಮ್ಮನ್ನು ನಾವು ಅಭಿವ್ಯಕ್ತಗೊಳಿಸಬಹುದು. ಅದು ಶಬ್ದಗಳಲ್ಲಿ ಭಾಷಾಂತರ ಮಾಡಲಾಗದ ಒಂದು ಸಂಪೂರ್ಣವಾದ ಭಿನ್ನವಾದ ಭಾಷೆಯಾಗಿದೆ. ಆದರೆ ನಮ್ಮ ಭಾಷೆಗಿಂತ ಅದು ಲಘುವಾಗಿದೆ ಮತ್ತು ನಿಖರ ಅಭಿವ್ಯಕ್ತಿಯಾಗಿದೆ...

**– ಪ್ರಕೃತಿಯ ಸ್ಪಂದನ, ಪು. 4**

ಪ್ರಕೃತಿಯು ರಚನೆಯ ಜೊತೆ (ವಿಶೇಷವಾಗಿ ಭೂಮಿಯ ರಚನೆ) ಸಂಬಂಧ ಹೊಂದಿದಂಥ ಸೃಜನಾತ್ಮಕ ಶಕ್ತಿಯು, ನಮಗೆ ಗೊತ್ತಿದ್ದಂತೆ ಪ್ರಾಪಂಚಿಕ ಜಗತ್ತಿನ ಭೌತಿಕ ಭಾಗವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/160–61 –ಶ್ರೀಮಾತೆ**

**ತನ್ನನ್ನು ತಾನು ಪ್ರಕೃತಿಗೆ ಪರಿತ್ಯಜಿಸಿಕೊಳ್ಳುವುದು**

...ನಮ್ಮನ್ನು ನಾವು ಪ್ರಕೃತಿಗೆ ಸಂಪೂರ್ಣವಾಗಿ ಪರಿತ್ಯಜಿಸಿಕೊಳ್ಳಲು ಗೊತ್ತಿದ್ದರೆ, ಪ್ರಕೃತಿಯ ಕಾರ್ಯವನ್ನು ವಿರೋಧಿಸದಿದ್ದರೆ, ನಾವು ಎಂದಿಗೂ ಬೇನೆ ಬೀಳುವುದಿಲ್ಲ. ಪ್ರಕೃತಿಗೆ ತನ್ನದೇ ಆದ ಸಾಧನಗಳಿವೆ, ಭಯದಿಂದ ಅಥವಾ ಆಕುಂಚನದಿಂದ ನಾವು ಹಸ್ತಕ್ಷೇಪ ಮಾಡದಿದ್ದರೆ, ಪ್ರಕೃತಿ ಮಾತೆಯು ಆಶ್ಚರ್ಯಕರ ರೀತಿಯಲ್ಲಿ ಬೇಗನೆ ಗುಣಮುಖ ಮಾಡುತ್ತಾಳೆ. ಅವಳ ಲಯದಲ್ಲಿ ಹೇಗೆ ನಡೆಯಬೇಕೆಂದು ಗೊತ್ತಿರಬೇಕು; ಆಗ ಅವಳು ನಿಮ್ಮನ್ನು ಗಂಡಾಂತರಗಳಿಂದ ಎಚ್ಚರಿಕೆಯಿಂದ ಪಾರು ಮಾಡುತ್ತಾಳೆ.

ಪ್ರವಾಹದಲ್ಲಿ ಈಜುವುದನ್ನು ನಾವು ಕಲಿತುಕೊಳ್ಳಬೇಕು – ತೆರೆಗಳು ನಿಮ್ಮನ್ನು ಸೇರಿಸಬೇಕಾದ ಸ್ಥಳಕ್ಕೆ ನಾಜೂಕಾಗಿ ಸೇರಿಸುತ್ತವೆ.

...ನಮ್ಮನ್ನು ನಾವು ತೊರೆಯಬೇಕಾದರೆ, ಅವಳ ಕರಗಳಲ್ಲಿ ತೊರೆಯಲು, ತೆರೆಯ ಜೊತೆ ಹೋಗಲು..., ಕಷ್ಟಗಳು ಮತ್ತು ಅಪಾಯಗಳು ಪೂರ್ಣವಾಗಿ ಮಾಯವಾಗುತ್ತವೆ. ಅದು ಹೇಗೆಂದರೆ, ತನ್ನನ್ನು ತಾನು ಪರಿತ್ಯಜಿಸಿದಂತೆ – ಪೂರ್ಣವಾಗಿ ಮುಕ್ತ – ತೇಲಿದಂತೆ...

ಈ ಭಂಗಿಯಲ್ಲಿ (ಸನ್ನೆ) ಈ ರೀತಿ, ಆಕಾಶದೆಡೆಗೆ ನೋಡುತ್ತ, ಕತ್ತಲೆಯೆಡೆಗೆ ನೋಡುತ್ತ, ಜಲದ ಅಂಧಕಾರದಲ್ಲಿ ಅಲ್ಲ, ಮಾರ್ಗದರ್ಶನ ಪಡೆಯಲು ನಾವು ಅವಳ ಕರಗಳಲ್ಲಿ ಸ್ವಯಂ ಆಗಿ ಪರಿತ್ಯಜಿಸಬೇಕು...

ನಾವು ಇದನ್ನು ಮಾಡಿದಾಗ, ಯಾವ ನೋವೂ ನಮ್ಮನ್ನು ಸ್ಪರ್ಶಿಸಲಾರದು.

**– ಪ್ರಕೃತಿಯ ಸ್ಪಂದನ, ಪು. 139**

# ಪ್ರಕೃತಿಯ ಅವಸ್ಥೆಗಳು

**– ಅನುವಾದ: ಪುಟ್ಟು ಕುಲಕರ್ಣಿ**

**ಅಣುವಿನ ಅಂತರಾಳ**

ಯಾವುದು ಕಂಪನದ ಮೂಲಕ ಜಾಗರಣಗೊಳ್ಳುವದೋ, ಆ ಜ್ಯೋತಿಯನ್ನೇ, – ಅದೂ ಒಂದು ಸ್ಪಂದನದ ಸ್ವರೂಪದಲ್ಲಿಯೇ ಘಟಿಸುತ್ತಾ, ಈ ಆಂತರ್ಯದಲ್ಲಿ ದಟ್ಟೈಸಿಕೊಳ್ಳುತ್ತಲೇ ಅಚಿತ್‌ನ ದ್ರವ್ಯರಾಶಿಯಲ್ಲಿ ಬಂಧನದ ಸ್ಥಿತಿಯಲ್ಲಿ ಸುರುಳಿ–ಸುರುಳಿಯಲ್ಲಿ ಇರುವ ನಿಶ್ಚಲದ ಬಲಗಳ(ಶಕ್ತಿಗಳ)ಲ್ಲಿ, ಜೊತೆಗೆ ಅಜ್ಞಾನದ ಶಾಶ್ವತ – ಅಸ್ಪಷ್ಟತೆಯಲ್ಲಿ ಇರುವದೋ, – ಆ ಪರಮಾಣುವಿನ ಅಂತರಾಳದಲ್ಲಿರುವ ಗರ್ಭದಾಳದಿಂದಲೇ, ನಾನು ಈ ಅಗ್ನಿಜ್ವಾಲೆಯನ್ನು ಪ್ರಜ್ವಲನಗೊಳಿಸಿದ್ದೇನೆ. ಯಾವಾಗ ಸರ್ವಸ್ವವೂ ನಿಶ್ಶೂನ್ಯವಾಗಿದ್ದ ಸ್ಥಿತಿಯಲ್ಲಿ ಇತ್ತೋ, ಆಗ ಇಲ್ಲಿ ಒಂದು ಜಗತ್ತು ಆವಿಷ್ಕಾರಗೊಳ್ಳುತ್ತದೆ. ಜಡದ ಈ ರೀತಿಯ ಅಂಧ–ಕ್ಷೇತ್ರಗಳಲ್ಲಿ ಅದು ನಿಷ್ಕ್ರಿಯವಾಗಿ ಮತ್ತು ಮೂಕವಾಗಿತ್ತು. ಜೀವವಿಲ್ಲದೇ ದೀರ್ಘಾತಿದೀರ್ಘವಾಗಿರುವ ಜೋಮಿನಲ್ಲಿತ್ತು. ಅಂತಹ ಸ್ಥಿತಿಯಲ್ಲಿ, ಆ ಪರಮೋಚ್ಚ ಕೃತುವಿನಿಂದ ಅಲ್ಲೊಂದು ಸ್ಪಂದನವು ಉಗಮಿಸಿ ಹೊರಹೊಮ್ಮಿ, ಜೊತೆಗೆ ಜಡವನ್ನೂ ಕಂಪನಕ್ಕೆ ಒಳಪಡಿಸಿತು. ಭಾವೋತ್ಕರ್ಷತೆಯಲ್ಲಿ ಜಾಗರಣಗೊಳಿಸಿತು.

**– ಮೋನಾ ಸರ್ಕಾರ "ಪರಾ"; ಪುಟ 64**

ಈ ಅಣುವಿನಲ್ಲಿರುವ ಪರಮಾಣು ಕಣಗಳು ಅದು ಹೇಗೆ ಈ ರೀತಿಯಲ್ಲಿ ನಂಬಲಸಾಧ್ಯವಾಗಿರುವ ವೇಗದಲ್ಲಿ ನೃತ್ಯಗೈಯುತ್ತಿವೆ ಜೊತೆಗೆ ಲೀಲೆಗೆಳಸುತ್ತಿವೆ?

**– ದಯಾಳುವಿನ ಕೃಪೆ; ಪುಟ 81–82**

**ಭವ ಸಾಗರ**

ಓ ಧೂಸರದ ರಂಗಿನಾಗರದ ಭವದ ಸಾಗರವೇ, ಸಿಡಿಲಿನಬ್ಬರದಲ್ಲಿ, ಸಂದೇಶವೊಂದ ಹೊಂದಿರುವೆ ಈಗ, ನನಗೆ. ಅವುಗಳ ಆ ಸುವಿಶಾಲ ಬೆನ್ನಿನಾಧಾರದಲ್ಲಿ ರಕ್ಕಸನ ಅಕ್ಕಸದ ಬೃಹದ್ದೆರೆಗಳಲಿ ಉಕ್ಕಿ, ನುಗ್ಗಿ, ಮಧ್ಯದಲಿ ಪ್ರಪಾತವನು ನಿರ್ಮಿಸುತ್ತ ಸಾಗಿರುವೆ. ನಮ್ಮದೋ ಇವುಗಳೆದೆ ಮೇಲೆ ದುರ್ಬಲದ ನಾವೆ, ತಲ್ಲಣದಿ

ಸಿಲುಕಿದೆ. ನಾನೀಗ ಆಲಿಸುತಿಹೆ ನಿನ್ನ ಅಬ್ಬರವ ಅದರ ಮೂಲಕವೇ ನನಗೆ ಕರೆಯ ಕೊಡು ಏಕಿಂತು ಜಂಜಡದಿ ಕಾಲ ಕಳೆವೆ? ಏಕಿಂತು ದಂಡೆ ಮೇಲೆಯೇ ಭಯದಿ ಕಣ್ಣು ಬಿಡುತಿರುವೆ? ಕಾಣು ನೀ ನನ್ನ ಈ ಔನ್ನತ್ಯವನು, ನನ್ನ ಉಕ್ಕುಗಳು ಬುರುಗು–ಬುರುಗುಗಳಾಗಿ ಆಗಸವನ್ನೂ ಶುಭ್ರಗೊಳಿಸಿವೆ.

ನನ್ನ ಅಬ್ಬರದ ಉಕ್ಕುಬ್ಬರದ ತೆರೆಗಳ ಆರ್ಭಟಕ್ಕೆ ನಿನ್ನ ನೌಕೆ ತೇಲುತಿರಲಿ, ಒಂದಾನೊಂದು ವೇಳೆ ಅಲ್ಲಿ ಸಾವೇ ಪ್ರತ್ಯಕ್ಷವಾದರೂ ಏಕೆ ಚಿಂತಿಸುತ್ತೀಯಾ? ಈಗಾಗಲೇ ಈ ಪಥದಲ್ಲಿ ಅದೆಷ್ಟೋ ಪಯಣಿಗರು ಚಲಿಸಿ ಪಥವನ್ನು ನಿಮಿಸಿಲ್ಲವೇ? ನನ್ನ ಈ ಅಬ್ಬರವನ್ನು ಎದುರಿಸು, ಏಕೆ ಹೇಡಿಯಂತೆ ದಂಡೆಯ ಮೇಲೆಯೇ ಅಡಗಿಕೊಳ್ಳುವೆ? ಬಾ, ಸಮುದ್ರದಲ್ಲಿ ಇಳಿದು ಬಾ, ತೇಲಲೆಂದೇ ಇಳಿದು ಬಾ, ಅರಿತುಕೊಳ್ಳಲೆಂದೇ ಇಳಿದು ಬಾ, ಸವಾಲೊಡ್ಡಿ ಎದುರಾಗುವ ಎಲ್ಲ ಅಪಾಯಗಳೂ ನಂತರದಲ್ಲಿ ಸಂತೋಷದಾಯಕವಾಗಿರುವ ಫಲಿತಾಂಶವನ್ನೇ ನೀಡಿವೆ.

**– ಶ್ರೀ ಅರವಿಂದರ ಸಮಗ್ರ ಸಂಪುಟ 2;207–8 ರ ಸಾಲುಗಳು**

**ಕಾಯುವದರಲ್ಲಿದೆ ಸೌಂದರ್ಯ**

ಸಮುದ್ರದಲ್ಲಿ ಕೆಲವೊಮ್ಮೆ ಪ್ರಶಾಂತವಾಗಿರುವ ತರಂಗಗಳಾಗಿರುವ ತೆರೆಗಳನ್ನು ಕಂಡರೆ, ಒಮ್ಮೊಮ್ಮೆ ಅಬ್ಬರದ ಉಕ್ಕಿನಲ್ಲಿ ಆರ್ಭಟದಲ್ಲಿ ಭೋರ್ಗರೆವ ತೆರೆಗಳನ್ನು ಕಾಣುತ್ತೇವೆ. ಇಂತಹ ಏರಿಳಿತಗಳು ಸಾಮಾನ್ಯ ಸಂಗತಿಗಳೇ ಅಗಿವೆ. ಯಾವಾಗಲೂ ಏರು–ಪೇರುನಲ್ಲಿಯೇ ಇರುತ್ತದೆ. ಇಲ್ಲಿಂದ ಉಗಮಿಸುವ ಮೇಘಗಳೂ ಸಹಿತ ಊಹಾತೀತವಾಗಿರುವ ಆಕಾರಗಳನ್ನು ಪಡೆದೇ ಸಾಗುತ್ತಿವೆ. ಇಲ್ಲಿ ಬೀಸುವ ವಾಯುವೂ ಸಹಿತ ಸಮೃದ್ಧವಾಗಿರುವ ಹುಲ್ಲುಗಾವಲುಗಳನ್ನೂ ನಿರ್ಮಿಸಿದೆ, ಸಮಯಕ್ಕೆ ನಿಗದಿತವಾಗಿ ತಪ್ಪದೇ ಮಳೆಯೂ ಸಹಿತ ನಿಯತಿಯಂತೆಯೇ ಸುರಿಯುತ್ತಿದೆ. ಇಂತಹ ವೈವಿಧ್ಯಮಯತೆಯ ಶಿಸ್ತನ್ನು ಬೇರೆ ಎಲ್ಲಿಯೂ ಕಾಣಲು ಸಾಧ್ಯವಿಲ್ಲ. ಆಗಾಗ ತಂಗಾಳಿಯೂ ಸಹಿತ ತನ್ನ ಗಂಭೀರ ರಾಜನಡಿಗೆಯಲ್ಲಿ ತುಂಬಿರುವ ಹಸಿರನ್ನು ನೇವರಿಸುತ್ತ ಸಾಗುತ್ತಿದೆ. ಇವೆಲ್ಲವೂ ಪ್ರಕೃತಿಯ ಅತ್ಯಾಕರ್ಷಕವಾದ ಕೌತುಕಗಳಾಗಿವೆ. ಇದು ಸುಸಂಬದ್ಧತೆಯಿಂದ ಸಂಯೋಜಿ–ಸಲ್ಪಟ್ಟಿರುವ ಸಂಗೀತ ಗೋಷ್ಠಿಯಂತಿದೆ, ಜೊತೆಗೆ ಅತ್ಯಂತ ಸುಂದರತೆಯಿಂದಲೂ ಕಂಗೊಳಿಸುತ್ತಿದೆ. ಇದನ್ನು ಆಸ್ವಾದಿಸುವದೇ ಒಂದು ಸುಯೋಗ.

**– ಪ್ರಕೃತಿಯ ಸ್ಪಂದನ, ಪು. 190**

**ಸೂರ್ಯನಿಗೆ ಸಲ್ಲಿಸಿದ ಪ್ರಾರ್ಥನೆ**

ಓ, ಸೂರ್ಯದೇವ! ನೀನೆಮ್ಮ ಮಿತ್ರ
ಕವಿದಿರುವ ಮೋಡಗಳನ್ನು ಚೆದುರಿಸು,
ಅವುಗಳಲ್ಲಿರುವ ತೇವವನು ಹೀರಿಕೋ
ನಮಗೀಗ ನಿನ್ನ ಬೆಳಕು ಬೇಕು
ಓ, ಸೂರ್ಯದೇವ! ನಮಗೀಗ ಬೆಳಕು ಬೇಕು
ನೀನೆಮ್ಮ ಮಿತ್ರ

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/220**



**ಅಮ್ಮಾ, ಈ ವೃಕ್ಷವು ಏನನ್ನು ಪ್ರತಿನಿಧಿಸುತ್ತಿದೆ?**

ಈ ವೃಕ್ಷವು ಜೀವಚೈತನ್ಯವಾಗಿದೆ, ಯಾವುದು ಸದಾ ಪ್ರಗತಿಗೊಳ್ಳುವದೋ, ಯಾವುದು ಸದಾ ಎತ್ತರೆತ್ತರಕೆ ಬೆಳೆಯುವದೋ, ಯಾವುದು ಸದಾ ಲೀಲೆಯಲ್ಲಿರುವದೋ, ಅದು ಇವೆಲ್ಲವುಗಳ ಸಂಗಡವೇ ರೂಪಾಂತರಣದ ಶಕ್ತಿಯನ್ನೂ ಹೊಂದಿದೆ. ಹೀಗಾಗಿ ಇದು ಈ ರೀತಿಯಲ್ಲಿ ನಿಂತಿದೆ. ತನ್ನಲ್ಲಿ ತಾನೇ

ಸ್ವಯಂ ನವೀಕರಣಗೊಳ್ಳಲು ಉತ್ಕಟತೆ, ಅಭೀಪ್ಸೆಯನ್ನು ಹೊಂದಿರುವ ಜೀವ(ನ)ವಾಗಿದೆ. ಇದು ಪ್ರಗತಿಯ ಸಂಕೇತವಾಗಿದೆ.

**– ಪ್ರಕೃತಿಯ ಸ್ಪಂದನ, ಪು. 118**

**ವೃಕ್ಷ**

ಮರಳು ತುಂಬಿರುವ ಆ ನದಿಯದಂಡೆ ಪಕ್ಕದಲಿ ಒಂದು ವೃಕ್ಷ
ತನ್ನ ಉತ್ತುಂಗ ಶಾಖೆಗಳ ಬಾಹುಗಳ ಎತ್ತಿ ಇರಿಸಿ ಲಕ್ಷ್ಯ
ಗಗನಮಾಲೆಯೆಡೆ ಇರುವ ತೋರ್ಬೆರಳು, ಸ್ಪರ್ಶಕ್ಕೆ ದೂರ ತಾನು,
ನೆಲಕಂಟಿ ನಿಂತು, ಬಯಸುತಲಿ ಸ್ವರ್ಗದಾ ಸಾನುರಾಗ ತಾನು

ಇದು ಮಾನವನ ಆತ್ಮವಾಗಿದೆ, ಈಗ ಈ ದೇಹ ಮತ್ತೆ ಬುದ್ಧಿಯಲಿ ಹಸಿದು, ನಮ್ಮ ಸ್ವರ್ಗಧಾಮದ ಊರ್ಧ್ವದಾರೋಹಣವು ನಿರ್ಬಂಧಗೊಂಡ ಸ್ಥಿತಿಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/207 – ಶ್ರೀ ಅರವಿಂದರು**

---

**ಟಿಪ್ಪಣಿ 1:**

ದಟ್ಟೈಸಿ ನಿಂತು ಒಟ್ಟೊಟ್ಟುತಿರುವ ಅವನ ದಿನಮಾನಗಳಲಿ
ಆ ತಪನ–ಸಾಧುತನವೀಗ ಹೀಗೆ ನಿರ್ವಸನಗೊಂಡು ಇಲ್ಲಿ
ಅವಕಾಶವಾಗಿ ಸುವಿಶಾಲವಾಗಿ ತೆರೆತೆರೆದು ಸಂಧ್ಯೆ–ಪೂರ್ವ
ಅದರೊಡನೆ ಮಿಳಿತು ಸಹವರ್ತಿಯಾಗಿ ಪದಪದದಿ ಬಂದ ಪರ್ವ

ಅತಿಸೂಕ್ಷ್ಮ ಸೂಕ್ಷ್ಮವಿದ್ದರೂ ಸಹಿತ ಕಿರಿದಾದ ದ್ವಾರ ತೆರೆಯೆ
ಹಸಿಹಸಿರು ವರ್ಣ ವಿಕಸನದ ಮುಕುಲದಾಳ ಸೀಳಿನಲ್ಲಿ
ಅನಿಮೇಷವಾಗಿ ದಿಟ್ಟಿಸುತಲಿರುವ ಆ ನಭದ ನೋಟದಿಂದ
ಮತ್ತಿದೋ ಬುವಿಯು ಒತ್ತಾಗಿ ನಿಲಲು ಉದಿಸಿರುವ ವರ್ಣ–ಬಂಧ

ಈ ಪಚ್ಚೆ–ಪೂರ್ಣ ಪರಿಪೂರ್ಣ–ಸಂಧ್ಯೆ ಸ್ವಚ್ಛಂದದಂದವಾಗಿ
ಮಾಬಲದ ಮೂಲ ತಾಣವಿದು ತಾನು ಎಂದರಿತು ಖಚಿತವಾಗಿ

**ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 1 ಪುಟ 466**
**– ಪುಟ್ಟು ಕುಲಕರ್ಣಿ**

**ಟಿಪ್ಪಣಿ 2:** ಪಚ್ಚೆ–ಪರಿಪೂರ್ಣ ಸಂಧ್ಯೆ;

ದೇವಿಯನ್ನು ಸಂಧ್ಯಾ ಸ್ವರೂಪಳು ಎಂದು ಆರಾಧಿಸಲಾಗುತ್ತದೆ. ಆದಿತ್ಯನಲ್ಲಿರುವ ಚೈತನ್ಯ ಹಾಗೂ ನಮ್ಮಲ್ಲಿರುವ ಚೈತನ್ಯವೂ ಒಂದೇ ಇರುವದರಿಂದ ಈ ಹೆಸರಿದೆ. ಸಂಧ್ಯಾ ಎಂದರೆ ಸೂರ್ಯಗತವಾದ ಬ್ರಹ್ಮ ಎನ್ನುವದನ್ನು 'ಸಂಧ್ಯೇತಿ ಸೂರ್ಯಗಂ ಬ್ರಹ್ಮ' ಎಂದು ಮಹಾಭಾರತವು ಹೇಳಿದೆ. "ನ ಭಿನ್ನಾಂ ಪ್ರತಿಪದ್ಯೇತ ಗಾಯತ್ರೀ ಬ್ರಹ್ಮಣಾ ಸಹ । ಸಾಽಹಮಸ್ಮೀತ್ಯುಪಾಸೀತ ವಿಧಿನಾ ಯೇನ ಕೇನಚಿತ್ ॥" ಎಂದು ವ್ಯಾಸ ಸ್ಮೃತಿಯು ಇದೇ ವಿಷಯವನ್ನು ಗಾಯತ್ರಿಯು ಬ್ರಹ್ಮನಿಂದ ಬೇರೆ ಎಂದು ತಿಳಿಯಬೇಡ ಎಂದೇ ಹೇಳುತ್ತದೆ. ಯಾವ ವಿಧದಿಂದಲಾದರೂ ಸರಿ 'ನಾನೇ ಅವಳು' ಎಂದು ಉಪಾಸಿಸಬೇಕು.

ಕರ್ಮಸಾಕ್ಷಿ ಹಾಗೂ ಭಾಸ್ವರೂಪಿಣಿಯಾದ ಈಶ್ವರ ಶಕ್ತಿಯು ಸಂಧ್ಯಾ ಎಂದು ವಿದ್ವಜ್ಜನರು ಉಪಾಸಿಸುತ್ತಾರೆ. [ಭಾರಧ್ವಾಜ ಸ್ಮೃತಿ]

ಸಂಧ್ಯೆಯು ಬ್ರಹ್ಮನ ಮಾನಸ ಪುತ್ರಿ. ಚಾರುರೂಪಳಾದ, ಜಯಂತಿಕೆಯೂ ಆದ ಅವಳು ಬ್ರಹ್ಮನ ಮನಸ್ಸಿನಿಂದ ಜನಿಸಿದ ಕಾರಣ ಈ ಲೋಕದಲ್ಲಿ ಸಂಧ್ಯೆ ಎಂದು ಪ್ರಸಿದ್ಧಳಾಗಿದ್ದಾಳೆ ಎಂದು ಕಾಳಿಕಾ ಪುರಾಣವು ತಿಳಿಸುತ್ತದೆ.

ಇನ್ನು ರೇಣುಕಾ ಪುರಾಣದ ಪ್ರಕಾರ ಇಡಾ ನಾಡಿಯು ಮಹಾಕಾಳಿ. ಪಿಂಗಲಾ ನಾಡಿ ಮಹಾಲಕ್ಷ್ಮೀ. ಸುಷುಮ್ನೆಯು ಏಕಾವೀರಳು. ಹೀಗೆ ಸಂಧ್ಯೆಯು ಮೂರು ಸ್ವರೂಪದಲ್ಲಿ ಇರುತ್ತಾಳೆ.

ಈ ಎಲ್ಲ ವಿವರಗಳನ್ನು ಶ್ರೀ ಅರವಿಂದರು ತಮ್ಮ 'ಸಾವಿತ್ರಿ'ಯಲ್ಲಿ ವಿವರಿಸಿ, ಆ ಅಂತರ್ಜ್ಞಾನವನ್ನು ಸಾಕ್ಷಾತ್ಕರಿಸಿಕೊಳ್ಳುವ ಪಥ ತೋರಿದ್ದಾರೆ. ವೇದ, ಯೋಗ ಹಾಗೂ ವಿಜ್ಞಾನದ ಅತ್ಯಪೂರ್ವ ಸಂಗಮವನ್ನು ಶ್ರೀ ಅರವಿಂದರಲ್ಲಿ ಕಾಣಬಹುದು. ಬ್ರಹ್ಮ ಸತ್ಯ ಜಗನ್ಮಿಥ್ಯಾ ಎಂದು ಅದ್ವೈತ ಸಾರಿದರೂ, ಬ್ರಹ್ಮ ಸತ್ಯ ಜಗತ್‌ನ ಮಿಥ್ಯಾ ಎನ್ನುವದು ಶ್ರೀ ಅರವಿಂದರ ತತ್ತ್ವ. ಈ ವಿಷಯದ ವಿವರಗಳನ್ನು ಸಾವಿತ್ರಿಯ ಪುಟ 466 ರಲ್ಲಿ ಕಾಣಬಹುದು.

## ಪ್ರಗತಿಯ ಪ್ರತಿಮೆ; ಈ ವೃಕ್ಷ

**– ಅನುವಾದ: ಡಾ॥ ಬಿ.ಆರ್.ಭೀಡ್ ರಾಯಚೂರು**

**ಚಂಡ ಮಾರುತ (ಸೈಕ್ಲೋನ್)**

(ಪಾಂಡೀಚೇರಿಯಲ್ಲಿ ಬೀಸಿದ್ದ ಚಂಡ ಮಾರುತದಿಂದ ಅನೇಕ ಜನರು ಪೀಡಿತರಾದರು; ಅದನ್ನು ಕುರಿತು)

ಮೊದಲು ಒಂದು ದಿಕ್ಕಿನಿಂದ ಅದು ಬಲವಾಗಿ ಬೀಸಿತು. ಆ ಮೇಲೆ ಒಮ್ಮೆಲೇ ಅಲ್ಲಿ ರುಂದ್ರ–ಮೌನ ಆವರಿಸಿತು. ಚಂಡ ಮಾರುತ ಬರುವ ರೀತಿಯೇ ಹಾಗಿರುತ್ತದೆ. ಅದು ಹೇಗೆ ಬರುತ್ತದೆ ಅನ್ನುವುದನ್ನು ನೀವು ಯಾರಾದರೂ ನೋಡಿದ್ದೀರಾ? ಅದೊಂದು ತರಹದ ರಾಕ್ಷಸಾಕಾರದ ಚಕ್ರದಂತೆ ತಿರುಗುತ್ತ ಬರುತ್ತದೆ. ಒಂದು ದಿಕ್ಕಿನಿಂದ ಅದರ ಮುಂಭಾಗ ಅತಿ ವೇಗವಾಗಿ ತಿರುಗುತ್ತ ಬಂದು ಒಮ್ಮೆಲೇ ಇದ್ದಕ್ಕಿದಂತೆಯೇ ಥಟಕ್ಕನೇ ನಿಂತುಬಿಡುತ್ತದೆ. ಆ ಮೇಲೆ ಎರಡನೆಯ ಭಾಗ ಬೇರೆ ದಿಕ್ಕಿನಿಂದ ಬರುತ್ತದೆ.

ನಮ್ಮಲ್ಲೊಬ್ಬ ಅಮೇರಿಕದ 'ರೀರ್ ಅಡ್ಮಿರಲ್' ಇದ್ದಾರೆ: ಅವರಿಗೆ ಇದೆಲ್ಲ ಬಹು ಚೆನ್ನಾಗಿ ಗೊತ್ತು. ಅಷ್ಟಕ್ಕೂ ಸಮುದ್ರ ಯಾನ ಮಾಡುವ ಎಲ್ಲರಿಗೂ ಇದು ಬಹುಶಃ ಗೊತ್ತಿರುತ್ತದೆ. ದೂರದಲ್ಲಿ ಚಂಡ ಮಾರುತ ರೂಪಗೊಳ್ಳಲಾರಂಭಿಸಿದ ತಕ್ಷಣ ಅದನ್ನು ಗಮನಿಸಿದ ಅವರು ನಮ್ಮನ್ನೆಲ್ಲ ಮೊದಲೇ ಎಚ್ಚರಿಸಿಬಿಟ್ಟರು.

ಅವರು ಹೇಳಿದ ಹಾಗೆಯೇ ಚಂಡ ಮಾರುತದ ಮೊದಲ ಭಾಗ ಉತ್ತರದಿಂದ ಬಂದಿತು, ನಮಗೆ ಮೊದಲೇ ಎಚ್ಚರಿಕೆ ನೀಡಲಾಗಿದ್ದರಿಂದ ಬಾಗಿಲು, ಕಿಟಕಿ ಹೀಗೆ ಎಲ್ಲವನ್ನೂ ಮೊದಲೇ ಮುಚ್ಚಿಬಿಟ್ಟಿದ್ದೆವು. ಬಂತು ಬಂತು ಅನ್ನುವಷ್ಟರಲ್ಲಿ ಸುಸ್ತು ಹೊಡೆದಂತೆ ಅದು ಸುಮ್ಮನಾಗಿಬಿಟ್ಟಿತು. ಬಹುಶಃ ದಕ್ಷಿಣ ಭಾಗದ ಕಿಟಕಿಗಳನ್ನು ಸರಿಯಾಗಿ ಬಂದು ಮಾಡಿರಲಿಲ್ಲವೆಂದು ಕಾಣುತ್ತದೆ, ಎರಡನೆಯ ರಾಕ್ಷಸ ಅಲೆ ಆಗ ಧಡಕ್ಕನೇ ದಕ್ಷಿಣ ದಿಕ್ಕಿನಿಂದ ಎರಗಿತು. (ಆಗ ಸಂಜೆ ಸುಮಾರು 7 ಗಂಟೆಯಾಗಿರಬಹುದು) ನಾನು ಈ ಟೇಬಲ್ ಬಳಿ ಕುಳಿತಿದ್ದೆ. ಚಂಡ ಮಾರುತ ಎರಡನೆಯ ಅಲೆ ಬರುವುದನ್ನು ಸ್ಪಷ್ಟವಾಗಿ ನೋಡಿದೆ. ಅದರೊಳಗೆ ಒಂದು ತರಹದ ಕಂದು ಅಥವಾ ಕೆಂಪು ಬಣ್ಣದ ಆಕೃತಿಗಳಿದ್ದವು. ಕೆಲವೊಂದು ಬಹು ದೊಡ್ಡವು, ಈ ಮನೆಯಷ್ಟು ದೊಡ್ಡವಿದ್ದರೆ,

ಕೆಲವೊಂದು ತುಸು ಸಣ್ಣವಿದ್ದವು. ಎಲ್ಲವನ್ನೂ ಒಂದೆಡೆ ಸೇರಿಸಿ ಗುಡ್ಡೆ ಹಾಕಿದಂತೆ ಒಟ್ಟಾಗಿ ಬರುತ್ತಿದ್ದವು. ನಾನಾಗ ಸಂಜೆಯ ಲಘು ಉಪಹಾರ ಸೇವಿಸುತ್ತಿದ್ದೆ. ಆಗ ವೇಗವಾಗಿ ಬಂದ ಕಡುಗೆಂಪು ಬಣ್ಣದ ಆಕೃತಿ ಇಲ್ಲಿ ಹಾಯ್ದು ನಿಮ್ಮ ಮನೆಯ ಕಡೆಗೆ ಹೋಯಿತು (ದಕ್ಷಿಣದಿಂದ ಉತ್ತರದ ಕಡೆಗೆ ಕೈ ಬೀಸಿ ತೋರಿಸುತ್ತಾರೆ) ನನಗದು ಸ್ವಲ್ಪ ತಗಲಿತು, ಸ್ವಲ್ಪ ಪೆಟ್ಟು ಕೂಡ ಆಯಿತು. ಅಯ್ಯೋ ಭಗವಂತ! ಭಯಂಕರ ನೋವು. ನನಗೊಂದು ರೀತಿಯ ತಳಮಳ. ನಾನು ನನ್ನದೇ ಆದ ವಿಶಿಷ್ಟವಾದ ಪರಿಹಾರದ ಕ್ರಮದಲ್ಲಿ ನಿರತಳಾದೆ. ಮೊದಲು ಪೂರ್ತಿ ನಿಶ್ಚಲಳಾಗಿ ಕುಳಿತು ಎಲ್ಲವನ್ನೂ ನನ್ನ ಪ್ರಭುವಿಗೆ ಅರ್ಪಿಸಿಬಿಟ್ಟೆ. ಆಗ ಆ ಆಕೃತಿ ಹಿಂದೆ ಸರಿದು ನಿಲ್ಲದೇ ಹಿಂದಕ್ಕೆ ಹೊರಟೇ ಹೋಯಿತು. ಆದರೆ ಹೋಗುವ ಮುನ್ನ ಎಲ್ಲೋ ಒಂದೆಡೆ ತುಸು ಆಘಾತ ಮಾಡಿಯೇ ಹೋಯಿತು. (ಅದು ಮಾಡಿದ ಹಾನಿ, ನೋವು, ಹಾಗೆ ನೋಡಿದರೆ, ಬಹಳವೇನಲ್ಲ, ಅವುಗಳನ್ನೆಲ್ಲ ಆ ಮೇಲೆ ನಿಯಂತ್ರಿಸಲು ಸಾಧ್ಯವಾಯಿತು) ತೀಕ್ಷ್ಣ ಉಗುರುಗಳ ಪಂಜಿನಿಂದ ಹೊಟ್ಟೆ ಬಗೆದು, ಕರುಳು ಹೊರತೆಗೆಯುವ ಹಿಂಸೆಯ ಅನುಭವ ಅದು. ಆ ಆಕೃತಿಯ ದಾರಿಗಡ್ಡವಾಗಿ ಯಾರೆಲ್ಲ ಇದ್ದರೋ, ಅವರೆಲ್ಲರೂ ಇಂಥ ಹಿಂಸೆ ಅನುಭವಿಸಬೇಕಾಯಿತು. ನನಗೆ ಗೊತ್ತಿದೆ, ಅನೇಕ ಜನರಿಗೆ ಇಂಥ ಹಿಂಸೆ ಆಗಿರಬೇಕು. ನಿನಗೆ ಜ್ವರ ಬಂದಿತೆಂದು ಕೇಳಿದಾಗ ನನಗೆ ಅರ್ಥವಾಯಿತು. ಇಡೀ ಶರೀರವೇ ಪೆಟ್ಟು ತಿಂದಿರುವ ಅಸಾಧ್ಯ ನೋವಾಗುತ್ತದೆ. ಹೌದು, ಮಗು, ನೋವು ಅಸಹನೀಯವಾಗಿರುತ್ತದೆ. ವೈದ್ಯರೇನೋ ವೈರಾಣು, ಬ್ಯಾಕ್ಟೀರಿಯಾ ಎಂದೆಲ್ಲ ಹೇಳುತ್ತಾರೆ (ಅದೇನೆಂಬುದು ನಿಜವಾಗಿ ಆ ದೇವರಿಗೇ ಗೊತ್ತು!) ಇದೆಲ್ಲ ಆ ದುಷ್ಟ ಪ್ರಾಣಿಕ ಶಕ್ತಿಯ ಕೆಲಸ. ಆ ದುಷ್ಟ ಪ್ರಾಣ ಸಂಕಲ್ಪದ ಸುತ್ತ ಭೌತಿಕದ ಕವಚ ಇರುತ್ತದೆ. ಅಂತೆಯೇ ಅದು ನೇರವಾಗಿ ಕೆಲಸ ಮಾಡುತ್ತದೆ (ಹೊಡೆದು ತೋರಿಸುತ್ತಾರೆ) ಅದು ಬಹಳ ತೀವ್ರವಾಗಿತ್ತು, ತಕ್ಷಣ ಎರಗುವಂಥದು, ಅದಕ್ಕೆ ಇನ್–ಕ್ಯುಬೇಶನ್(ಅಂಡಪೋಷಣ)ದ ಅವಧಿಯ ಅಗತ್ಯವೇ ಇಲ್ಲ, ತಕ್ಷಣ!! ತೀಕ್ಷ್ಣ ಖಡ್ಗದಿಂದ ಕರುಳು ಬಗಿಯುವಂಥ ಅಸಾಧ್ಯ ನೋವು.

ನನ್ನದೇ ಆದ ವಿಧಾನದಿಂದ ನಾನು ಅದು ಆ ರೀತಿ ತಕ್ಷಣ ಕೆಲಸ ಮಾಡುವುದನ್ನು ತಡೆದೆ. ಅಂತರಂಗದಲ್ಲಿ ಸಂಪೂರ್ಣ ನಿಶ್ಚಲತೆಯಿಂದ ಪರಮ ಪ್ರಭುವನ್ನು ಪ್ರಾರ್ಥಿಸಿ ಅವನಿಗೆ ಸಮರ್ಪಣೆ ಮಾಡಿದೆ. ಅಷ್ಟೇ, ಆದರೆ ಮರುದಿನ ನನಗೆ ಅನಾರೋಗ್ಯವುಂಟಾಯಿತು.

ವಿಚಿತ್ರ ಸಂಗತಿ ಏನೆಂದರೆ, 'ಲ' ಎನ್ನುವ ವ್ಯಕ್ತಿಯು ಆ ಆಕೃತಿಯ ದಾರಿಗಡ್ಡವಾಗಿದ್ದ, ಅವನೂ ನಿನ್ನಂತೆ ಅನಾರೋಗ್ಯ ಪೀಡಿತನಾದ. ನಿನ್ನಂತೆಯೇ ಜ್ವರ, ಅಸಾಧ್ಯ ಮೈಕೈ ನೋವು. ಆದರೆ, ಹೇಗೆ ರಕ್ಷಣೆ ಮಾಡಿಕೊಳ್ಳಬೇಕೆಂಬುದನ್ನು ನಾನು ಅವನಿಗೆ ಹಿಂದಿನ ದಿನವೇ ಕಲಿಸಿದ್ದೆ, ಅವನೂ ಸಹ ನನ್ನದೇ ವಿಧಾನ ಪ್ರಯೋಗಿಸಿ ಯಶಸ್ವಿಯಾಗಿರುವುದನ್ನು ತಿಳಿಸಿದ. ಕ್ಷಣ ಹೊತ್ತು ಮಾತ್ರ ಅಸ್ವಾಸ್ಥ್ಯ, ಆ ಮೇಲೆ ಎಲ್ಲ ಸರಿಹೋಯಿತೆಂದು ಹೇಳಿದ.

ಅದನ್ನು ಎಲ್ಲರೂ ಕಲಿಯಬೇಕು. ಅದನ್ನು ತಲೆಯಿಂದ ಅಂದರೆ ಬುದ್ಧಿಯಿಂದ ಮಾಡಬಾರದು. ಶಾಶ್ವತವಾದ ನಿಶ್ಚಲತೆಯ ಮೂಲಕ ಕರೆದರೆ ಮಾತ್ರ ಅದು ಸಫಲವಾಗುವುದು. ಬೇರೆಯವರ ಸಲುವಾಗಿ ಅದನ್ನು ಹೇಗೆ ಮಾಡಬಹುದೆಂಬುದು ಅನೇಕರಿಗೆ ಗೊತ್ತಿರುತ್ತದಾದರೂ ಸ್ವತಃ ತಮಗಾಗಿ ಅದನ್ನು ಹೇಗೆ ಬಳಸುವುದೆಂಬುದು ಗೊತ್ತಿರುವುದಿಲ್ಲ. ಏಕೆಂದರೆ ಅದೊಂದು ಸಲ ಆರಂಭವಾಯಿತೆಂದರೆ ಅದರ ತರಂಗಗಳು ಹಾಗೆಯೇ ಮುಂದುವರಿಯುತ್ತವೆ. ಅತ್ಯಂತ ತೀವ್ರ ನೋವು ಇರುವಾಗಲೂ ಅದನ್ನು ಮಾಡಬಹುದು, ಶಾಂತ ನಿಶ್ಚಲತೆಯನ್ನು ನೋವಿರುವ ಭಾಗಕ್ಕೆ ಆಹ್ವಾನಿಸಬೇಕು; ಮರುಕ್ಷಣವೇ ಅದರ ತೀವ್ರತೆ ಕಡಿಮೆಯಾಗುತ್ತದೆ. ಇಷ್ಟೇ ಸ್ಮೃತಿಯಲ್ಲಿ ಉಳಿದ ಅದನ್ನು ಪುನಃ ಸ್ಮರಣೆಗೆ ತಂದುಕೊಳ್ಳುವುದರ ಮೂಲಕ ಜಾಗೃತಗೊಳಿಸಬಾರದು. ಅಷ್ಟರ ಮಟ್ಟಿಗೆ ಎಚ್ಚರಿಕೆ ಮಾತ್ರ ತೆಗೆದುಕೊಳ್ಳಲೇಬೇಕು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಅಕ್ಟೋಬರ್ 26, 1963**

**ನೈಸರ್ಗಿಕ ಪ್ರಕೋಪಗಳು**

> ಭಯಂಕರ ಅನಾಹುತಗಳು, ನಿಸರ್ಗದಲ್ಲಾಗುವ ಪ್ರಕೋಪ, ಭೂಕಂಪ, ಖಂಡಾಂತರ ಸ್ಥಾನ ಪಲ್ಲಟ ಇವೆಲ್ಲ ಮಾನವನ ಪಾಪಕೃತ್ಯಗಳ ಹಾಗೂ ಅಸಾಮರಸ್ಯತೆಯ ಪರಿಣಾಮ ಮತ್ತು ಮಾನವ ಜನಾಂಗದ ಪ್ರಗತಿ ಆದಂತೆ ನಿಸರ್ಗದಲ್ಲೂ ಬದಲಾವಣೆ ಆಗುವುದು ಎಂದು ಹೇಳುವುದನ್ನು ಕೇಳಿದ್ದೇನೆ. ಇದು ಎಷ್ಟರ ಮಟ್ಟಿಗೆ ನಿಜ?

ಬಹುಶಃ ಅವೆರಡೂ ಒಂದೇ ಪ್ರಜ್ಞೆಯ ಪರಿಣಾಮಗಳು; ನಿಸರ್ಗದಲ್ಲಿ ಪ್ರಕೋಪಗಳಾಗಿ ಹಾಗೂ ಮಾನವ ಬದುಕಿನಲ್ಲಿ ಸಾಮರಸ್ಯಪೂರ್ಣವಾಗಿರದೇ

ಪ್ರಕಟವಾಗುವುದು, ಬಹುಶಃ ಒಂದೇ ಪ್ರಕಾರದ ಪ್ರಜ್ಞೆಯ ಪರಿಣಾಮವಾಗಿ ಎಂದೆನಿಸುತ್ತದೆ. ಅವು ಕಾರ್ಯ–ಕಾರಣಗಳಲ್ಲ, ಅವು ಒಂದೇ ಸ್ತರದ ಚಲನೆಗಳು. ಇವುಗಳಾಚೆಗೆ ಇರುವ ಪ್ರಜ್ಞೆಯು ಕೆಳಗಿಳಿದು ಪ್ರಕಟವಾಗಲು ಬಯಸುತ್ತದೆ; ಹಾಗೆ ಭೌತಿಕದಲ್ಲಿ ಕೆಳಗೆ ಇಳಿಯುವಾಗ, ಅದು ಮಾನವನ ಸ್ತರದಲ್ಲಿ ಹಾಗೂ ಭೌತಿಕ ಪ್ರಕೃತಿಯ ಸ್ತರದಲ್ಲಿ ಸಮಾನ ರೀತಿಯ ಪ್ರತಿರೋಧವನ್ನು ಎದುರಿಸಬೇಕಾಗುತ್ತದೆ. ಪ್ರಕೋಪಗಳು, ಅನಾಹುತಗಳು, ಸಂಘರ್ಷ, ಕ್ರಾರ್ಯ, ಹಿಂಸೆ, ಅಜ್ಞಾನ, ಅಸ್ಪಷ್ಟತೆ ಇವೆಲ್ಲವೂ ಒಂದೇ ಮೂಲದಿಂದ ಹುಟ್ಟುತ್ತವೆ. ಮಾನವನು ಬಾಹ್ಯ ಪ್ರಕೃತಿಯ ಚಲನೆಗಳಿಗೆ ಕಾರಣನಲ್ಲ, ಹಾಗೆಯೇ ನಿಸರ್ಗವು ಮಾನವನ ಕ್ರಿಯೆಗಳಿಗೆ ಕಾರಣವಲ್ಲ. ಬದಲಾಗಿ ಅವೆರಡೂ ಅವುಗಳ ಹಿಂದಿರುವ ಮತ್ತು ಅವುಗಳಿಗಿಂತ ಹಿರಿದಾಗಿರುವ ತತ್ವದ ಮೇಲೆ ನಿರ್ಭರವಾಗಿರುತ್ತವೆ. ಈ ಭೌತ ಪ್ರಕೃತಿಯು ಹಂತ ಹಂತವಾಗಿ ಪ್ರಕಟಮಾಡಲು ಪ್ರಯತ್ನಿಸುತ್ತಿರುವ ಚಲನೆಯ ಭಾಗಗಳಾಗಿವೆ.

ಉದಾರಹಣೆಗಾಗಿ, ಈ ಭೂಮಿಯ ಮೇಲೆ ಎಲ್ಲೋ ಒಂದೆಡೆ ದೈವೀ ಪ್ರಜ್ಞೆಯನ್ನು ಕೆಳಗಿಳಿಸಿ ತರಬಹುದಾದಷ್ಟು ಪರಿಪೂರ್ಣತೆಯನ್ನು ಪಡೆಯಿತೆಂದರೆ ಅದರ ಪ್ರಕಟನೆಯು ಕೇವಲ ಆಂತರಿಕ ಜೀವನದಲ್ಲಿ ಮಾತ್ರವಲ್ಲ ಭೌತಿಕದಲ್ಲೂ ಮಾನವನಲ್ಲೂ ನಿಸರ್ಗದಲ್ಲೂ ಬದಲಾವಣೆಯನ್ನು ತರುವುದು. ಈ ರೀತಿಯ ಪ್ರಕಟನೆಯ ಸಾಧ್ಯತೆಯು ಕೇವಲ ಮಾನವನ ಪ್ರಯತ್ನದ ಮೇಲೆ ನಿಂತಿರುವುದಿಲ್ಲ. ಇಡೀ ಮಾನವತೆಯು ಸಾಮರಸ್ಯ, ಏಕತೆ, ಜ್ಞಾನ ಸಂಪತ್ತು ಪಡೆದು ಪ್ರಕೃತಿಯನ್ನು ಬದಲಾವಣೆ ಮಾಡುವುದು ಎಂದಾದರೆ ಭರವಸೆ ಬಹಳ ಕಡಿಮೆ. ವೈಯಕ್ತಿಕವಾಗಿ ಹಾಗೂ ಒಂದು ಸಣ್ಣ ಗುಂಪು ಹೀಗೆ ಕೆಲವರಾದರೂ ಇಂಥ ಪ್ರಜ್ಞಾ ಶಕ್ತಿಯ ಅವತರಣದ ಲಾಭ ಪಡೆಯುವ ಸಾಧ್ಯತೆ ಇದೆ. ಇಲ್ಲಿ ಎಷ್ಟು ಜನರು ಎಂಬುದೇನೂ ಮಹತ್ವದ್ದಲ್ಲ. ದೈವೀ ಪ್ರಜ್ಞೆಯ ಒಂದೇ ಒಂದು ಹನಿ ಭೂ ಪ್ರಜ್ಞೆಯಲ್ಲಿ ಇಳಿದರೆ ಸಾಕು ಇಲ್ಲಿ ಎಲ್ಲವೂ ಬದಲಾವಣೆ ಹೊಂದುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/37–38**

**ಪ್ರಳಯ**

ಭೂಮಿಯ ಮೇಲೆ ಪ್ರಳಯ ಸಂಭವಿಸುವ ರೀತಿಯೇ ಹಾಗೆ (ಬೇರೆ ಗ್ರಹಗಳ ಮೇಲೆ ಹೇಗೋ ನನಗೆ ಗೊತ್ತಿಲ್ಲ; ಖಭೌತ ವಿಜ್ಞಾನದ ಇತಿಹಾಸದ ಬಗ್ಗೆ

ಕೂಡ ನನಗೆ ಬಹಳ ತಿಳಿಯದು) ಪ್ರಳಯ ನಿಜವಾಗಿ ಸಂಭವಿಸುವುದೇ? ವಿಶ್ವಕ್ಕೆ ವಿಶ್ವವೇ ನಾಶವಾಗಿ ಹೋಗುವುದೇ? ಯಾವುದಾದರೂ ಖಚಿತ ಪುರಾವೆ ಇದೆಯೇ?... ನಮ್ಮ ಸನಾತನ ಪರಂಪರೆ ಹೇಳುವಂತೆ, ಸೃಷ್ಟಿಯಾದ ವಿಶ್ವವು ಒಂದು ದಿನ ಸಂಪೂರ್ಣ ಪ್ರಳಯ ಹೊಂದುವುದು; ಅವರ ಪ್ರಕಾರ ನಾವಿರುವ ಈ ಸೃಷ್ಟಿ ಏಳನೆಯದು, ಇದು ಪ್ರಳಯ ಹೊಂದುವುದಿಲ್ಲ, ಇದು ನಿಲ್ಲದೇ ಬೆಳೆಯುತ್ತದೆ, ಪ್ರಗತಿ ಹೊಂದುತ್ತ ಹೋಗುವುದು. ಅಂತೆಯೇ ಮಾನವನಲ್ಲಿ ಅಮರತ್ವದ ಕನಸು, ವಿಕಾಸದ ಅಭೀಪ್ಸೆ ಬಲವತ್ತರವಾಗಿದೆ. ಕಾಲ ಕೂಡಿ ಬಂದಿದೆ, ಈ ವಿಶ್ವ ಅಮರತ್ವ ಪಡೆದು, ಅಪ್ರತಿಹತವಾಗಿ ವಿಕಾಸ ಹೊಂದುತ್ತ ಹೋಗುವುದು ಎಂಬುದನ್ನು ಕೂಡ ಗಟ್ಟಿಯಾಗಿ ಹೇಳುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ನವೆಂಬರ್ 13, 1963**

ಅದೊಂದು ರೀತಿ ಕಲಾವಿದನ ತರಹ; ಆದರೆ ತನ್ನನ್ನು ತಾನೇ ರೂಪಿಸಿಕೊಳ್ಳುವ (ಸ್ವಯಂ ಸಂಜಾತ) ಕಲಾವಿದನ ತರಹ. ಒಂದೆರಡು ಸಲ ಅಥವಾ ಅನೇಕ ಸಲ ಪ್ರಯತ್ನ ಮಾಡಿ ಹೊಸದನ್ನು ಪ್ರಕಟಿಸುವ ಸಲುವಾಗಿ ಅಗತ್ಯಕ್ಕೆ ತಕ್ಕಂತೆ ತನ್ನನ್ನು ಹೊಂದಿಸಿಕೊಳ್ಳುತ್ತಾನೆ. ಆದರೆ, ಇದು ಅದಕ್ಕಿಂತ ಹೆಚ್ಚಿನದು, ಏಕೆಂದರೆ ಇಲ್ಲಿ ಆಯ್ಕೆಯ ಸ್ವಾತಂತ್ರ್ಯವಿದೆ. ಬೇರೆ ಶಬ್ದಗಳಲ್ಲಿ ಹೇಳಬೇಕೆಂದರೆ, ವಿಶ್ವ ಪ್ರಕಟನೆಯ ಕಾರ್ಯವು ಆನಂದದ ಕ್ರಿಯೆಯಾಗಿದೆ, ತನ್ನನ್ನು ಜ್ಞೇಯವಸ್ತುವನ್ನಾಗಿ ಮಾಡುವ ಕ್ರಿಯೆಯಾಗಿದೆ. ಒಮ್ಮೆ ಆ ಕೆಲಸ ಆಯಿತೆಂದರೆ, ಅದು ಎಲ್ಲವನ್ನೂ ಸ್ವೀಕಾರ ಮಾಡಬಲ್ಲ, ಎಲ್ಲದಕ್ಕೂ ಹೊಂದಿಕೊಳ್ಳಬಲ್ಲ, ನಮನಶೀಲ ಹಾಗೂ ಪ್ರಕಟವಾಗಲಿರುವ ಶಕ್ತಿಗಳ ಕೈಯಲ್ಲಿ ಸ್ವ–ಸಂತೋಷದಿಂದ ಒಪ್ಪಿಸಿಕೊಳ್ಳಬಲ್ಲ ಹಾಗೂ ಬದಲಾಗಬಲ್ಲ ಸ್ಥಿತಿಗೆ ತಲುಪಿದರೆ, ಆಗ ಏನನ್ನಾದರೂ ತಯಾರು ಮಾಡಲು ಮತ್ತೇನನ್ನೋ ನಾಶ ಮಾಡುವ ಅಗತ್ಯವಿಲ್ಲ.

ಈ ರೀತಿಯ ಘೋಷ ವಾಕ್ಯದ ಜೊತೆಗೆ ಕಂಡುಬರುವ ಕಂಸವು ಸ್ಪಷ್ಟಪಡಿಸುವುದೇನೆಂದರೆ, ಯಾವುದು ಆರಂಭವಾಗುವುದೋ ಅದು ಅಂತ್ಯ ಹೊಂದಲೇಬೇಕು. ಇದರಿಂದ ತಿಳಿದುಬರುವುದೇನೆಂದರೆ, ಇವೆಲ್ಲವೂ ಮಾನವನ ಮನದ ಪರಿಕಲ್ಪನೆಗಳೇ, ಪೂರ್ಣ ಸತ್ಯವೂ ಅಲ್ಲ, ಪೂರ್ತಿ ಸುಳ್ಳೂ ಅಲ್ಲ. ಮಾನವನ ಮನೋವಿಕಲ್ಪವು ಯಾವಾಗಲೂ ಸತ್ಯವೆಂದು ಹೇಳಲಾಗದು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮಾರ್ಚ್ 4, 1966**

# ಪ್ರಕೃತಿ ಮತ್ತು ನವ–ಸೃಷ್ಟಿ

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

ಓ ಪ್ರಕೃತಿಯೆ, ಜಗನ್ಮಾತೆಯೇ,
ನೀನು ಸಹಕರಿಸುತ್ತೇನೆ ಎಂದು ಹೇಳಿದ್ದೀಯಾ ಮತ್ತು ಸಹಯೋಗದ
ವೈಭವಕ್ಕೆ ಎಂದಿಗೂ ಕೊರತೆ ಎನ್ನುವದು ಇರುವದೇ ಇಲ್ಲ.

**ಹೊಸ ವರ್ಷದ ಸಂದೇಶ 1 ಜನೇವರಿ 1958**

*ಮಾರನೆ ದಿನ ಬೆಳಿಗ್ಗೆ ಶಿವಪಾರ್ವತಿ ಚಿತ್ರವಿರುವ ದೊಡ್ಡ ಕಾರ್ಡನ್ನು ನನಗೆ ಕಳುಹಿಸಿದರು ಅವರು ಅದರ ಮೇಲೆ ಹೀಗೆ ಬರೆದಿದ್ದರು –*

"ಆಧ್ಯಾತ್ಮ ಶಕ್ತಿ ಮತ್ತು ಭೌತಿಕ ಪ್ರಕೃತಿಯ ಸಹಯೋಗವೆನ್ನುವುದು ಒಂದು ಅಂಶವೆಂದು ನಾವು ತಿಳಿದುಕೊಳ್ಳಬಹುದು."

ಪ್ರಕೃತಿಯು ತನ್ನದೇ ಮಾರ್ಗದಲ್ಲಿ ಹೋಗುವಳು. ಆಧ್ಯಾತ್ಮಿಕ ಸಂಗತಿಗಳು ಕೂಡ ತಮ್ಮದೇ ಮಾರ್ಗದಲ್ಲಿ ಹೋಗುತ್ತವೆ. ಪ್ರಕೃತಿ ಮತ್ತು ಆಧ್ಯಾತ್ಮಿಕತೆ ಒಟ್ಟುಕೂಡಿ ಹೋಗುವುದಿಲ್ಲ ಇಲ್ಲಿಯವರೆಗೆ ಅವುಗಳ ಮಧ್ಯದಲ್ಲಿ ಸಹಯೋಗವಿಲ್ಲ ಆದರೆ ಪರಸ್ಪರ ಮಧ್ಯೆ ಪ್ರತಿದ್ವಂದ್ವ ಭಾವವಿದೆ.

ಹೊಸ ವರ್ಷ ಪ್ರಾರಂಭವಾದಾಗ, ಅವೆರಡರ ಮಧ್ಯೆ, ಅನಂತವಾದ ಸಹಯೋಗವಿರುತ್ತದೆ. ಅಲ್ಲಿ ಬಹಳಷ್ಟು ಸಮೃದ್ಧಿ, ಉಲ್ಲಾಸ, ಗೆಲುವು ಮತ್ತು ಅದ್ಭುತತನವಿರುತ್ತದೆ. ಅಲ್ಲಿನ ಸುಪ್ರಮಾನಸವು ಜಗತ್ತಿಗೆ ಹೊಸ ಜಗತ್ತಿನ ಭರವಸೆ ಇರುತ್ತದೆ. ಏಕೆಂದರೆ ಪ್ರಕೃತಿಮಾತೆ ಜಗನ್ಮಾತೆ ತಾನು ಸಹಯೋಗಿಸುತ್ತೇನೆ ಎಂದು ಹೇಳಿದ್ದಾಳೆ. ಆದುದರಿಂದ ಎಲ್ಲರೂ ಆಕೆಯನ್ನು ಪ್ರೀತಿಸಬೇಕು.

**– ತಾಯಿಯೇ ನೀನು ಹೀಗೆ ನುಡಿದಂತೆ; 8.11.57**

## ಹೊಸ ವರ್ಷದ ಸಂದೇಶದ ವಿವರಣೆ

**[1 ಜನೇವರಿ 1958]**

ನಮ್ಮ ಒಂದು ತರಗತಿಯ ಸಂದರ್ಭದಲ್ಲಿ ನಾನು ಅಮಿತವಾದ ಪ್ರಕೃತಿ ರಾಶಿಯ ಬಗ್ಗೆ ಮಾತನಾಡಿದ್ದೆ, ಎಂದಿಗೂ ಕ್ಷಯವಾಗದ ರೀತಿಯಲ್ಲಿರುವ ಸೃಷ್ಟಿಗೆ ಹಲವು

ರೂಪಗಳನ್ನು ಸೃಷ್ಟಿಸುವ ಸಾಮರ್ಥ್ಯ ಇದೆ. ಅವುಗಳನ್ನು ಕೂಡಿಸುವ ಕಲೆ, ಅವುಗಳನ್ನು ಬೇರ್ಪಡಿಸಿ, ಎರಕಗೊಳಿಸುವ ಬಗೆ, ಅವುಗಳನ್ನು ಕೆಡಿಸುವುದು ಮತ್ತು ನಾಶ ಮಾಡುವುದು, ಹೀಗೆ ಹೊಸದನ್ನು ಸೃಷ್ಟಿ ಮಾಡುತ್ತ ಸಾಗುವುದು. ಅದೊಂದು ಬೃಹತ್ ಕಡಾಯಿ ಇದ್ದಂತೆ. ಇಲ್ಲಿ ನಾನು ಹೇಳುವುದೇನೆಂದರೆ, ಅದರೊಳಗೆ ವಸ್ತುಗಳನ್ನು ಹಾಕಿ ತಿರುವುತ್ತಾಳೆ ಮತ್ತು ಬೇರೇನನ್ನೋ ತರುತ್ತಾಳೆ: ಅದು ಒಳ್ಳೆಯದೆನಿಸದಿದ್ದರೆ ಮತ್ತೆ ಅದಕ್ಕೆ ವಾಪಸ್ ಎಸೆಯುತ್ತಾಳೆ ಮತ್ತು ಬೇರೇನನ್ನೋ ತೆಗೆಯುತ್ತಾಳೆ. ...... 1 ಅಥವಾ 2 ಅಥವಾ ನೂರಾರು, ಇಲ್ಲಿ ಇದಾವುದೂ ಆಕೆಗೆ ಮಹತ್ವದ್ದಲ್ಲ, ಅಲ್ಲಿ ಸಾವಿರಾರು ಮತ್ತು ಸಾವಿರಾರು ರೂಪಗಳು ಮತ್ತು ವರ್ಷಗಳ ಬಗ್ಗೆ ಹೇಳುವುದಾದರೆ ನೂರು ವರ್ಷ–ಸಾವಿರ ವರ್ಷ–ಲಕ್ಷಾಂತರ ವರ್ಷ– ಅದು ಅಂತಹ ಮಹತ್ವದ್ದಲ್ಲ, ಇಲ್ಲಿ ನಿನ್ನ ಮುಂದೆ ಶಾಶ್ವತವೇ ಇದೆ!

ಸ್ವಲ್ಪ ಸ್ಪಷ್ಟವಾಗಿ ಹೇಳಬೇಕೆಂದರೆ, ಪ್ರಕೃತಿ ಇದರಲ್ಲಿ ಸಂತೋಷ ಕಾಣುತ್ತಾಳೆ ಮತ್ತು ಆಕೆಗೆ ಅವಸರವೇನಿಲ್ಲ. ತ್ವರಿತವಾಗಿ ಶೀಘ್ರವಾಗಿ ಮಾಡಿ ಈ ಕೆಲಸ ಆಕೆಗೆ ಬೇಗ ಮುಗಿಸು ಎಂದರೆ, ಆಕೆಯ ಉತ್ತರ ಯಾವಾಗಲೂ ಒಂದೇ: "ಅದನ್ನು ಆ ರೀತಿ ಏಕೆ ಮಾಡಲಿ, ಏಕೆ? ಅದು ನಿನಗೆ ಆಶ್ಚರ್ಯವಾಗುವುದಿಲ್ಲವೇ?"

ಆ ಸಂಜೆ ಈ ವಿಷಯದ ಬಗ್ಗೆ ನಿನಗೆ ಹೇಳಿದೆ, ನಾನು ಸಂಪೂರ್ಣವಾಗಿ ಪ್ರಕೃತಿಯ ಜೊತೆ ಗುರುತಿಸಿಕೊಂಡಿದ್ದೆ, ನಾನು ಆಕೆಯ ಆಟದಲ್ಲಿ ಕೂಡಿಕೊಂಡಿದ್ದೆ. ಈ ಗುರುತಿಸಿಕೊಳ್ಳುವ ಕ್ಷಣ ಒಂದು ಪ್ರತಿಕ್ರಿಯೆಯನ್ನು ರೂಪಿಸಿತು, ಒಂದು ತರಹದ ನನ್ನ ಮತ್ತು ಪ್ರಕೃತಿಯ ಅಪ್ಯಾಯಮಾನತೆ; ಒಂದು ದೀರ್ಘವಾದ ಸಾಹಿತ್ಯದ ಬೆಳವಣಿಗೆಯ ರೀತಿಯಲ್ಲಿ ಒಂದು ಅನುಭವವಾಗುವುದರೊಂದಿಗೆ ಕೊನೆಗೊಂಡಿತು. ಅಂದು ನವಂಬರ್ 8.

ತಕ್ಷಣ ಪ್ರಕೃತಿ ಅರ್ಥಮಾಡಿಕೊಂಡಳು. ಆಕೆಗೆ ಅರ್ಥವಾಗಿದ್ದೇನೆಂದರೆ, ಈ ಹೊಸ ಪ್ರಜ್ಞೆ ಏನು ಹುಟ್ಟಿಕೊಂಡಿದೆಯೋ ಅದು ಆಕೆಯನ್ನು ತಿರಸ್ಕಾರ ಮಾಡದೆ ಸಂಪೂರ್ಣವಾಗಿ ಆಕೆಯನ್ನು ಆವರಿಸಿಕೊಳ್ಳುವುದು ಆಗಿದೆ ಆಕೆಗೆ ಅರ್ಥವಾಗಿದ್ದೇನೆಂದರೆ ಈ ಹೊಸ ಆಧ್ಯಾತ್ಮಿಕತೆ ಜೀವನದಿಂದ ವಿಮುಖ–ವಾಗುವದಲ್ಲಾ, ಆಕೆಯ ಅಗಾಧವಾದ ಚಲನೆಯ ಕ್ರಿಯೆಗೆ ಅಂಜಿಕೊಳ್ಳುವುದಿಲ್ಲ, ಆದರೆ ಆಕೆಯ ಹಲವಾರು ಮುಖಗಳನ್ನು ಸೇರಿಸಲು ಬಯಸುತ್ತದೆ ಬದಲಾಗಿ.

ಆಕೆಗೆ ಸುಪ್ರಮಾನಸ ಪ್ರಜ್ಞೆಯು ಆಕೆಯನ್ನು ಕುಗ್ಗಿಸಲಿಲ್ಲ ಬದಲಾಗಿ ಆಕೆಯನ್ನು ಸಂಪೂರ್ಣವಾಗಿ ಸಂಪೂರ್ಣಗೊಳಿಸಲು ಬಂದಿದೆಯೆಂದು.

ನಂತರ ಪರಮೋಚ್ಚ ಸತ್ಯದಿಂದ ಆದೇಶ ಬಂದಿತು "ಎಚ್ಚೆತ್ತುಕೊ, ಓ ಪ್ರಕೃತಿಯೆ ಸಹಯೋಗದ ಸಂತೋಷಕ್ಕಾಗಿ". ಮತ್ತು ಪ್ರಕೃತಿ ಎಲ್ಲಾ ತಕ್ಷಣ ಒಂದು ಉತ್ಸಾಹ ದೋಪಾದಿಯಲ್ಲಿ ಮುಂದೆ ಬಂದು ಹೇಳಿತು "ನಾನು ಒಪ್ಪಿದ್ದೇನೆ ಸಹಯೋಗ ಕೊಡುತ್ತೇನೆ". ಮತ್ತು ಅದೇ ವೇಳೆಯಲ್ಲಿ ಅಲ್ಲೊಂದು ಶಾಂತತೆ ಬಂದಿತ್ತು. ಒಂದು ಕೇವಲ ನೀರವತೆ. ಕಾರಣ ದೇಹವೆಂಬ ಪಾತ್ರೆಯು ಅದನ್ನು ಸ್ವೀಕರಿಸಲು ಸಿದ್ಧವಾಯಿತು ಮತ್ತು ಒಡೆಯದೆ ಏನನ್ನು ಕಳೆದುಕೊಳ್ಳದೆ ಹಿಡಿದಿಟ್ಟುಕೊಳ್ಳಲು ಸಿದ್ಧವಾಯಿತು. ಬೃಹತ್ ಆನಂದದ ನೆರೆ ಈ ಪ್ರಕೃತಿಯದ್ದು, ಕೃತಜ್ಞತೆಯೊಂದಿಗೆ ಮುಂದೆ ಬಂದಿತು. ಪ್ರಕೃತಿ ಒಪ್ಪಿದಳು ಎಲ್ಲಾ ಶಾಶ್ವತ ಸುಪ್ರಮಾನಸ ಪ್ರಜ್ಞೆಯೊಂದಿಗೆ ತನ್ನನ್ನು ಹೆಚ್ಚು ಪೂರ್ಣವಾಗಿ ಸಂತೃಪ್ತ ಹೊಂದಬಹುದೆಂದು ಕಂಡುಕೊಂಡಳು. ತನ್ನ ಚಲನೆಗೆ ಇದು ಹೆಚ್ಚು ಶಕ್ತಿಯನ್ನು ತುಂಬುತ್ತದೆ. ಹೆಚ್ಚಿನ ವೈಭವಶೀಲತೆ ಹೆಚ್ಚಿನ ಸಾಧ್ಯತೆ ಆಕೆ ಆಟದಲ್ಲಿ ಕಂಡುಬರುತ್ತದೆ.

ಮತ್ತು ಇದ್ದಕ್ಕಿದ್ದಂತೆ ಭೂಮಿಯ ಎಲ್ಲಾ ಮೂಲೆಗಳಿಂದ ಬಂದಿದೆ ಏನೋ ಎಂಬಂತೆ ಈ ಉನ್ನತವಾದ ಸ್ವರಮಾಲಿಕೆಗಳನ್ನು ನಾನು ಕೇಳಿಸಿಕೊಂಡೆ, ಕೆಲವು ಸಲ ಸೂಕ್ಷ್ಮ ಭೌತಿಕದಲ್ಲಿ ಕೇಳಬಹುದು ಒಂದು ರೀತಿ 'ಬೀತೋವನನ ಗಾನಗೋಷ್ಠಿ' ತರಹ ಉನ್ನತವಾದ ಪ್ರಗತಿಯ ಕ್ಷಣದಲ್ಲಿ ಅವು ಬರುತ್ತವೆ ಸುಮಾರು ಐವತ್ತು ವಾದ್ಯಗೋಷ್ಠಿ ಒಂದೇ ಸಲ ಮೇಳದಂತೆ, ಯಾವುದೇ ಅಪಶ್ರುತಿ ಇಲ್ಲದೆ ಪ್ರಕೃತಿ ಮತ್ತು ಪುರುಷ ಹೊಸ ಸಂಬಂಧವನ್ನು ಹರ್ಷದೊಂದಿಗೆ ವ್ಯಕ್ತಗೊಳಿಸಿದಂತೆ, ಬಹಳ ಹಳೆಯ ಕಾಲದ ಗೆಳೆಯರು ಬೇರೆಯಾಗಿ ಮತ್ತೆ ಒಂದಾಗುವುದನ್ನು ವ್ಯಕ್ತಪಡಿಸಿದಂತೆ.

ಆಗ ಶಬ್ದಗಳು ಬಂದವು "ಓ ಪ್ರಕೃತಿಯೇ, ಮಾತೆಯೇ, ನೀನು ಸಹಯೋಗ ಕೊಡುವೆ ಎಂದು ಹೇಳಿರುವೆ ಮತ್ತು ಆ ವೈಭೋಗದ ಸಹಯೋಗಕ್ಕೆ ಮಿತಿ ಇಲ್ಲ".

ಮತ್ತು ತೇಜೋಮಯ ಆನಂದದ ವೈಭವವು ಪರಿಪೂರ್ಣ ಶಾಂತಿಯಲ್ಲಿ ಸಂವೇದಿಸಬಹುದು.

ಈ ರೀತಿಯಾಗಿ ಹೊಸ ವರ್ಷದ ಸಂದೇಶ ಹುಟ್ಟಿತು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/247–48**

*ನಾನು ಈ ವಾಕ್ಯವನ್ನು ಅರ್ಥಮಾಡಿಕೊಳ್ಳಲಿಲ್ಲ ಮಧುರಮಾತೆ "ಪ್ರಾರಂಭಿಕ ಹಂತದ ಪ್ರಕೃತಿಯು ವಿಕಾಸದಲ್ಲಿ ಅವಳ ಅಚೇತನದ ನಿಶ್ಶಬ್ದ ರಹಸ್ಯ ಎದುರಾಗುತ್ತದೆ. ಇದು ಯಾವ ರಹಸ್ಯ, ಮಧುರ ಮಾತು?*

ಪ್ರಕೃತಿಯ ಉದ್ದೇಶ?....... ಇದನ್ನೇ ಶ್ರೀ ಅರವಿಂದರು ಪ್ರಾರಂಭದಿಂದ ಹೇಳುತ್ತಿದ್ದರು ಅದು, ಆಳದಲ್ಲಿ ಹುದುಗಿದೆ, ದ್ರವ್ಯದ ತಿರುಳಿನಲ್ಲಿ ಇದೆ. ಅಲ್ಲಿ ದೈವೀ ಸಾನಿಧ್ಯವಿದೆ ಮತ್ತು ಭೂಮಿಯ ಮೇಲಿನ ಸೃಷ್ಟಿಯ ಮೂಲ ಬಿಂದುವಿಗೆ ತಿರುಗಿ ಹೋಗಲು ತಯಾರಿ ನಡೆಸುತ್ತಿದೆ ಎಂದು, ಎಲ್ಲದರಲ್ಲಿಯ ಕೇಂದ್ರ ಭಾಗದಲ್ಲಿರುವ ಸಾನಿಧ್ಯದೆಡೆಗೆ ತಿರುಗಿ ಹೋಗಲು – ಅದು ಪ್ರಕೃತಿಯ ಉದ್ದೇಶ.

ಈ ವಿಶ್ವವು ಆ ಸರ್ವೋಚ್ಚನ ಉದ್ದೇಶಪೂರ್ಣ ವಸ್ತುನಿಷ್ಠ ಕರಣವಾಗಿದೆ, ಹೇಗೆಂದರೆ ಅವನು ತನ್ನನ್ನು ತಾನು ಹೊರಗಡೆ ನೋಡಲು ತಾನೇ ವಸ್ತುನಿಷ್ಠಗೊಂಡಿದ್ದಾನೆ. ತನ್ನನ್ನು ಜೀವಂತಿಸಿಕೊಳ್ಳಲು ತನ್ನನ್ನು ತಿಳಿದುಕೊಳ್ಳಲು ಈ ರೀತಿಯಲ್ಲಿ ಲೀಲೆಗೊಂಡಿದ್ದಾನೆ. ಮತ್ತು ಆದ ಕಾರಣ ಅಲ್ಲೊಂದು ಸತ್ (ಅಸ್ತಿತ್ವ) ಮತ್ತು ಒಂದು ಚಿತ್ (ಪ್ರಜ್ಞೆ) ಮಾಡಿ ಅವನೇ ತಮ್ಮ ಮೂಲವೆಂದು ಗುರುತಿಸಿಕೊಳ್ಳಲು ಮತ್ತು ಪ್ರಜ್ಞಾಪೂರ್ವಕವಾಗಿ ಅವನೊಂದಿಗೆ ಕೂಡಿಕೊಂಡು ಅವನನ್ನು ಪ್ರಕೃತಿಗೆಯೊಳಗೆ ಶುದ್ಧ ಸನ್ಮಾತ್ರದಲ್ಲಿ(becoming) ಪ್ರಕಟಿಸುವುದು. ವಿಶ್ವಕ್ಕೆ ಇದು ಬಿಟ್ಟು ಬೇರೆ ಕಾರಣಗಳಿಲ್ಲ.

ಭೂಮಿಯು ವಿಶ್ವ ಜೀವನದ ಸಾಂದ್ರೀಕರಣಗೊಂಡ ಒಂದು ಸಂಕೇತ, ಸಂಕುಚಿತ ಗೊಳಿಸುವುದು, ಏಕಾಗ್ರತೆ ಗೊಳಿಸುವುದು, ಇದರಿಂದ ವಿಕಾಸದ ಕೆಲಸ ಸುಲಭವಾಗಿ ಮಾಡುವುದು ಮತ್ತು ಅನುಸರಿಸುವುದು, ಮತ್ತು ನಾವು ಭೂಮಿಯ ಇತಿಹಾಸವನ್ನು ಗಮನಿಸಿದ್ದೆ. ಆದರೆ ನಮಗೆ ವಿಶ್ವ ಏಕೆ ಸೃಷ್ಟಿಯಾಗಿದೆ ಎಂದು ತಿಳಿಯಬಹುದು. ಶಾಶ್ವತವಾಗಿ ಪರಮಾತ್ಮ ತನ್ನನ್ನು ತಾನು ಪ್ರಕೃತಿಯಲ್ಲಿ ತನಗೆ ಅರಿವಾಗುವಂತೆ ಬೆಳೆಯುವುದು ಇದರ ಉದ್ದೇಶವೆಂದರೆ ಸೃಷ್ಟಿ ಮತ್ತು ಸೃಷ್ಟಿಕರ್ತ ಒಂದಾಗುವುದು. ಪ್ರಜ್ಞಾಪೂರ್ವಕವಾಗಿ, ಇಚ್ಛೆಯಿಂದ, ಮುಕ್ತವಾಗಿ ಪ್ರಕಟಣೆಯಲ್ಲಿ ಒಂದಾಗುವಿಕೆ.

ಇದು ಪ್ರಕೃತಿಯ ರಹಸ್ಯ ಪ್ರಕೃತಿಯ ಕಾರ್ಯಕಾರಿ ಶಕ್ತಿ, ಆಕೆ ಕೆಲಸ ಮಾಡುವುದು ಹೀಗೆ.

ಮತ್ತು ಆಕೆ ಈ ಸೃಷ್ಟಿಯನ್ನು ತೆಗೆದುಕೊಳ್ಳುವುದು, ಅದು ತೋರಿಕೆಗೆ ಸಂಪೂರ್ಣವಾಗಿ ಅಚೇತನವಾಗಿ ಕಂಡರೂ ಸಹಿತ, ಆದರೆ ಅದು ಪರಮೋಚ್ಚ ಪ್ರಜ್ಞೆ ಮತ್ತು ಏಕಮೇವ ಸತ್ಯ ಒಳಗೊಂಡಿರುತ್ತದೆ . ಆದುದರಿಂದ ಅದು ಸ್ವಯಂ ಅರಿವಾಗುವ ಹಾಗೆ ರೂಪುಗೊಳ್ಳುವದು ಮತ್ತು ಸಂಪೂರ್ಣವಾಗಿ ತನ್ನನ್ನು ಅರಿತುಕೊಳ್ಳುವುದು. ಆದರೆ ಆಕೆಯೂ ಅದನ್ನು ಅತಿ ಪ್ರಾರಂಭದಿಂದ ತೋರಿಸಿಕೊಳ್ಳುವುದಿಲ್ಲ. ಆಕೆ ಕ್ರಮೇಣವಾಗಿ ಬೆಳೆಸುತ್ತಾಳೆ ಮತ್ತು ಆದ ಕಾರಣ ಪ್ರಾರಂಭದಲ್ಲಿ ಅದೊಂದು ರಹಸ್ಯವಾಗಿರುತ್ತದೆ. ಯಾವಾಗ ಅವಕಾಶ ಬರುತ್ತದೆಯೋ ಆಗ ಅದು ಅನಾವರಣಗೊಳ್ಳುತ್ತದೆ ಮತ್ತು ಮನುಷ್ಯನು ಯಾವ ಹಂತಕ್ಕೆ ತಲುಪಿದ್ದಾನೆ, ಎಂದರೆ ಈ ರಹಸ್ಯ ಅನಾವರಣಗೊಳ್ಳುತ್ತದೆ ಮತ್ತು ಯಾವುದು ಚೇತನದಲ್ಲಿ ಆಗುತ್ತಿತ್ತೋ ಅದು ಈಗ ಪ್ರಜ್ಞಾಪೂರ್ವಕವಾಗಿ ಸಮ್ಮತಿಯೊಂದಿಗೆ ಘಟಿಸುತ್ತದೆ. ಜೊತೆಜೊತೆಗೆ ಬಹಳ ತ್ವರಿತವಾಗಿ ಮತ್ತು ಆನಂದದ ಅರಿವಿನೊಂದಿಗೆ ಆಗುತ್ತಿದೆ. ಈಗಾಗಲೇ ಮನುಷ್ಯನಲ್ಲಿ ಆಧ್ಯಾತ್ಮಿಕ ಸತ್ಯತೆಯ ಬೆಳವಣಿಗೆಯನ್ನು ಕಾಣಬಹುದು ಮತ್ತು ಅದು ತನ್ನಷ್ಟಕ್ಕೆ ತಾನೇ ಸಂಪೂರ್ಣವಾಗಿ ಮತ್ತು ಮುಕ್ತವಾಗಿ ಪ್ರಕಟವಾಗಿರುವುದು, ಹಿಂದೆ ಪ್ರಾಣಿ ಮತ್ತು ಸಸ್ಯಗಳಲ್ಲಿ ಅದು.... ಇತ್ತು, ಅದನ್ನು ಬಹಳ ಸ್ಪಷ್ಟವಾಗಿ ಕಾಣಬಹುದು. ಆದರೆ, ಮಾನವನಲ್ಲಿ, ಆಧ್ಯಾತ್ಮಿಕ ಸತ್ಯದ ಬಗ್ಗೆ ಅವನಿಗೆ ಪ್ರಜ್ಞೆ ಇದೆ, ಕನಿಷ್ಠ ಮಾನವನ ಅಸ್ತಿತ್ವದ ಅಂಶಗಳಲ್ಲಿ ಇದೆ. ಮನುಷ್ಯನಿಗೆ ಈಗ ಅವನಿಂದ ಪರಮೋಚ್ಚ ಮೂಲದಿಂದ, ಅವನಿಂದ ಏನನ್ನು ಬಯಸುತ್ತಿದ್ದಾನೆ ಎಂದು ಅರಿವಾಗಲು ಆರಂಭವಾಗಿದೆ ಮತ್ತು ಅದನ್ನು ಪೂರೈಸಲು ಸಹಯೋಗಿಸಲು ಅವನು ಸಿದ್ಧಗೊಂಡಿದ್ದಾನೆ. ಸೃಷ್ಟಿಯು ಸೃಷ್ಟಿಕರ್ತನ ಬಗ್ಗೆ ಪ್ರಜ್ಞಾಪೂರ್ವಕವಾಗಿಲು ಮತ್ತು ವಸ್ತುನಿಷ್ಠ ಕರಣದಲ್ಲಿ ಅರಿವು ಹೊಂದಲು ಪ್ರಕೃತಿಯು ಬಯಸುತ್ತದೆ, ಇದನ್ನು ಹೇಳಬೇಕೆಂದರೆ ಸೃಷ್ಟಿ ಮತ್ತು ಸೃಷ್ಟಿಕರ್ತನ ನಡುವೆ ವ್ಯತ್ಯಾಸವೇನೂ ಇಲ್ಲ ಮತ್ತು ಪ್ರಜ್ಞಾಪೂರ್ವಕವಾಗಿ ಮತ್ತು ಅರಿವಿನ ಮೂಲಕ ಕೂಡುವಿಕೆಯೇ ಅದರ ಗುರಿ. ಇದೇ ಪ್ರಕೃತಿಯ ರಹಸ್ಯ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/321–22 – ಶ್ರೀಮಾತೆ**

# ಪ್ರಕೃತಿ ಮತ್ತು ಶ್ರೀಮಾತೆ

**– ಅನುವಾದ: ನಾಗಜ್ಯೋತಿ**

ಕವಿತೆಗಳ ಮೇಲೆ ಕವಿತೆಗಳನ್ನು ಬರೆಯದ ಈ ಸೇವಾ ವೃಕ್ಷದ ಬೀಜಾರೋಪಣವಾದದ್ದು 1930ರಲ್ಲಿ. ಮೊದಮೊದಲು ಅದು ಚೆನ್ನಾಗಿ ಬೆಳೆಯಲಿಲ್ಲ. ಅದಕ್ಕಾಗಿ ಹಳೆಯ ಕಟ್ಟಡದ ಬುನಾದಿಯನ್ನು ಇಟ್ಟಿಗೆಯ ಸ್ತರದ ವರೆಗೆ ತೆಗೆಯಲಾಯಿತು. ಹೊಸ ಮಣ್ಣು, ಎಲೆ–ಗೊಬ್ಬರ ಮುಂತಾದವುಗಳನ್ನು ಹಾಕಲಾಯಿತು. ಆಗ ಮನೆ ಕೆಲಸದವರನ್ನು ಬಿಟ್ಟರೆ ಬೇರೆ ಕೂಲೀ–ಕಾರ್ಮಿಕರು ಇರಲಿಲ್ಲ. ಸಾಧಕರೇ ಹಾರೆಗಳಿಂದ ಮುರುಕು ಚೂರು, ಬುನಾದಿಯನ್ನು ತೆಗೆದರು. ಅವರ ಕೈಗಳೆಲ್ಲ ಬೊಬ್ಬೆ ಎದ್ದು ನೋವಿನಿಂದ ತುಂಬಿದ್ದರೂ, ದೈಹಿಕ ದಣಿವನ್ನು ಯಾರೂ ಲೆಕ್ಕಿಸದೇ ಎಲ್ಲರೂ ಸೇರಿ ಆ ಸ್ಥಳವನ್ನೊಂದು ಸುಂದರ ಉದ್ಯಾನವನ್ನಾಗಿ ಮಾಡುವವರೆಗೆ ಕೆಲಸ ಮಾಡುತ್ತ ಹೋದರು.

ಗಿಡದ ಬುಡದ ಸುತ್ತಲೂ ಮಣ್ಣು ತೋಡುವಾಗ ಒಂದೆರಡು ಬೇರು ಕತ್ತರಿಸಲ್ಪಟ್ಟವು. ಇದನ್ನು ಶ್ರೀಮಾತೆಯವರ ಗಮನಕ್ಕೆ ತಂದಾಗ “ಸೇವಾ ವೃಕ್ಷದ ಯಾವ ಬೇರು, ಕೊಂಬೆ ಏನನ್ನೂ ಕಡಿಯಬಾರದು” ಎಂದು ಅವರು ಅತಿ ಖಾರವಾಗಿ ಹೇಳಿದರು. ಶ್ರೀ ಅರವಿಂದರು ದೇಹ ತ್ಯಾಗ ಮಾಡುವ ಇಪ್ಪತ್ತು ದಿನಗಳ ಮೊದಲು ಬಹಳ ದಿನಗಳಿಂದ ಇಲ್ಲೇ ವಾಸವಾಗಿರುವ ಸಾಧಕನೊಬ್ಬನು ಒಂದು ಕನಸು ಕಂಡಿದ್ದನು. ಶ್ರೀ ಅರವಿಂದರು ಬಯಲಿಗೆ ಬಂದು ಈ ದೊಡ್ಡ ಗಿಡದ ಕೆಳಗೆ, ಆ ಗಿಡಕ್ಕೆ ಬೆನ್ನು ತಾಗಿಸಿ ಆರಾಮಾಗಿ ಕಾಲು ಚಾಚಿಕೊಂಡು ಕುಳಿತಿರುವಂತೆ ಕನಸು ಕಂಡಿದ್ದನು. ಕನಸಿನಲ್ಲಿಯೇ ಅವನು ಅಲ್ಲಿದ್ದ ಪರಿಚಾರಕರ ಬಳಿ ಅತಿ ವಿಸ್ಮಯದಿಂದ “ಗುರುಗಳು ಇಲ್ಲೇಕೆ ಕುಳಿತಿದ್ದಾರೆ?” ಎಂದು ವಿಚಾರಿಸಿದನಂತೆ. ಅದಕ್ಕೆ ಅವರು “ಗುರುಗಳು ಇನ್ನು ಮೇಲೆ ಇಲ್ಲಿಯೇ ಇರುತ್ತಾರೆ” ಎಂದು ಉತ್ತರಿಸಿದರಂತೆ. ಆ ಸಾಧಕನಿಗೆ ಈ ಕನಸಿನ ಅರ್ಥ ತಿಳಿಯಲಿಲ್ಲ, “ಇದು ಏನೋ ಅಸ್ಪಷ್ಟವಾಗಿದೆ, ಇದು ತನ್ನದೇ ಮನಸ್ಸಿನ ಅಸ್ಪಷ್ಟ ಕಲ್ಪನೆಯೋ ಏನೋ” ಎಂದುಕೊಂಡು ಮರೆಯಲೆತ್ನಿಸಿದನು. ಈ ಸಂಗತಿಯನ್ನು ಗಂಭೀರವಾಗಿ ಪರಿಗಣಿಸದೇ ಅವನು ಯಾರೆದುರೂ ಹೇಳಿಕೊಳ್ಳಲಿಲ್ಲ. ಶ್ರೀಮಾತೆಯವರ ಮುಂದೆ ಕೂಡ ಅವನು ಉಸಿರೊಡೆಯಲಿಲ್ಲ.



ಶ್ರೀ ಅರವಿಂದರು ದೇಹ ತ್ಯಾಗ ಮಾಡಿದ ಐತಿಹಾಸಿಕ ದಿನಗಳ ಅವಧಿಯಲ್ಲಿ, ಡಿಸೆಂಬರ್ 5 ರಿಂದ 9 ರವರೆಗೆ ಗುರುಗಳ ದರ್ಶನವನ್ನು ಅನೇಕ ಬಾರಿ ಪಡೆದರೂ ಅವನಿಗೆ ಇದು ನೆನಪಾಗಲಿಲ್ಲ. ಕೊನೆಗೆ ಸೇವಾ ವೃಕ್ಷದ ಕೆಳಗೆ ಕಮಾನಿನಲ್ಲಿ ಗುರುಗಳ ಪಾರ್ಥಿವ ಶರೀರವನ್ನು ಇರಿಸುವುದನ್ನು ನೋಡಿದಾಗ, ತನ್ನ ಇಡೀ ಕನಸು ಅವನಿಗೆ ನೆನಪಾಯಿತು. ಅದರ ಅರ್ಥ ಕೂಡ ಸ್ಪಷ್ಟವಾಗಿ ಹೊಳೆಯಿತು. ಕೆಲ ದಿನಗಳ ತರುವಾಯ ಶ್ರೀಮಾತೆಯವರಿಗೆ ಇದನ್ನೆಲ್ಲ ಹೇಳುವ ಅವಕಾಶ ಅವನಿಗೆ ದೊರಕಿತು. ಆಗ ಶ್ರೀಮಾತೆ ಹೇಳಿದ್ದು ಹೀಗೆ, "ಹೌದು ಇದೆಲ್ಲವೂ ನಿಜವಾಗಿಯೂ ಪೂರ್ವ ನಿರ್ಧಾರಿತ!"

**ಹೋಮೇಜ್ ಟು ದಿ ಸರ್ವೀಸ್ ಟ್ರೀ, ಪು. 14–15**

## ಶ್ರೀ ಅರವಿಂದರ

# 'ಗೀತಾ ಪ್ರಬಂಧಗಳು'

**– ಅನುವಾದ: ಜಾನ್ವಿ**

## 6

## ಅಧ್ಯಾಯ – 5

## ಕುರುಕ್ಷೇತ್ರ

ಶ್ರೀ ಕೃಷ್ಣನು ಅರ್ಜುನ ಎದುರಿಗೆ ಮೂರು ಪ್ರಕಾರದ ದಾರಿಗಳ ವಿಶಾಲ ನಕ್ಷೆಯನ್ನು ತೆರೆದಿಟ್ಟನು; ಮಾನವನ ಸಂಕಲ್ಪ, ಹೃದಯ ಮತ್ತು ವಿಚಾರಗಳು ನಿಧಾನವಾಗಿ ಅರಳಿ ಬೆಳೆಯುತ್ತ ತಮ್ಮ ತಮ್ಮ ವಿಶಿಷ್ಟ ಉತ್ತರೋತ್ತರ ಆತ್ಯಂತಿಕ ಶಕ್ತಿಯನ್ನು ಪಡೆದು ಜ್ಞಾನ–ಭಕ್ತಿ–ಕರ್ಮಗಳ ಸಮ್ಯಕ್–ಮಿಲನವಾಗಿ, ಎಲ್ಲವುಗಳ ಏಕೈಕ ಶ್ರೇಷ್ಠ ಗುರಿಯಾದ ಪುರುಷೋತ್ತಮನಲ್ಲಿ ಸೇರಿ ಏಕೀಭವಿಸಬೇಕು. ಇದೇ ಆ ಸಮನ್ವಯದ ವಿಶಾಲ ನಕ್ಷೆ – ನಾವೂ ಸಹ ಇದೇ ಜಾಡಿನಲ್ಲಿಯೇ ಮುಂದುವರಿಯಬೇಕು – ಆದರೆ ಅದಕ್ಕೂ ಮೊದಲು ಗೀತೆಯು ಉದ್ಭವಿಸಿದ ಪ್ರಸಂಗವನ್ನು ಮತ್ತೊಮ್ಮೆ ವಿವೇಚನೆ ಮಾಡೋಣ. ಅದನ್ನು ಅರ್ಜುನನ ವ್ಯಕ್ತಿಗತ ಸಮಸ್ಯೆಯಾಗಿ ನೋಡದೇ, ಇಡೀ ಮಾನವ ಜನಾಂಗದ ಸಮಷ್ಟಿ ಸಮಸ್ಯೆಯಾಗಿ ವಿವೇಚನೆ ಮಾಡುವ – ಅರ್ಜುನನ ವೈಯಕ್ತಿಕ ಸಮಸ್ಯೆಯು ಅವನ ವ್ಯಕ್ತಿಗತ ಪಾತಳಿಯಲ್ಲಿಯೇ ನಿರ್ಣಯವಾಗುವುದು; ಅದು ಅವನ ವೈಯಕ್ತಿಕ ಸಂಘರ್ಷ, ಅವನು ಅನುಸರಿಸಬೇಕಾದ ಹಾಗೂ ಅನುಸರಿಸಿದ ಕ್ರಮವನ್ನು ಮಾನವ ಕುಲಕ್ಕೆ ಪ್ರತೀಕವೆಂದು ಭಾವಿಸಿ ಅಭ್ಯಾಸ ಮಾಡೋಣ. ಅರ್ಜುನನು ಕೇಳಿದ ಪ್ರಶ್ನೆಗಳು ನಿಜವಾಗಿ ಅವನಿಗೊದಗಿದ ಸಮಸ್ಯೆ ಮಾತ್ರ ಆಗಿರದೇ ಇಡೀ ಮಾನವ ಕುಲವು ಎದುರಿಸುವ, ಹಾಗೂ ಕೇಳುವ ಪ್ರಶ್ನೆಗಳೇ ಆಗಿವೆ ಎಂಬುದನ್ನು ನಾವಿಲ್ಲಿ ಮುಖ್ಯವಾಗಿ ಗಮನಿಸಬೇಕು. ಈ ಪ್ರಪಂಚ ಅಂದರೇನು? ಅದರ ಉದ್ದೇಶವೇನು? ನಾವು ಪ್ರಾಪಂಚಿಕ ಜೀವನವನ್ನು ಆಧ್ಯಾತ್ಮಿಕ ಜೀವನದೊಂದಿಗೆ ಹೊಂದಿಸುವುದು ಹೇಗೆ? ಈ ದೃಷ್ಟಿಕೋನದಿಂದ ನಾವು ಗೀತೆಯನ್ನು ಅಭ್ಯಾಸ ಮಾಡೋಣ. ಶ್ರೀಕೃಷ್ಣನು ಅರ್ಜುನನ ನೆಪಮಾಡಿಕೊಂಡು ಇಡೀ ಮನುಕುಲಕ್ಕೆ ಅನ್ವಯಿಸುವ ರೀತಿಯಲ್ಲಿ ಉಪದೇಶ ಮಾಡಲು ಅತಿ ಭದ್ರವಾದ ಬುನಾದಿಯನ್ನು ಮೊದಲು ಹಾಕುತ್ತಾನೆ. ಅರ್ಜುನನಿಗೆದುರಾದಂಥ ವಿಕಟ ಪ್ರಸಂಗದಲ್ಲಿ ವ್ಯಕ್ತಿಯು ನಿಜವಾಗಿ

ತನ್ನ ಅಂತರಂಗದಲ್ಲಿಂದಲೇ ಕೆಲಸ ಮಾಡಬೇಕು, ಅಂತರಂಗದಲ್ಲಿ ನಿಜವಾಗಿ ಬಂಧನದಿಂದ ಮುಕ್ತನಾಗಬೇಕು, ಆ ಅಂತರಂಗದ ಮುಕ್ತ ಜ್ಞಾನದ ಬೆಳಕಲ್ಲಿ ವ್ಯಕ್ತಿಯು ತನ್ನ ಕರ್ತವ್ಯ ಕರ್ಮಗಳನ್ನು ಮಾಡಿದಾಗ ಮಾತ್ರ ಸಮಸ್ಯೆಗೆ ಪರಿಹಾರ ದೊರೆಯಲು ಸಾಧ್ಯ. ಬಾಹ್ಯ ಮತ್ತು ಅಭ್ಯಂತರ ಸಮಸ್ಥಿತಿ ಸ್ಥಾಪನೆಯಾದಾಗ ಮಾತ್ರ ಸುಸಂಬದ್ಧ ಜೀವನ ಸಾಧ್ಯ. ಈ ಸತ್ಯವನ್ನು ಪ್ರತಿಪಾದಿಸಲೆಂದು ಅರ್ಜುನನ್ನು ತಯಾರು ಮಾಡುತ್ತ ನಿಧಾನವಾಗಿ, ಕ್ರಮ ಕ್ರಮವಾಗಿ ಸಮಸ್ತ ವಿಶ್ವ ಜ್ಞಾನವನ್ನು ತೆರೆದಿಡುತ್ತಾನೆ.

ಪ್ರಪಂಚ ಹೇಗಿದೆಯೋ ಅದನ್ನು ಹಾಗೆಯೇ ಸ್ವೀಕರಿಸಿ, ಬಾಹ್ಯದಲ್ಲಿ ಲೌಕಿಕ ವ್ಯವಹಾರ ಮಾಡುತ್ತ ಆಂತರಿಕವಾಗಿ ಆತ್ಮಸ್ಥ ಜೀವನ ನಡೆಸಲು ಇರುವ ತೊಂದರೆ ಏನು? ಯಾವ ಅಡಚಣೆ ಅಡ್ಡಿ ಬರುತ್ತದೆ? ವ್ಯಕ್ತಿಯ ಮನವು ಜಾಗೃತವಾದಾಗಲೂ ಸಹ ಪ್ರಪಂಚದ ಯಾವ ಅಂಶವು ಅವರ ಮನವನ್ನು ದಿಕ್ಕೆಡಿಸುತ್ತದೆ? ಅರ್ಜುನನಂತೆ ಮಾನವನನ್ನು ವಿಷಾದ ಯೋಗಕ್ಕೆ ದೂಡುವ ಅಂಶ ಯಾವುದು? ನೀತಿ, ನಿಯಮ, ನಿಷ್ಠೆ ಇವುಗಳ ವ್ಯವಹಾರಕ್ಕೆ ಅವನ ನಂಬಿಕೆಯೇ ಒಂದು ಪರದೆ; ಈ ಧರ್ಮಾಧರ್ಮಗಳ ಪರದೆ ಹರಿದಿಲ್ಲದೇ ಮಾನವನು ಪ್ರಪಂಚದಲ್ಲಿ ಸಮ್ಯಕ್ ವ್ಯವಹಾರ ಮಾಡಲು ಸಾಧ್ಯವಿಲ್ಲ. ಅದೊಂದು ರೀತಿಯ ಭ್ರಮೆಯಲ್ಲಿ ಮಾನವನಿದ್ದಾನೆ. ಅದಕ್ಕಿಂತ, ಅಂದರೆ ನೀತಿ, ಧರ್ಮಾಧರ್ಮಗಳ ವಿವೇಚನೆಗಿಂತ ಶ್ರೇಷ್ಠ ತತ್ವವೊಂದಿದೆ; ಆದರೆ ಅದರ ಜ್ಞಾನವಾಗುವ ಪೂರ್ವದಲ್ಲಿ ಉದ್ರೇಕ, ಆತಂಕ, ನಿರುತ್ಸಾಹ, ಖಿನ್ನತೆ ಆವರಿಸುವ ಕಾರಣವೇನು? ವ್ಯಕ್ತಿಯ ಯಾವ ಅವಸ್ಥೆಯಿಂದಾಗಿ ಈ ರೀತಿಯ ಭಾವಗಳು ಅವನಲ್ಲಿ ಉದಿಸುತ್ತವೆ? ಇವೆಲ್ಲವನ್ನು ಪರಿಹರಿಸದೇ, ಎಲ್ಲವನ್ನೂ ಸಮಗ್ರವಾಗಿ ಸಮನ್ವಯ ಮಾಡುವುದು ಸಾಧ್ಯವಾಗದೇ ಹೋದಾಗ ಕುರುಕ್ಷೇತ್ರದಂಥ ಪ್ರಸಂಗ ಬರುವುದು. ಇದನ್ನೇ ಕರುಕ್ಷೇತ್ರವು ನಮಗೆ ಅತಿ ಸ್ಪಷ್ಟವಾಗಿ ತಿಳಿಸುತ್ತದೆ. ಈ ವಿಕಟ ಪ್ರಸಂಗ ಯಾವ ಹಂತ ತಲುಪಿತೆಂದರೆ, ಸ್ವತಃ ಈಶ್ವರನೇ ಆದ ಶ್ರೀಕೃಷ್ಣನು ತಾನೇ ವಿಶ್ವರೂಪ ತಾಳಿ, ಎಲ್ಲ ಚರಾಚರ ಜೀವಿಗಳನ್ನು ತಾನೇ ನಾಶ ಮಾಡುವ ಕಾಲ ಸ್ವರೂಪನಾಗಿರುವುದನ್ನು ತಿಳಿಸಬೇಕಾಗಿ ಬಂದಿತು. ವಿಶ್ವರೂಪವೆಂದರೆ ಸಮಸ್ತ ಸೃಷ್ಟಿಯ ಈಶ್ವರನ ರೂಪ; ಸೃಷ್ಟಿ ಕರ್ತೃ, ನಿಯಾಮಕ ಹಾಗೂ ವಿನಾಶಕಾರಕ ತತ್ವದ ಪ್ರಕಟನೆಯ ಸ್ವರೂಪ; ಸೃಷ್ಟಿ ಕರ್ತೃನೇ ಸೃಷ್ಟಿ ಸಂಹಾರಕನಾಗಿರುವ

ರೂಪಕದ ದರ್ಶನ ಅದು. ಇದು ಈಶ್ವರನ ಘೋರ ಸ್ವರೂಪದ ದರ್ಶನವೇ, ಆದರೆ ಪ್ರಾಚೀನರು ಇದನ್ನು ಬಿಡದೇ, ವ್ಯಾಪಕವಾಗಿ ತೋರಿಸಿಕೊಟ್ಟರು. "ಋಷಿ ಮುನಿಗಳು, ಜ್ಞಾನಿಗಳು ಎಲ್ಲರೂ ಕಾಲ ಪುರುಷನ ಆಹಾರವೇ, ಮೃತ್ಯುವೆಂಬುದು ಅವನ ಆಹಾರದ ಮಸಾಲೆ ಇದ್ದಂತೆ" (ಯಸ್ಯ ಬ್ರಹ್ಮಚ ಕ್ಷತ್ರಂಚ ಉಭೇ ಭವತ ಓದನಃ ಮೃತ್ಯುಃ ಯಸ್ಯ ಉಪಚೇತನಂ ಕಠ 1.2.24) ಎಂದು ಹೇಳುವುದರ ಮೂಲಕ ಅವರು ಜೀವನ ಮರಣ ಎರಡೂ ಒಂದೇ ಸತ್ಯದ ವಿಭಿನ್ನ ಪಾರ್ಶ್ವಗಳೇ ಹೊರತು ಬೇರೆ ಬೇರೆ ತತ್ವಗಳಲ್ಲ ಎಂದು ಸಾರಿದರು. ವ್ಯವಹಾರಿಕವಾಗಿ ಅವು ಪರಸ್ಪರ ವಿರೋಧದಂತೆ ತೋರಿದರೂ ಕೂಡ ಪರಸ್ಪರ ಪೂರಕ ಹಾಗೂ ಒಂದೇ ಎಂಬುದನ್ನು ಅವರು ತೋರಿಸಿದರು. ಈ ಸತ್ಯವೇ ನಮಗೆ ಮೊದಮೊದಲು ಅಪ್ರತ್ಯಕ್ಷವಾಗಿ ಹಾಗೂ ಅಸ್ಪಷ್ಟವಾಗಿ ಬಾಹ್ಯ ಜೀವನದ ನಾನಾ ಕ್ಷೇತ್ರಗಳಲ್ಲಿ ಅರಿವಿಗೆ ಬರುವುದು; ಮುಂದೆ ಅದುವೇ ಆತ್ಮ ದರ್ಶನದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುವುದು. ಜೀವನದ ಸತ್ಯ ಎಂಬ ಜ್ಞಾನವಾಗುವುದು. ಬಾಹ್ಯ ಅಸ್ತಿತ್ವದಲ್ಲಿ ಈ ತತ್ವವು ಪ್ರಪಂಚವಾಗಿ, ಸಂಸಾರವಾಗಿ, ಜೀವನ ಸಂಘರ್ಷವಾಗಿ, ಹೋರಾಟವಾಗಿ ಕೊನೆಗೆ ಸಾವು, ಹತ್ಯೆ, ಮರಣವಾಗಿ ಪ್ರಕಟವಾಗುವುದು; ಅತರಂಗದಲ್ಲಿ ಇದೇ ವಿಶ್ವಾತ್ಮಕನಾದ ವಿರಾಟ್ ಪುರುಷನ ಸೃಷ್ಟಿಯಾಗಿ, ವಿನಾಶವಾಗಿ ಪ್ರಕಟವಾಗುವುದು. ಇಡೀ ಜೀವನವೇ ಒಂದು ಮಹಾಯುದ್ಧ ಭೂಮಿ, ಮರಣದ ಕ್ಷೇತ್ರ, ಇದೇ ಕುರುಕ್ಷೇತ್ರ; ಈಶ್ವರನೇ ರುದ್ರ, ಭಯಾನಕ ಸ್ವರೂಪದ ರುದ್ರ ಎಂಬುದನ್ನು ಅರ್ಜುನನು ಶ್ರೀಕೃಷ್ಣನ ವಿಶ್ವರೂಪ ದರ್ಶನದ ಮೂಲಕ ಅರಿತನು.

ಯುದ್ಧವೇ ನಿಜವಾಗಿ ಎಲ್ಲ ವಸ್ತುಗಳ ಹಾಗೂ ಸಂಗತಿಗಳ ಜನಕ; ಅದೇ ಎಲ್ಲದರ ಸ್ವಾಮಿ, ಅದೇ ನಿಜವಾಗಿ ಎಲ್ಲದರ ರಾಜ ಎಂದು ಗ್ರೀಕ್ ತತ್ವಜ್ಞ ಹಿರಾಕ್ಲಿಟಸ್ ಹೇಳುತ್ತಾನೆ. ಅವನ ಈ ಹೇಳಿಕೆಯ ಹಿಂದೆ ನಿಜವಾಗಿ ಬಹು ದೊಡ್ಡ ತತ್ವ ಅಡಗಿದೆ. ಈ ಜಗದಲ್ಲಿ ಪ್ರತಿ ವಸ್ತುವು ಹಾಗೂ ಘಟನೆಯು ಭೌತಿಕ ಅಥವಾ ಬೇರೆ ಬೇರೆ ಶಕ್ತಿಗಳ ಸಂಘರ್ಷದಿಂದಲೇ ಹುಟ್ಟುತ್ತದೆ ಎಂದು ಕಾಣುವುದು; ಒಂದು ಇಡೀ ಜಗತ್ತೇ ಹಾಗೆ ಉತ್ಪತ್ತಿಯಾಗಿಲ್ಲ ಅಂದರೂ ಸಹ ಬೇರೆ ಬೇರೆ ಶಕ್ತಿಗಳ, ವಸ್ತುಗಳ, ಪ್ರವೃತ್ತಿಗಳ, ಪ್ರಾಣಿಗಳ, ತತ್ವಗಳ ಸಂಘರ್ಷದಿಂದಲೇ ಮುಂದುವರಿಯುವುದಂತೂ ನಿಶ್ಚಿತ; ಸದಾ ಹೊಸದು ಹುಟ್ಟಬೇಕಾದರೆ ಹಳೆಯದು ಸಾಯಲೇಬೇಕು, ಇದು ಸ್ಥಿತಿ ಸ್ಥಾಪನೆಯ ತತ್ವ; ಜೀವನಕ್ಕೆ ಈ ರೀತಿ

ಅತ್ಯಂತ ಅವಶ್ಯಕವಾದ ತತ್ವ ಎಂಬುದು ನಿರ್ವಿವಾದ – ಈ ರೀತಿಯ ಮುನ್ನಡೆ ಅಥವಾ ಪಯಣವು ಎಲ್ಲಿಯವರೆಗೆ? ಯಾರೂ ಹೇಳಲಾರರು, ಯಾರಿಗೂ ತಿಳಿಯದು. ಕೆಲವರು ಆತ್ಮನಾಶ ಅಥವಾ ಪ್ರಳಯವೇ ಕೊನೆ ಎಂದೂ, ಕೆಲವರು ಸೃಷ್ಟಿ ಸ್ಥಿತಿ ವಿನಾಶಗಳ ಈ ಚಕ್ರ ನಿರಂತರ ಎಂದೂ, ಹೀಗೆ ಬಗೆಬಗೆಯಾಗಿ ಹೇಳುತ್ತಾರೆ. ಆಶಾವಾದಿಗಳು ಜನನ–ಮರಣ ಅಥವಾ ಸೃಷ್ಟಿ ಪ್ರಳಯದ ಈ ಚಕ್ರ ನಿರರ್ಥಕವಲ್ಲ. ಚಕ್ರವು ಪ್ರಗತಿ ಶೀಲವಾಗಿದೆ. ಪ್ರತಿ ಚಕ್ರದಲ್ಲಿ ಜಗವು ವಿಕಾಸ ಹೊಂದುತ್ತ, ಹೆಚ್ಚು ಹೆಚ್ಚಿನ ಸ್ಥಿತಿಗೆ ಏರುತ್ತದೆ ಎಂದು ಹೇಳುತ್ತಾರೆ. ಮಧ್ಯದಲ್ಲಿ ಎಡರು–ತೊಡರು, ತೊಂದರೆ ಬಂದರೂ, ವಿಶ್ವದ ಗುರಿಯಾದ ದಿವ್ಯ ಅಭೀಪ್ಸೆಯ, ದೈವೀ ಪ್ರಕಟನೆಯ ಕಾರ್ಯದಲ್ಲಿ ಬದಲಾವಣೆ ಆಗುವುದಿಲ್ಲ. ಚಕ್ರ ಮುಂದೆ ಮುಂದೆ ಉರುಳುತ್ತಲೇ ಹೋಗುತ್ತದೆ ಎಂದು ಅವರು ಹೇಳುತ್ತಾರೆ. ಈ ವಿಷಯ ಹಾಗಿರಲಿ, ನಾವಿಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವುದೇನೆಂದರೆ, ಸಂಹಾರವಿಲ್ಲದೇ ಸೃಷ್ಟಿ ಇಲ್ಲ. ವಾಸ್ತವಿಕ ಹಾಗೂ ಸಂಭಾವ್ಯ ವೈಷಮ್ಯಗಳನ್ನು, ಅಪಸ್ವರಗಳನ್ನು ಗೆದ್ದು, ಪರಸ್ಪರ ವಿರೋಧೀ ಶಕ್ತಿಗಳ ಸಮತೋಲನ ಮಾಡದೇ ಸಾಮರಸ್ಯ ಸಿದ್ದಿಸದು. ಅಷ್ಟೇ ಅಲ್ಲ, ಸತತ ಸ್ವಭಕ್ಷಣ ಹಾಗೂ ಪರಭಕ್ಷಣಗಳಿಲ್ಲದೇ ಅಸ್ತಿತ್ವವಿಲ್ಲ. ನಮ್ಮ ಭೌತಿಕ ಜೀವನವಾದರೂ ಸಹ ನಿರಂತರ ಜನನ–ಮರಣಗಳ ಚಕ್ರವಾಗಿದೆ. ನಮ್ಮ ಶರೀರವು ಸದೈವ ಆಕ್ರಾಮಕ ಮತ್ತು ರಕ್ಷಕ ಶಕ್ತಿಗಳ ಆಗರವಾಗಿದೆ. ನಮ್ಮ ಶರೀರವನ್ನು ಆಕ್ರಮಿಸುವ ಶಕ್ತಿಗಳೂ ಇವೆ, ರಕ್ಷಿಸುವ ಶಕ್ತಿಗಳು ಇವೆ; ಪರಸ್ಪರ ಕಾದಾಡುವುದು, ಅದನ್ನು ಇದು ತಿನ್ನುವುದು, ಇದನ್ನು ಅದು ತಿನ್ನುವುದು, ಸೋಲಿಸುವುದು, ನಾಶಪಡಿಸುವುದು ಇದೇ ಜೀವನದ ನಿಯಮ. ಸೃಷ್ಟಿಯ ಆರಂಭದಲ್ಲಿಂದಲೇ ಈ ನಿಯಮ ಜಾರಿಯಲ್ಲಿದೆ. ಇದನ್ನೇ ಶ್ರೀಕೃಷ್ಣನು ಹೇಳಿದನು "ನಿನ್ನ ಸಂಗಾತಿಗಳೊಡನೆ, ಪರಿಸರದೊಡನೆ ಕಾದಲ್ಲದೇ ನೀನು ಗೆಲ್ಲಲಾರಿ; ಸಮರ, ಸಂಘರ್ಷಗಳಿಲ್ಲದೇ ನೀನು ಬದುಕಲಾರಿ; ಪರ ಜೀವನವನ್ನು ತಿಂದಲ್ಲದೇ ನೀನು ಜೀವಿಸಲಾರಿ. ಈ ಜಗತಿನಲ್ಲಿ ನಾನು ಜಾರಿ ಮಾಡಿದ ಮೊದಲ ನಿಯಮವೇ ಇದು – ಸಂಹಾರದಿಂದಲೇ ಸೃಷ್ಟಿ ಅದರಿಂದಲೇ ಸ್ಥಿತಿ".

ಪ್ರಾಚೀನ ವಿಚಾರಧಾರೆಯು ಈ ಮೂಲ ಅಂಶವನ್ನು ಜಗತ್ತಿನ ಸೂಕ್ಷ್ಮ ನಿರೀಕ್ಷಣೆಯ ಮೂಲಕ ಕಂಡುಕೊಂಡಿತು ಮತ್ತು ತಾನು ಕಂಡಷ್ಟನ್ನು ಸ್ವೀಕರಿಸಿತು.

ಪ್ರಾಚೀನ ಉಪನಿಷತ್‌ಕಾರರು ತಾವು ಕಂಡುದಕ್ಕೆ ಉಪ್ಪು–ಕಾರ ಹಚ್ಚದೇ, ಸಿಹಿ ಲೇಪನ ಮಾಡದೇ, ತುಸು ಕೂಡ ಅನ್ಯರೂಪ ಕೊಡದೇ, ಆಶಾವಾದಿಯ ವೇಶ ಧರಿಸದೇ, ಇದ್ದುದನ್ನು ಇದ್ದಕ್ಕಿದ್ದಂತೆ ವಿವರಿಸಿದರು. ಹಸಿವೆ ಎಂದರೆ ಸಾವು; ಸಾವು ಈ ಜಗತ್ತಿನ ನಿರ್ಮಾತೃ ಹಾಗೂ ಒಡೆಯ (ಬೃ.1–2) ಎಂದು ಹೇಳಿದರು. ಪ್ರಾಣಮಯ ಜೀವನವನ್ನು ಯಜ್ಞಾಶ್ವದ ರೂಪಕದ ಮೂಲಕ ವಿವರಿಸಿದರು. (ಬೃ.1.1) ಜಡ ಅಥವಾ ಭೌತಿಕವನ್ನು ಅವರು ಸಾಮಾನ್ಯವಾಗಿ ಅನ್ನ, ಆಹಾರ ಎಂದೇ ಕರೆದರು. ಏಕೆಂದರೆ ಪ್ರಾಣಿಗಳು ಅಥವಾ ಜೀವಿಗಳು ತಿನ್ನುತ್ತವೆ ಮತ್ತು ತಿನ್ನಲ್ಪಡುತ್ತವೆ – ಅದ್ಯತೇ ಅತ್ತಿಚ ಭೂತಾನಿ – ಆದ್ದರಿಂದ ಅದು ಆಹಾರವೇ ಎಂದು ಹೇಳಿದರು. ತಿನ್ನುವವನು ಕೂಡ ತಿನ್ನಲ್ಪಡುತ್ತಾನೆ: ಅವನೇ ಅನ್ನ ಹಾಗೂ ಅವನೇ ಅತ್ತಿ ಅಂದರೆ ಅನ್ನ ಭಕ್ಷಕ ಇದು ಈ ಪ್ರಪಂಚದ ನಿಯಮ. ಡಾರ್ವಿನ್ ವಾದಿಗಳು ಇದನ್ನೇ ತಮ್ಮ ಭಾಷೆಯಲ್ಲಿ, ಜೀವನದಲ್ಲಿ ಹೋರಾಟ ಅಥವಾ ಉಳಿವಿಗಾಗಿ ಸಂಗ್ರಾಮ. ಇದೇ ವಿಶ್ವ ವಿಕಾಸದ ಸೂತ್ರ ಎಂದು ಹೇಳುತ್ತಾರೆ. ಆಧುನಿಕ ವಿಜ್ಞಾನವು ಹಳೆಯ ಸತ್ಯಗಳನ್ನೇ ಹೊಸ ಶಬ್ದಗಳಲ್ಲಿ ಹೇಳುತ್ತಿದೆ; ಆಧುನಿಕ ವಿಜ್ಞಾನದ ಸಿದ್ಧಾಂತವನ್ನೇ ಹೆರಾಕ್ಲಿಟಸ್ ಹಾಗೂ ಉಪನಿಷತ್‌ಕಾರರು ಹೆಚ್ಚು ವ್ಯಾಪಕವಾಗಿ, ಖಚಿತವಾಗಿ, ರೂಪಕಗಳ ರೂಪದಲ್ಲಿ ಹೇಳಿರುವುದನ್ನು ನಾವು ಗಮನಿಸಬೇಕು – ಜರ್ಮನ್ ತತ್ವಜ್ಞಾನಿಯಾದ ನೀಟ್ಸೇ ಕೂಡ ಹೋರಾಟವು ಅಥವಾ ಯುದ್ಧವು ಜೀವನದ ಅತಿ ಪ್ರಮುಖ ಅಂಶ ಎಂದು ಹೇಳುತ್ತಾನೆ; ನಿಜವಾದ ಯೋಧನೆ ಆದರ್ಶ ಮಾನವ ಎಂದೂ ಅವನು ಹೇಳುತ್ತಾನೆ. ಮೊದಲು ಮಾನವನು ಒಂಟೆ ಮಾನವನಾಗಿರಬಹುದು, ಬಾಲ ಮಾನವನಾಗ–ಬಹುದು. ಆದರೆ, ಮಧ್ಯದ ಸ್ಥಿತಿಯಲ್ಲಿ ಅವನು ಸಿಂಹ ಮಾನವ – ನರಸಿಂಹನೇ ಆಗಬೇಕು; ಅಂದರೆ ಮಾತ್ರ, ಇವೆಲ್ಲವನ್ನು ದಾಟಿ ಅವನು ಮುಂದೆ ಪೂರ್ಣ ಮಾನವ ಆಗಲು ಸಾಧ್ಯ ಎಂದು ಅವನು ಕಾವ್ಯಾತ್ಮಕ ಭಾಷೆಯಲ್ಲಿ ಹೇಳಿದನು. ಆದರೆ ಅವನ ಸಿದ್ಧಾಂತಗಳು ಬಹಳ ಉಪಹಾಸ್ಯಕ್ಕೀಡಾದವು. ಅವನ ಸಿದ್ಧಾಂತದ ಅನೇಕ ನೈತಿಕ, ವ್ಯವಹಾರಿಕ ಅಂಶಗಳನ್ನು ನಾವು ಒಪ್ಪಲಿಕ್ಕಿಲ್ಲ. ಆದರೂ ಅವು ಸತ್ಯವಾಗಿವೆ, ನಾವು ಮರೆಮಾಡಲೆತ್ನಿಸುವ ಸತ್ಯವನ್ನು ನಮಗವು ನೆನಪಿಸುತ್ತವೆ. ನೀಟ್ಸೇ ನಮಗೆ ಅವನ್ನು ನೆನಪಿಸಿ ಉಪಕಾರ ಮಾಡಿದನು; ಏಕೆಂದರೆ ಈ ತತ್ವದ ದರ್ಶನವು ನಮ್ಮ ಮೇಲೆ ಬಲವರ್ಧಕ ಟಾನಿಕ್‌ನಂತೆ ಕೆಲಸ ಮಾಡುತ್ತದೆ. ಕೇವಲ ಸಿಹಿ, ಹಿತಕರ, ತಾತ್ವಿಕ, ಧಾರ್ಮಿಕ, ನೈತಿಕ ಭಾವನಾತ್ಮಕತೆಯು ನಮ್ಮಲ್ಲಿ

ಶೈಥಿಲ್ಯವನ್ನು, ಆರಾಮದಾಯಕ ಹಾಗೂ ಸುರಕ್ಷಿತತೆಯ ಭಾವನೆಯನ್ನು ತೊಡೆದು ಹಾಕುತ್ತದೆ. ಮಾನವನ ಮನಸ್ಸು ಭಾವನಾ ಪ್ರಧಾನವಾಗಿದ್ದು ಸುಂದರ, ಪ್ರೇಮಮಯ, ಸುಖಿ ಜೀವನವನ್ನೇ ಸದಾ ಕಲ್ಪಿಸಿಕೊಳ್ಳುತ್ತದೆ ಹಾಗೂ ಬಯಸುತ್ತದೆ. ಅಂತೆಯೇ ಅದು ಉಗ್ರವಾದ ಮೃತ್ಯುವಿನಿಂದ ಮುಖ ತಿರುವುತ್ತದೆ. ಆ ಬಗ್ಗೆ ವಿಚಾರ ಮಾಡಲೂ ಸಹ ಹೆದರುತ್ತದೆ (ಕೆಲವರಂತೂ ಸಾವು ಎಂಬ ಶಬ್ದವನ್ನು ಉಚ್ಚರಿಸಲೂ ಕೂಡ ಹೆದರುತ್ತಾರೆ) ಮಾನವನು ಶಿವನನ್ನು ಪೂಜಿಸುತ್ತಾನೆ. ಆರಾಧಿಸುತ್ತಾನೆ. ಆದರೆ ಆತನ ರುದ್ರ ರೂಪವನ್ನು ನೋಡಲು ಕೂಡ ಹೆದರುತ್ತಾನೆ. ಜೀವನದ ಸ್ವರೂಪವನ್ನು ಅದಿರುವಂತೆಯೇ ಸ್ವೀಕರಿಸಲು ನಾವು ಕಲಿಯಬೇಕು. ಆ ಪ್ರಾಮಾಣಿಕತೆ, ಧೈರ್ಯ ಇಲ್ಲದೇ ಹೋದರೆ ಜೀವನದಲ್ಲಿನ ದ್ವಂದ್ವಗಳನ್ನು, ಗೊಂದಲಗಳನ್ನು ಪರಿಹರಿಸುವ ಉಪಾಯ ನಮಗೆ ತೋಚುವುದೇ ಇಲ್ಲ. ಮೊದಲು ಈ ಪ್ರಪಂಚದಲ್ಲಿ ಏನಿದೆ? ಏನಿಲ್ಲ? ಜೀವನ ಅಂದರೆ ಏನು? ಇದನ್ನೆಲ್ಲ ನಾವು ಚೆನ್ನಾಗಿ ತಿಳಿದುಕೊಳ್ಳಬೇಕು. ಅಂದರೆ ಮಾತ್ರ ಅವು ಹೇಗಿರಬೇಕು. ಅವುಗಳನ್ನು ಆ ರೀತಿ ಮಾರ್ಪಡಿಸುವುದು ಸಾಧ್ಯವೇ, ಸಾಧ್ಯವಿದ್ದರೆ ಹೇಗೆ ಎಂಬುದನ್ನು ಕಂಡುಕೊಂಡು ಆ ದಿಶೆಯಲ್ಲಿ ಪ್ರಯತ್ನ ಮಾಡಲು ಪ್ರಯತ್ನಿಸಲು ಸಾಧ್ಯವಾಗುವುದು. ಜೀವನದಲ್ಲಿನ ಅವಿಧಾಯಕ ಅಥವಾ ನಿಷೇಧಾತ್ಮಕ ರೂಪದ ಆಂತರ್ಯದಲ್ಲಿ, ಅಂತಿಮ ಸಾಮರಸ್ಯದ ಸಾಧ್ಯತೆಯ ರಹಸ್ಯ ಅಡಗಿದ್ದರೆ, ಅದನ್ನು ಬಹಿರ್ಗತಗೊಳಿಸಿ ಸಾಮರಸ್ಯವನ್ನು ಸ್ಥಾಪಿಸಲು ಸಾಧ್ಯವಾಗುವುದು. ಪ್ರತಿರೋಧಕ, ನಿಷೇಧಾತ್ಮಕ ಉಗ್ರರೂಪವನ್ನು ಕಡೆಗಣಿಸಿದರೆ, ಅಥವಾ ಹೆದರಿದರೆ ಸಾಮರಸ್ಯ ಸಾಧ್ಯತೆಯ ಆ ಅಂಶಕ್ಕೆ ನಾವು ಮುಖ ತಿರುವಿದಂತಾಗುತ್ತದೆ. ಅದರಿಂದ ದೂರ ಹೋದಂತಾಗುತ್ತದೆ. ಒಂದು ವೇಳೆ ಯಾವುದೇ ನಿಷೇಧಾತ್ಮಕ ಅಂಶದಲ್ಲಿ ಸಾಮರಸ್ಯದ ಸಾಧ್ಯತೆಯ ಎಳೆ ಇಲ್ಲದೇ ಹೋದರೆ, ಅದು ಮನುಕುಲದ ಶತ್ರುವಾಗಿದ್ದು, ಅದನ್ನು ತುಳಿದು ಕೆಡವಲೇಬೇಕು. ಕತ್ತರಿಸಿ ಹೊರಹಾಕಲೇಬೇಕು. ಅದನ್ನು ಬಿಟ್ಟು ಅಂಥ ಅಂಶವನ್ನು ನಿರ್ಲಕ್ಷ ಮಾಡಿದರೆ, ನೋಡಿಯೂ ನೋಡದಂತೆ ಮುಖ ತಿರುವಿದರೆ ನಾವು ಸಾಮರಸ್ಯವನ್ನು ಸಾಧಿಸಲಾರೆವು – ನಮ್ಮ ಜೀವನದ ಬದಲಾವಣೆ ಕೇವಲ ಕನಸಾಗಿ ಉಳಿಯುವುದು.

ಯುದ್ಧ, ವಿನಾಶ ಇವು ಕೇವಲ ವಿಶ್ವದ ವ್ಯಾಪಕ ನಿಯಮಗಳೇನಲ್ಲ, ಅವು ವಿಶ್ವದಲ್ಲಿ ಮಾತ್ರ ಕಂಡುಬರುವುದಿಲ್ಲ. ನಮ್ಮ ಭೌತಿಕ ಜೀವನದಲ್ಲಿ ಕೂಡ

ಸಾಮಾನ್ಯ ಅಂಶಗಳಾಗಿವೆ. ನಮ್ಮ ದೈನಂದಿನ ಜೀವನದಲ್ಲಿ, ಬೌದ್ಧಿಕ, ಸಾಮಾಜಿಕ, ರಾಜಕೀಯ ಅಥವಾ ನೈತಿಕ ಹೀಗೆ ಯಾವುದೇ ಕ್ಷೇತ್ರವಿರಲಿ, ಸಂಘರ್ಷ, ಹೋರಾಟವಿಲ್ಲದೇ ನಾವು ಒಂದೇ ಒಂದು ಹೆಜ್ಜೆಯನ್ನು ಕೂಡ ಮುಂದಿಡಲಾರೆವು – ಯಾವುದು ಈಗಾಗಲೇ ಇದೆಯೋ ಮತ್ತು ಜೀವಿಸಿದೆಯೋ ಮತ್ತು ಯಾವುದು ಇರಲು ಹಾಗೂ ಜೀವಿಸಲು ಬಯಸುವುದೋ ಅವುಗಳ ನಡುವೆ ಸಂಘರ್ಷ ಇರುವಂಥದೇ, ಅದನ್ನು ತಪ್ಪಿಸಲು ಸಾಧ್ಯವಿಲ್ಲ. ಅಷ್ಟೇ ಅಲ್ಲ, ಅವುಗಳ ಹಿಂದೆ, ಅವುಗಳಿಗೆ ಸಹಾಯಕವಾಗಿ ನಿಂತಿರುವ ಅಂಶಗಳಲ್ಲಿ ಕೂಡ ಯುದ್ಧವೆಂಬುದು ಅನಿವಾರ್ಯ. ಇನ್ನೂ ಗಮನಾರ್ಹವಾದ ಅಂಶವೇನೆಂದರೆ, ಮಾನವರಾಗಿ ನಾವೂ ಹಾಗೂ ಇತರ ವಸ್ತುಗಳು, ಯಾವುದಕ್ಕೂ ತೊಂದರೆಯಾಗದಂತೆ, ಹಿಂಸೆಯಾಗದಂತೆ, ಬೆಳೆಯಲು, ಮುಂದವರಿಯಲು, ಸಾರ್ಥಕತೆ ಪಡೆಯಲು ಸಾಧ್ಯವೇ ಇಲ್ಲ. **ಅಹಿಂಸೆಯು ಅತ್ಯಂತ ಉನ್ನತ ಆದರ್ಶವಾಗಿದ್ದರೂ ಸಹ ನಾವದನ್ನು ಪಾಲಿಸಲಾರೆವು. ಅದಿಲ್ಲದೇ ಮಾನವನ ಪ್ರಸ್ತುತ ಈ ಜಗದ ಪ್ರಗತಿ, ವಿಕಾಸ ಅಸಾಧ್ಯ.** ನಾವು ಕೇವಲ ಆತ್ಮ ಶಕ್ತಿಯನ್ನು ಪ್ರಯೋಗಿಸುತ್ತೇವೆ. ಯುದ್ಧದಂಥ ಅನ್ಯ ಹಿಂಸಾ ಮಾರ್ಗದ ಮೂಲಕ ಬೇರೆಯವರಿಗೆ ತೊಂದರೆ ಮಾಡದೇ ನಾವು ಚೆನ್ನಾಗಿ, ಆದರ್ಶವಾಗಿ ಬಾಳುತ್ತೇವೆ ಅನ್ನುವುದು ಆಗದ ಮಾತು. ಹಾಗೆ ಹೇಳಬಹುದೇನೋ, ಅದು ಒಳ್ಳೆಯದು ಕೂಡ ನಿಜವೇ; ಆದರೆ ಹಾಗೆ ಜೀವಿಸಲು ಸಾಧ್ಯವಿಲ್ಲ. ಕನಿಷ್ಠ ಪಕ್ಷ ನಮ್ಮಲ್ಲಿ ಆತ್ಮ ಶಕ್ತಿ ಜಾಗೃತವಾಗುವವರೆಗಾದರೂ ನಾವು ಹಾಗೆ ಮಾಡಲೇಬೇಕು. ಇಲ್ಲವಾದರೆ ಬೇರೆಯವರಲ್ಲಿ, ಬೇರೆ ರಾಷ್ಟ್ರಗಳಲ್ಲಿ ಇರುವ ಅಸುರಿ ಶಕ್ತಿಯು ನಮ್ಮನ್ನು, ನಮ್ಮ ರಾಷ್ಟ್ರವನ್ನು ಕೂಡ ಸುಟ್ಟು ಹಾಕಿ ಬಿಡಬಹುದು. ಅದಕ್ಕೆ ಪ್ರತಿರೋಧವೇ ಇಲ್ಲವಾದರೆ ಅದು ತಾಂಡವ ಆಡಿ ಬಿಡುವುದು – ನಮ್ಮ ಅಹಿಂಸೆಯೇ ಆಗ ರಾಕ್ಷಸೀ ಪ್ರವೃತ್ತಿಯು ಗೈಯುವ ವಿನಾಶಕ್ಕೆ ಹಿಂಸೆಗೆ ಕಾರಣೀಭೂತವಾಗುವುದು. ಅಹಿಂಸೆಯ ಆದರ್ಶ ಒಳ್ಳೆಯದಿರಬಹುದು, ಮುಂದೊಂದು ದಿನ ಅದರಿಂದಾಗಿ ಒಳ್ಳೆಯ ವ್ಯವಸ್ಥೆ ನಿರ್ಮಾಣವಾಗಲೂಬಹುದು. ಆದರೆ ಆತ್ಮ ಶಕ್ತಿಯು ಇನ್ನೂ ಪರಿಣಾಮಕಾರಕವಾಗದೇ ಇರುವಾಗ ಹೆಚ್ಚಿನ ವಿನಾಶ ಸಂಭವಿಸುತ್ತದೆ. ಅದನ್ನು ಪ್ರಯೋಗಿಸಿ ನೋಡಿದವರಿಗೆ ಮಾತ್ರ, ಅದು ಅನೇಕ ಖಡ್ಗಗಳಿಗಿಂತ, ತೋಪ್‌ಗಳಿಗಿಂತ ಹೇಗೆ ಹೆಚ್ಚು ಭೀಕರ ಹಾಗೂ ವಿನಾಶಕಾರಕ ಪರಿಣಾಮವನ್ನುಂಟು ಮಾಡಬಲ್ಲದೆಂಬುದು ಗೊತ್ತು. ಬರೀ ಆತ್ಮಶಕ್ತಿಯ ಕ್ರಿಯೆ

ಮತ್ತು ಪರಿಣಾಮಗಳನ್ನು ಮಾತ್ರ ನೋಡದೇ ಅವುಗಳ ಆಚೆಗೂ ನೋಡಬೇಕಾಗುತ್ತದೆ; ಅದರ ತಾತ್ಕಲಿಕ ಪರಿಣಾಮಗಳು ಎಷ್ಟೇ ಪರಿಣಾಮಕಾರಿ–ಯಾಗಿದ್ದರೂ ದೀರ್ಘಕಾಲಿಕ ಪರಿಣಾಮಗಳು, ಅವುಗಳ ಮೂಲಕ ಆಗುವ ವಿನಾಶವನ್ನು ಕೂಡ ಅಂದಾಜಿಸಬೇಕಾಗುತ್ತದೆ. ಹಿಂಸೆ, ಕೆಡಕು ಇವುಗಳಿಂದ ಜೀವಿಸುವವರನ್ನು ನಾಶ ಮಾಡದೇ ಕೆಡಕನ್ನು ನಾಶ ಮಾಡುವುದು ಹೇಗೆ? ಹಿಂಸೆ ಮಾಡುವುದರಿಂದ ನಮ್ಮ ಮನಸ್ಸಿಗೆ, ಭಾವನೆಗೆ ತುಸು ಧಕ್ಕೆ ಯಾಗಬಹುದು, ಕ್ಷತಿ ಆಗಬಹುದು; ಆದರೆ ಸಮಾಜದಲ್ಲಿ ಅದು ಮಾಡುವ ನೋವು, ತೊಂದರೆಗಳನ್ನು ಅಲಕ್ಷಿಸಲಾಗದು.

ಅಲ್ಲದೇ, ನಾವು ಆತ್ಮ ಶಕ್ತಿಯನ್ನುಪಯೋಗಿಸಿದಾಗಲೆಲ್ಲ. ನಾವು ಕರ್ಮದ ಬೃಹತ್ ಶಕ್ತಿಯನ್ನೇ ಜಾಗೃತಗೊಳಿಸಿ ಬಿಡುತ್ತೇವೆ; ಆದರೆ ಅದರ ನಂತರ ಆಗಬಹುದಾದ ಅನಾಹುತಗಳ ಮೇಲೆ ನಮ್ಮ ನಿಯಂತ್ರಣ ಸಾಗುವುದಿಲ್ಲ. ವಿಶ್ವಾಮಿತ್ರನ ಸೈನ್ಯ ಬಲದ ಎದುರು, ಅದು ಮಾಡುವ ಹಿಂಸಾತ್ಮಕ ಅನಾಹುತದ ಎದುರು ವಶಿಷ್ಠನು ಆತ್ಮ–ಶಕ್ತಿಯನ್ನೇನೋ ಪ್ರಯೋಗಿಸುತ್ತಾನೆ. ಹೂಣರು, ಶಕರು, ಪಲ್ಲವರು ಇವರೆಲ್ಲರ ವಿರುದ್ಧ ಆತ್ಮ ಶಕ್ತಿಯನ್ನು ಅವನು ಪ್ರಯೋಗಿಸುತ್ತಾನೆ. ಆಧಾತ್ಮಿಕ ವ್ಯಕ್ತಿಯು ಸ್ವಭಾವತಃ ಶಾಂತನೂ, ನಿಶ್ಚಲನೂ ಆಗಿರುವುದರಿಂದ ಇಂಥ ಪ್ರಸಂಗಗಳಲ್ಲಿ ವಿಶ್ವದ ಪ್ರಚಂಡ ಶಕ್ತಿಗಳನ್ನು ಸೇಡಿನ ಕ್ರಿಯೆಯ ಸಲುವಾಗಿ ಜಾಗೃತಗೊಳಿಸಿದಂತಾಗುತ್ತದೆ; ಅದರಿಂದ ಮುಂದೆ ಏನೆಲ್ಲ ಪರಿಣಾಮಗಳಾದವು ಎಂಬುದನ್ನು ನಾವು ಕೇಳಿ ಬಲ್ಲೆವು. ಕೆಡಕು, ಅನ್ಯಾಯ, ಹಿಂಸೆ ಮಾಡುವವರನ್ನು ಹಿಂಸಾತ್ಮಕ ಶಕ್ತಿಯಿಂದಲಾದರೂ ತಡೆಯಬೇಕು; ಹಾಗೆ ತಡೆಯುವುದೇ ನಿಜವಾಗಿ ದಯಾಳುತನವಾಗುವುದು – ಅನ್ಯಥಾ ಅವರು ಅಳತೆ ಇಲ್ಲದಂತೆ ಕೆಡಕು ಮಾಡಬಹುದು ಹಾಗೂ ತತ್ಪರಿಣಾಮವಾಗಿ ತಾವು ಮಾಡಿದ್ದಕ್ಕಿಂತ ಹೆಚ್ಚಿನ ಹಿಂಸೆಗೆ ಬಲಿಯಾಗಿ ಪ್ರಕೃತಿಯಲ್ಲಿ ಹೆಚ್ಚಿನ ಹಾನಿಗೆ ಕಾರಣವಾಗುತ್ತಾರೆ. ಈ ಪ್ರಪಂಚದಲ್ಲಿ ಹೋರಾಟ, ವಿನಾಶ ಇರಬಾರದು ಅನ್ನವುದಾದರೆ, ನಾವು ಹಿಂಸೆಗೆಳೆಸದೇ ನಮ್ಮ ಕೈಗಳನ್ನು ಸ್ವಚ್ಚವಾಗಿ, ಹೃದಯವನ್ನು ಅಕಳಂಕಿತವಾಗಿ ಇಟ್ಟುಕೊಂಡರೆ ಸಾಲದು, ಹಿಂಸೆ, ಹಿಂಸಾತ್ಮಕ ವಿನಾಶ ಕಾರ್ಯಕ್ಕೆ ಏನು ಕಾರಣವೋ ಅದನ್ನು ಬೇರು ಸಹಿತ ಕಿತ್ತೆಸೆಯುವ ಪ್ರಯತ್ನ ಮಾಡಬೇಕು. ಕೇವಲ ನಿಷ್ಕ್ರೀಯತೆ, ತಮಸ್ಸು ಜಡತೆಗಳ ಮೂಲಕ ಕೆಡಕಿನ ವಿರುದ್ಧ ಏನೂ ಪ್ರತಿರೋಧ

ಮಾಡದೇ ಹೋದರೆ, ಅಥವಾ ವಿರೋಧ ಮಾಡಲು ಶಕ್ತಿ ಸಾಲದೇ ಹೋದರೆ, ರಾಜಸಿಕ ಶಕ್ತಿಯು ಮಾಡಬಹುದಾದ ಹಾನಿಗಿಂತ ಹೆಚ್ಚಿನ ಹಾನಿಯನ್ನು ಈ ತಮಸ್ಸು, ನಿಷ್ಕ್ರೀಯತೆ ಮಾಡುತ್ತದೆ. ರಾಜಸಿಕ ಶಕ್ತಿಯಾದರೋ ವಿನಾಶ ಮಾಡುವುದಕ್ಕಿಂತ ಹೆಚ್ಚಿನ ಸೃಜನಶೀಲ ಕೆಲಸವನ್ನು ಮಾಡಬಲ್ಲದು. ಆದ್ದರಿಂದ, ವೈಯುಕ್ತಿಕ ಕಾರ್ಯದ ವಿಚಾರಕ್ಕೆ ಬಂದರೆ, ವ್ಯಕ್ತಿಯೊಬ್ಬನು ತಾನು ಹೋರಾಟದಿಂದ ದೂರ ಉಳಿದ ಮಾತ್ರಕ್ಕೆ, ವಿನಾಶವನ್ನು ತಾನು ವ್ಯಕ್ತಿಗತವಾಗಿ ಮಾಡುವುದು ಬೇಡ ಎಂದು ಬಿಟ್ಟುಬಿಟ್ಟರೆ, ಅದೇನೋ ಅವನ ವ್ಯಕ್ತಿಗತ ನೈತಿಕ ಸಂವೇದನೆಗೆ ಸಹಾಯ ಮಾಡಬಹುದೇನೋ, ಆದರೆ ಅದು ಅನ್ಯ ಜೀವಿಗಳ, ಪ್ರಾಣಿಗಳ, ಮನುಷ್ಯರ ಹತ್ಯೆ ಗೈಯುವವನ್ನು ಮಟ್ಟ ಹಾಕದೇ ಹಾಗೆಯೇ ಬಿಟ್ಟಂತಾಗುವುದು.

ಮನುಕುಲದ ಇತಿಹಾಸವನ್ನು ನೋಡಿದರೆ, ಆರಂಭದಿಂದ ಇಂದಿನವರೆಗೊ, ಈ ಸಂಘರ್ಷದ, ಹೋರಾಟದ ತತ್ವವು ವಿಶ್ವದಲ್ಲಿ ಅನೂಚಾನವಾಗಿ ಇದ್ದೇ ಇದೆ ಎಂಬುದು ನಮಗೆ ಸ್ಪಷ್ಟವಾಗುತ್ತದೆ. ಆದರೆ ನಾವು ಆ ತತ್ವವನ್ನು ಸಾಧ್ಯವಾದಷ್ಟು ಮೃದುವಾಗಿಸಿ ಹೇಳುವ ಪ್ರಯತ್ನ ಮಾಡುತ್ತೇವೆ; ವಿಶ್ವದಲ್ಲಿರುವ ಇತರ ತತ್ವಗಳ ಮೇಲೆ ಹೆಚ್ಚು ಒತ್ತು ನೀಡಿ ಮಾತನಾಡುತ್ತೇವೆ. ಈ ಜಗತ್ತಿನಲ್ಲಿ ಕೇವಲ ಸಂಘರ್ಷ ಮತ್ತು ವಿನಾಶ ಇವೆರಡೇ ತತ್ವಗಳೇ ಇವೆ ಅಂತೇನಿಲ್ಲ; ಅನ್ಯಾನ್ಯ ವಿರೋಧಿ ಮತ್ತು ಅನ್ಯಾನ್ಯವೈರ ಸಾಧಿಸುವ ತತ್ವಗಳ ಜೊತೆಜೊತೆಗೆ ಅನ್ಯಾನ್ಯ ಸಹಾಯಕ, ಅನ್ಯೋನ್ಯ ಸಂಬಂಧ ಬೆಸೆಯುವಂಥ ತತ್ವಗಳೂ, ಇರುವುದನ್ನು ನಾವು ಮನಗಾಣುತ್ತೇವೆ. ಇಲ್ಲಿ ಅಹಂಪ್ರೇರಿತ ಸ್ವಾರ್ಥ ಸಾಧಿಸುವ ಪ್ರಯತ್ನ ಹೇಗಿದೆಯೋ ಹಾಗೆಯೇ ಅನ್ಯೋನ್ಯ ಪ್ರೇಮ ಅದಕ್ಕಿಂತಲೂ ಹೆಚ್ಚು ಪ್ರಭಾವಶಾಲಿ ಹಾಗೂ ವ್ಯಾಪಕವಾಗಿದೆ. ಇನ್ನೊಬ್ಬರ ಹಿತವನ್ನು ಹೋಮ ಮಾಡಿ ತಮ್ಮ ಸ್ವಾರ್ಥ ಸಾಧಿಸುವ ವೃತ್ತಿ ಇರುವಂತೆಯೇ ಇನ್ನೊಬ್ಬರ ಹಿತಕ್ಕಾಗಿ ತಮ್ಮ ಸ್ವಾರ್ಥವನ್ನೇ ಹೋಮ ಮಾಡುವಂಥ ಅದ್ಭುತ ವೃತ್ತಿ ಕೂಡ ಇದೆ. ಆದರೆ ಈ ಸಕಾರಾತ್ಮಕ ಒಳ್ಳೆಯ ಪ್ರವೃತ್ತಿಯು ವ್ಯವಹಾರದಲ್ಲಿ ಹೇಗೆ ಉಪಯೋಗವಾಗುತ್ತದೆ, ಎಷ್ಟರ ಮಟ್ಟಿಗೆ ಫಲಕಾರಿಯಾಗಿದೆ ಎನ್ನುವುದನ್ನು ಪರಿಶೀಲಿಸಿದರೆ ವಿರೋಧಿ ಶಕ್ತಿಗಳನ್ನು ನಿರ್ಲಕ್ಷಿಸುವ ಅಥವಾ ನೋಡಿಯೂ ನೋಡದಂತೆ ನಟಿಸುವುದು ನಮ್ಮಿಂದ ಸಾಧ್ಯವಾಗದು – ಸಂಬಂಧಗಳನ್ನು ಬೆಳೆಸುವ, ಜೋಡಿಸುವ ಅಥವಾ ಸಂಘಟನೆ

ಮಾಡುವುದು ಕೇವಲ ಅನ್ಯೋನ್ಯ ಸಹಕಾರಿತ್ವಕ್ಕಾಗಿ ಅಲ್ಲ. ಬದಲಾಗಿ ಅದರ ಉಪಯೋಗವನ್ನು ಸಂರಕ್ಷಣೆಗಾಗಿ ಹಾಗೂ ಆಕ್ರಮಣದ ಸಲುವಾಗಿ ಸಹ ಮಾಡಬೇಕಾಗುವುದು. ಜೀವನದ ಹೋರಾಟದಲ್ಲಿ ನಮ್ಮನ್ನು ವಿರೋಧಿಸುವ, ನಮ್ಮ ಮೇಲೆ ಆಕ್ರಮಣ ಮಾಡುವ ಸಂಗತಿ ಅಥವಾ ವ್ಯಕ್ತಿಗಳ ವಿರುದ್ಧ ನಾವು ಎದ್ದು ನಿಲ್ಲಲು ಶಕ್ತಿ ಸಂಘಟನೆಯ ಉಪಯೋಗ ಮಾಡಬೇಕಾಗಿರುತ್ತದೆ. ಯುದ್ಧ, ಅಹಂತಾ ಮತ್ತು ಜೀವಜೀವಗಳ ನಡುವಿನ ಸ್ವಾರ್ಥಪರ ಸಂಘರ್ಷಗಳಿಗಾಗಿ ಸಹ ಇಂಥ ಸಂಘಟನಾ ಶಕ್ತಿಯ ಉಪಯೋಗವಾಗಿದೆ ಎಂಬುದನ್ನು ಸಹ ಅಲ್ಲಗೆಳೆಯಲಾಗುವುದಿಲ್ಲ. ಪ್ರೇಮದ ಕಥೆ ಕೂಡ ಇದೇ ಪ್ರಕಾರದ್ದೇ ಆಗಿದೆ. ಪ್ರೇಮವು ಯಾವಾಗಲೂ ಮೃತ್ಯುವಿನ ಶಕ್ತಿಯೇ ಆಗಿದೆ. ವಿಶೇಷವಾಗಿ, ಒಳ್ಳೆಯತನದ ಮೇಲಿನ ಪ್ರೀತಿ, ದೇವರ ಮೇಲಿನ ಭಕ್ತಿ ಇವೂ ಸಹ ಮಾನವನ ಅಹಂತೆಯ ಮಟ್ಟವನ್ನು ಮುಟ್ಟಿ, ಅನೇಕ ಹೋರಾಟ, ಯುದ್ಧ, ವಿನಾಶಗಳಿಗೆ ಕಾರಣವಾಗಿರುವುದೇನೂ ಸುಳ್ಳಲ್ಲ. ಆತ್ಮಾರ್ಪಣೆ ನಿಜವಾಗಿ ದೊಡ್ಡ ಗುಣ, ಉದಾತ್ತವಾದದ್ದು ನಿಜ, ಅದರಲ್ಲಿ ಸಂದೇಹವಿಲ್ಲ; ಆದರೆ, ಅತ್ಯಂತ ಉದಾತ್ತತಮ ಆತ್ಮಯಜ್ಞದ ಅರ್ಥವೇನು? ಜೀವನವು ಮರಣದ ಅಧಾರದ ಮೇಲೆ ನಿಂತಿದೆ ಎಂಬ ವಿಶ್ವ ನಿಯಮವನ್ನು ಇಂಥ ಆತ್ಮಾರ್ಪಣೆಯ ಮೂಲಕವೇ ನಾವು ಗುರುತಿಸುತ್ತೇವೆ. ಯಾವುದಾದರೊಂದು ಶಕ್ತಿಯ ವೇದಿಕೆಯ ಮೇಲೆ ಆತ್ಮ ಬಲಿದಾನ ಇದೇ ಈ ಆತ್ಮಾರ್ಪಣೆಯ ಅರ್ಥ! “ನಿಮಗಿಷ್ಟವಾದ ಕೆಲಸಕ್ಕಾಗಿ ಬೇಕಾದರೆ ನನ್ನ ಬಲಿ ತೆಗೆದುಕೊಳ್ಳಿ” ಎಂದೇ ಆ ಶಕ್ತಿಗೆ ಆಹ್ವಾನ ನೀಡಿದಂತಾಗುವುದು ಮತ್ತು ಅಗತಿಕನಂತೆ, ಅನಿವಾರ್ಯವಾಗಿ ಬಲಿದಾನ ನೀಡಬೇಕಾದ ಸಂದರ್ಭ ಬರುವುದು. ಇದೇ ಆತ್ಮಯಜ್ಞದ ಅಥವಾ ಆತ್ಮಾರ್ಪಣೆಯ ಅರ್ಥ – ತಾಯಿ ಪಕ್ಷಿಯು ತನ್ನ ಮರಿಗಳಿಗಾಗಿ ಭಕ್ಷಕ ಪ್ರಾಣಿಯ ವಿರುದ್ಧ ಪ್ರಾಣಾಂತ ಹೋರಾಡುವುದು, ದೇಶಭಕ್ತ ಸೈನಿಕನು ದೇಶಕ್ಕಾಗಿ, ತನ್ನ ದೇಶದ ಸ್ವಾತಂತ್ರ್ಯಕ್ಕಾಗಿ ಸಾಯಲು ಸಿದ್ಧನಾಗುವುದು, ಧರ್ಮಕ್ಕಾಗಿ ಅಥವಾ ಒಂದು ಧಾರ್ಮಿಕ ಧ್ಯೆಯಕ್ಕಾಗಿ ಆತ್ಮ ಬಲಿದಾನ ಗೈಯುವ ಧಾರ್ಮಿಕ ಇವೆಲ್ಲ ಉಚ್ಚತಮ ಆತ್ಮಯಜ್ಞದ ಉದಾಹರಣೆಗಳೇ ಮತ್ತು ಈ ಕೆಳಮಟ್ಟದ ಮತ್ತು ಮೇಲು ವರ್ಗದ ಪ್ರಾಣಿಗಳಲ್ಲಿ ಕಂಡುಬರುವ ಇಂಥ ಆತ್ಮಯಜ್ಞದ ನಿದರ್ಶನಗಳು ಏನನ್ನು ಹೇಳುತ್ತವೆ ಅನ್ನುವುದು ವ್ಯಾಖ್ಯಾನದ ಅಗತ್ಯವಿಲ್ಲದೇ ಸ್ಪಷ್ಟವಾಗುವುದು.

ಅದರೆ ಇಂಥ ಆತ್ಮಯಜ್ಞದ ನಂತರದ ಪರಿಣಾಮಗಳನ್ನು ಕಂಡಾಗ ನಮ್ಮ ಭ್ರಮನಿರಸನವಾಗುತ್ತದೆ. ಆಶಾವಾದದ ಮೇಲೆ ಬಹು ದೊಡ್ಡ ಹೊಡೆತ ಬೀಳುತ್ತದೆ. ದೇಶವು ಸ್ವತಂತ್ರವಾಗಲಿ ಎಂದು ದೇಶಭಕ್ತನೇನೋ ಆತ್ಮಬಲಿದಾನ ನೀಡುತ್ತಾನೆ; ನಿಜ, ಆದರೆ ಯಾವ ದೇಶಕ್ಕಾಗಿ ಆತನು ತನ್ನ ಪ್ರಾಣವನ್ನೇ ತೆತ್ತನೋ, ಆ ದೇಶವು ಕೆಲ ದಶಕಗಳ ನಂತರ ತನ್ನ ನೋವು, ರಕ್ತಪಾತ ಎಲ್ಲವನ್ನು ಮರೆತು, ಬೇರೆ ದೇಶಗಳ ಮೇಲೆ ಆಕ್ರಮಣ ಮಾಡುತ್ತದೆ. ಅಲ್ಲಿನ ಜನರನ್ನು ಹಿಂಸಿಸುತ್ತದೆ, ಬೇರೆ ಬೇರೆ ದೇಶಗಳ ಮೇಲೆ ಏರಿ ಹೋಗಿ ಅಲ್ಲಿನ ವಸಾಹತುಗಳನ್ನು ಗೆದ್ದು ತನ್ನ ಅಧಿಪತ್ಯ ಸ್ಥಾಪಿಸಿ ತನ್ನ ಸಾರ್ವಭೌಮತ್ವ ಮೆರೆಯುತ್ತದೆ. ಕ್ರಿಶ್ಚಿಯನ್ ಹುತಾತ್ಮರು ಸಾವಿರಾರು ಸಂಖ್ಯೆಯಲ್ಲಿ ಸಾಯುತ್ತಾರೆ. ಸಾಮ್ರಾಜ್ಯ ಶಾಹಿಯ ಎದುರು ತಮ್ಮ ಆತ್ಮಶಕ್ತಿಯನ್ನು ನಿಲ್ಲಿಸಿ ಕ್ರಿಸ್ತನು ಗೆಲ್ಲಲಿ ಎಂದು ಕಾದುತ್ತಾರೆ. ಆದರೆ ಕ್ರಿಶ್ಚಿಯನ್ ಧರ್ಮ ಉಳಿಯುತ್ತದೆ, ಕ್ರಿಸ್ತ ಮಾತ್ರ ಉಳಿಯುವುದಿಲ್ಲ. ಆತ್ಮಶಕ್ತಿ ಗೆಲ್ಲುತ್ತದೆ, ಕ್ರಿಶ್ಚಿಯನ್ ಧರ್ಮ ಗೆಲ್ಲುತ್ತದೆ. ಆದರೆ ಏಸೂ ಕ್ರಿಸ್ತ ಮಾತ್ರ ಸೋತು ಹೋಗುತ್ತಾನೆ. ಯುದ್ಧ ವಿಜಯೀ ಕ್ರಿಶ್ಚಿಯನ್ ಧರ್ಮವು ಸಮರ್ಥ ಸೈನ್ಯ ಶಕ್ತಿಯಾಗಿ ಬದಲಾಗುತ್ತದೆ. ಚರ್ಚ್ ಅಧಿಕಾರ ಮಾಡಲಾರಂಭಿಸುತ್ತದೆ. ಕೊನೆಗೆ ತಾನು ಯಾವ ಜನಾಂಗವನ್ನು, ಧರ್ಮವನ್ನು ನಾಶಮಾಡಿತೋ ಅದಕ್ಕಿಂತ ಹೆಚ್ಚು ಧರ್ಮಾಂಧವಾಗಿ ಬದಲಾಗಿ, ಕುರುಡು ರಾಜ್ಯಭಾರ ಮಾಡತೊಡಗುತ್ತದೆ. ಇದೆಲ್ಲವನ್ನು ನಾವು ಇತಿಹಾಸದಿಂದ ತಿಳಿದಿದ್ದೇವೆ. ಧರ್ಮಗಳು ಸಂಘಟನೆ ಮಾಡಿಕೊಂಡು, ಶಕ್ತಿ ವರ್ಧನೆ ಮಾಡಿಕೊಂಡು, ಪರಸ್ಪರ ಹೋರಾಟ, ಯುದ್ಧಗೈಯುತ್ತ, ಅವಶ್ಯಬಿದ್ದರೆ ರಕ್ತಪಾತ ಕೂಡ ಮಾಡುತ್ತ ಪ್ರಬಲ ರಾಜಕೀಯ ಶಕ್ತಿಯಾಗಿ ಮಾರ್ಪಟ್ಟು ಜಗತ್ತನ್ನೇ ತನ್ನ ಆಡಳಿತದ ಮುಷ್ಟಿಯಲ್ಲಿ ಹಿಡಿಯಲು ಪ್ರಯತ್ನಿಸುವುದು ನಮಗೆ ಅಪರಿಚಿತವೇನಲ್ಲ.

ಇದರಿಂದ ನಮಗೆ ತಿಳಿದುಬರುವುದೇನೆಂದರೆ, ಜೀವನದಲ್ಲೊಂದು ಮೂಲ ಘಟಕ ಇದೆ, ಅದು ಆರಂಭದಿಂದಲೂ ಇರುವ ಅಂಶವೇ, ಅದನ್ನು ಹೇಗೆ ಗೆಲ್ಲಬೇಕೆಂಬುದು ನಮಗೆ ಗೊತ್ತೇ ಇಲ್ಲ; ಕಾರಣವೇನಿರಬಹುದು? ಒಂದು ಅದು ಅಜೇಯವಾಗಿರಬಹುದು, ಅದನ್ನು ಗೆಲ್ಲುವುದು ಅಸಾಧ್ಯವಾಗಿರಬೇಕು ಅಥವಾ ನಾವು ಅದನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಚೆನ್ನಾಗಿ, ಬಲವಾಗಿ ಪರಿಶೀಲಿಸಿಲ್ಲ, ಅದೇನೆಂಬುದನ್ನು ಆಳವಾಗಿ, ಶಾಂತವಾಗಿ ಕುಳಿತು ಚಿಂತಿಸಿಲ್ಲ. ನಾವು ಈ

ಜಗತ್ತನ್ನು, ಜೀವನದ ಸ್ವರೂಪವನ್ನು ನೇರವಾಗಿ ನೋಡಲು ಕಲಿಯಬೇಕು, ಯಥಾರ್ಥ ಪರಿಹಾರ ಹುಡುಕುವ ನಮ್ಮ ಪ್ರಯತ್ನ ಪ್ರಮಾಣಿಕವಾಗಿದ್ದರೆ, ಆ ಪರಿಹಾರ ಎಂಥದೇ ಇರಲಿ, ಹೇಗೇ ಇರಲಿ, ನಾವು ನೇರವಾಗಿ ನೋಡಲೇಬೇಕು, ಸಮಸ್ಯೆಯನ್ನು ಚೆನ್ನಾಗಿ ಅರಿತುಕೊಳ್ಳಲೇಬೇಕು – ಜೀವನವನ್ನು ಅಥವಾ ಜಗತ್ತನ್ನು ನೇರವಾಗಿ ನೋಡುವುದೆಂದರೆ ಏನು? ಭಗವಂತನನ್ನೇ ಮುಖತಃ ನೇರವಾಗಿ ವೀಕ್ಷಿಸುವುದು. ಏಕೆಂದರೆ ಜಗತ್ತನ್ನು ಮತ್ತು ಭಗವಂತನ್ನು ಬೇರೆ ಬೇರೆ ಎಂದು ನೋಡಲಾಗದು; ಈ ಜಗತ್ತನ್ನು ಸೃಷ್ಟಿಸಿದವನೇ ಅವನು, ಅವನಿಂದ ಕಲ್ಪಿತವಾದ ನಿಯಮಗಳ ಹೊಣೆಯನ್ನು ಆತನ ಮೇಲೆ ಹೊರಿಸದೇ ಇನ್ನಾರ ಮೇಲೆ ಹೊರಿಸಲು ಸಾಧ್ಯ? ಎಲ್ಲದರಲ್ಲೂ ಓತಪ್ರೋತವಾಗಿರವ ಆ 'ತತ್'ನ್ನು ಜಗದ ಅಸ್ತಿತ್ವದಿಂದ ಹೇಗೆ ಬೇರೆಯಾಗಿ ಕಲ್ಪಿಸಲು ಸಾಧ್ಯ? ಈ ರೀತಿ ಹೇಳುವಾಗಲೂ ಸಹ ನಾವು ಸತ್ಯವನ್ನು ತುಸು ಮರೆಮಾಚಿ, ಅಸ್ಪಷ್ಟ ಶಬ್ದಗಳಲ್ಲಿ ಹೇಳುತ್ತೇವೆ. ಭಗವಂತ ದಯಾಮಯ, ಕರುಣಾಶಾಲಿ, ವಾತ್ಸಲ್ಯಮಯಿ, ಪ್ರೇಮಮಯಿ ಎಂದು ನಾವು ಹೇಳುತ್ತೇವೆ; ದೇವರು ಒಳ್ಳೆಯವನು, ಮಂಗಳಕಾರಕನು, ಶುಭಂಕರನು, ಅವನು ನ್ಯಾಯ ಪಕ್ಷಪಾತಿ, ದೇವರು ಧರ್ಮದರ್ಶಿಯು ಎಂದು ಹೇಳುತ್ತ ನಮ್ಮ ಮಾನಸಿಕ–ನೈತಿಕ ಕಲ್ಪನೆಗೆ ತಕ್ಕಂತೆ ದೇವರನ್ನು ರೂಪಿಸಿ, ಚಿತ್ರಿಸಿ ಉಳಿದಂತೆ ಎಲ್ಲ ಅವಗುಣಗಳೂ ಅವನಲ್ಲ ಎಂದು ಪ್ರತಿಪಾದಿಸುತ್ತೇವೆ. ಹಾಗಾದರೆ ಅಶುಭ, ಅಮಂಗಳ, ಕೆಡಕು ಇವೆಲ್ಲ ಬಂದದ್ದೆಲ್ಲಿಂದ? ಅವು ಹೊರಗಿನಿಂದ ಬಂದಿವೆ. ಸೈತಾನೀ (ರಾಕ್ಷಸೀ) ಶಕ್ತಿಯಿಂದ ಅವು ರೂಪಗೊಂಡಿವೆ, ಭಗವಂತನೇ ಅವುಗಳಿಗೆ ಅನುಮತಿ ನೀಡಿದ್ದಾರೆಂದು ಹೇಳುತ್ತೇವೆ. ಯಾವುದೋ ರಹಸ್ಯವಾದ ಉದ್ದೇಶಕ್ಕಾಗಿ ಅವನು ಸೈತಾನೀ ಶಕ್ತಿಗಳ ಕೈಯಲ್ಲಿ ಸಿಕ್ಕಿ ತೊಂದರೆಗೆ ಒಳಗಾದಂತೆ ವರ್ತಿಸುತ್ತಾನೆ ಎಂದು ಹೇಳುತ್ತೇವೆ. ಅಥವಾ ಅಂಧಕಾರದ ಒಡೆಯನಾದ ಅಹರಿಮನ್‌ನಿಂದ ವಿಕೃವಾಗಿ ಮಾರ್ಪಟ್ಟು ಅಹುರಮಜ್ದಾ ಸದಾಚಾರದ ಸೃಷ್ಟಿ ದುಷ್ಟಜನ ಬಾಧಿತವಾದಂತೆ ತೋರುತ್ತದೆ. ಅಷ್ಟಲ್ಲದೇ ಸ್ವಾರ್ಥಪರನಾದ ಪಾಪಿಷ್ಟನಾದ ಮಾನವನು ಈಶ್ವರನ ನಿರ್ದೋಷ ಸೃಷ್ಟಿಯನ್ನು ಕೆಡಿಸಿದ್ದಾನೆ ಎಂದೂ ಹೇಳುತ್ತೇವೆ. ಮಾನವನೇ ಮೃತ್ಯುವಿನ ನಿಯಮವನ್ನು ಕಲ್ಪಿಸಿದ್ದಾನೆ. ಪ್ರಾಣಿಗಳನ್ನು ತನ್ನ ಆಹಾರಕ್ಕಾಗಿ, ವಿನೋದಕ್ಕಾಗಿ ಕೊಲ್ಲುತ್ತ, ಪ್ರಕೃತಿಯು ಈಗ ಸಂಹಾರ ಹಾಗೂ ಸೃಷ್ಟಿಯ ವಿಷಯದಲ್ಲಿ ಅನಿವಾರ್ಯತೆಯನ್ನು ಸೃಷ್ಟಿಸಿದೆಯೋ, ಅದೇ ರೀತಿ ತಾನೂ ವ್ಯವಹಾರ

ಮಾಡಲು ನೋಡುತ್ತಾನೆ. ಆದರೆ ಪ್ರಪಂಚದಲ್ಲಿ ಕೆಲವೇ ಕೆಲವು ಭಾರತೀಯ ದೃಷ್ಟಿಕೋನ ಹೊಂದಿದಂಥ ಧರ್ಮಗಳು ಮಾತ್ರ ಪ್ರಾಮಾಣಿಕವಾಗಿ, ನಿಷ್ಠುರವಾಗಿ, ಧೈರ್ಯವಾಗಿ ಈ ರೀತಿಯ ದ್ವಂದ್ವವನ್ನು ಪರಿಹಾರ ಮಾಡುವ ಪ್ರಯತ್ನ ಮಾಡಿವೆ. ಏಕೈಕನಾದ ಪರಮಾತ್ಮನೇ ಈ ಜಗವನ್ನು ನಿರ್ಮಿಸಿದ್ದಾನೆ ಸೃಷ್ಟಿ ಸ್ಥಿತಿ ಲಯ ಕಾರಣನಾದ ಪರಮಾತ್ಮನು ಅದ್ವಯ; ದುರ್ಗಾ ಮಾತೆಯು ಸಕಲ ಕಷ್ಟಗಳನ್ನು ಭಂಜಿಸುವ ಮಂಗಳಕರ ದೇವತೆಯೂ ಹೌದು, ದುಷ್ಟಜನ ಭಂಜಕ, ವಿಧ್ವಂಸಕ ಕಾಳಿಯೂ ಹೌದು ಎರಡೂ ಆಕೆಯೇ ಎಂದು ಖಡಾಖಂಡಿತವಾಗಿ ಹೇಳುತ್ತವೆ. "ಕಾಳಿ ಮಾತೆಯೂ ನಿನ್ನ ತಾಯಿಯೇ, ಆಕೆ ಕೂಡ ಪರಾಮಾತೆಯೆ, ನಿನ್ನಲ್ಲಿ ಸಾಮರ್ಥ್ಯವಿದ್ದರೆ ಆಕೆಯನ್ನು ಪೂಜಿಸು" ಎಂದು ಅವು ಆದೇಶಿಸುತ್ತವೆ. ಈ ರೀತಿ ಭಾರತೀಯ ಆರ್ಯ ಧರ್ಮವು ಮಹಾಸತ್ಯವನ್ನು ನಿರ್ಭಯದಿಂದ ಸಾರುತ್ತ ಬಂದಿದ್ದು, ಇದಕ್ಕೆ ಸರಿಸಾಟಿಯಾದ ಇನ್ನೊಂದು ಧರ್ಮ ಎಲ್ಲಿಯೂ ಇಲ್ಲ. ಸತ್ಯವು ನಿಜವಾಗಿ ಆಧ್ಯಾತ್ಮಿಕತೆಯ ಬುನಾದಿ, ಧೈರ್ಯವೇ ಅದರ ಆತ್ಮ – ತಸ್ಯೈ ಸತ್ಯಂ ಆಯತನಂ (ಕೇನ).

ಹಾಗೆಂದು ಸಂಘರ್ಷ, ಹೋರಾಟ ಮತ್ತು ಸಾವು ಇವೇ ಈ ಅಸ್ತಿತ್ವದ ಮೊದಲ ಮತ್ತು ಕೊನೆಯ ನಿಯಮ ಎಂದು ತಿಳಿಯಬಾರದು; ಸಾಮರಸ್ಯವು ಯುದ್ಧಕ್ಕಿಂತ ದೊಡ್ಡದಲ್ಲ, ಸ್ವಾರ್ಥಕ್ಕಿಂತ ಪ್ರೀತಿ ಹಿರಿದಲ್ಲ. ಮರಣಕ್ಕಿಂತ ಜೀವನ ಶ್ರೇಷ್ಠವಲ್ಲ ಅಥವಾ ನಾವು ಭೌತಿಕ ಶಕ್ತಿಯ ಬದಲಾಗಿ ಆತ್ಮಶಕ್ತಿಯನ್ನು ಗಳಿಸಬಾರದು ಎಂದೆಲ್ಲ ಅರ್ಥ ಮಾಡಬಾರದು. ಯುದ್ಧಕ್ಕಿಂತ ಶಾಂತಿ ಯಾವಾಗಲೂ ಶ್ರೇಷ್ಠ, ಸಂಘರ್ಷಕ್ಕಿಂತ ಏಕತೆ ಬಹಳ ಶ್ರೇಷ್ಠ, ಅಹಂಗಿಂತ ವಿಶ್ವಾತ್ಮಕತೆ ಬಹಳ ಹೆಚ್ಚಿನದು – ಸಾವಿಗಿಂತ ಅಮರ ಜೀವನ ಅತ್ಯಂತ ಶ್ರೇಷ್ಠ. ಈ ತತ್ವವನ್ನು ನಾವು ಹೃದಯಾಂತರಾಳದಲ್ಲಿ ಗಟ್ಟಿಯಾಗಿ ಧರಿಸಬೇಕು. ಭಗವಂತನು ಕೇವಲ ವಿನಾಶಕಾರಕನಲ್ಲ. ಅವನು ಜೀವಿಗಳೆಲ್ಲರ ಪರಮ ಮಿತ್ರನೂ ಹೌದು. ಅವನು ವಿಶ್ವಾತ್ಮಕನಾದ ತ್ರಿಮೂರ್ತಿಯಾಗಿರುವಂತೆ (ಸೃಷ್ಟಿ–ಸ್ಥಿತಿ–ಲಯಕಾರಕರಾದ ಬ್ರಹ್ಮ, ವಿಷ್ಣು ಮಹೇಶ್ವರ) ಪರಾತ್ಪರ ಅತೀತನೂ ಆಗಿದ್ದಾನೆ. ಭಯಾನಕಳಾದ ಕಾಳಿಯು ಪ್ರೇಮಮಯಿಯಾದ ವರದಾಯಿನಿ ಮಾತೆಯೂ ಆಗಿದ್ದಾಳೆ. ಕುರುಕ್ಷೇತ್ರದ ಪ್ರಭುವಾಗಿರುವ ಶ್ರೀಕೃಷ್ಣನು ದೈವೀ ಸ್ನೇಹಿತನೂ, ಸಾರಥಿಯೂ, ಮನಮೋಹಕ ಅವತಾರ ಸ್ವರೂಪನೂ ಆಗಿದ್ದಾನೆ.

ಈ ಎಲ್ಲ ಹೊಡೆದಾಟ, ಬಡಿದಾಟ, ಗೊಂದಲ, ಸಂದೇಹ, ಯುದ್ಧಗಳ ಮೂಲಕ ಅವನು ನಮ್ಮನ್ನು ಎಲ್ಲಿಗೋ ಕರೆದೊಯ್ಯುತ್ತಿದ್ದಾನೆ – ಎಲ್ಲಿಗೆ ಎಂಬುದು ನಮಗೆ ಖಚಿತವಾಗಿ ಗೊತ್ತಿಲ್ಲದಿದ್ದರೂ ಸಹ – ಇವೆಲ್ಲದರ ಆಚೆಗಿರುವ ಅತೀತದ ಕಡೆಗೆ ಎಂಬುದಂತೂ ನಿಶ್ಚಿತ. ನಾವಿಲ್ಲಿ ಸದಾ ಅನುಭವಿಸುವ ಪ್ರಪಂಚದ ದ್ವಂದ್ವಗಳಾಚೆಗೆ, ವಿಶ್ವಾತೀತ(ಸತ್ಯ)ದೆಡೆಗೆ ನಮ್ಮನ್ನು ಅವನು ನಿಧಾನವಾಗಿ ಕರೆದೊಯ್ಯುತ್ತಿರುವುದು ಖಚಿತ. ಎಲ್ಲಿಗೆ? ಹೇಗೆ? ಎಂಥ ವಿಶ್ವಾತೀತದೆಡೆಗೆ, ಇವೆಲ್ಲವನ್ನು ನಾವು ಕಂಡುಹಿಡಿಯಬೇಕು; ಹಾಗೆ ಹುಡುಕಬೇಕಾದರೆ, ಆನ್ವೇಷಣೆ ಮಾಡಬೇಕಾದರೆ ನಾವು ಮೊದಲು ಈ ಪ್ರಪಂಚ ಹೇಗಿದೆಯೋ ಹಾಗೆ ಒಪ್ಪಲು ಕಲಿಯಬೇಕು, ಅದನ್ನು ಚೆನ್ನಾಗಿ ನಿರೂಪಿಸಿ, ಭಗವಂತನ ಕಾರ್ಯವನ್ನು, ಅದರ ಸ್ವರೂಪವನ್ನು ತಿಳಿದುಕೊಳ್ಳಬೇಕು. ಆನಂತರ ಅದರ ದಾರಿ ಹಾಗೂ ಗುರಿ ತಾವಾಗಿ ಸ್ಪಷ್ಟವಾಗುವುವು. ನಾವು ಕುರುಕ್ಷೇತ್ರವನ್ನು ಅಂದರೆ ಯುದ್ಧ ಭೂಮಿಯನ್ನು ಒಪ್ಪಿಕೊಳ್ಳಲೇಬೇಕು. ನಾವು ಜೀವನದ ನಿಯಮಕ್ಕೆ ನಮ್ಮನ್ನು ಒಪ್ಪಿಸಿಕೊಳ್ಳಲೇಬೇಕು, ಮೃತ್ಯುವನ್ನೊಪ್ಪಿಕೊಂಡು ಅಮರತ್ವದ ಕಡೆಗೆ ಹೋಗುವ ದಾರಿ ಕಂಡುಕೊಳ್ಳಬೇಕು. ಅರ್ಜುನನಷ್ಟು ಭಯಭೀತರಾಗದೇ ಭಗವಂತನ ಕಾಲಾಂತರ ಸ್ವರೂಪವನ್ನು ನೋಡಬೇಕು; ಅವನ ವಿಶ್ವ ಸಂಹಾರಕತ್ವದ ರೂಪವನ್ನು ಅಲ್ಲಗೆಳೆಯಬಾರದು, ದ್ವೇಷಿಸಬಾರದು. ಅದಕ್ಕೆ ವಿಯುಖರಾಗಬಾರದು ಭಗವಂತನ ಸೃಷ್ಟಿಕಾರಕ ಹಾಗೂ ಸಂಹಾರಕ ಎರಡೂ ಸ್ವರೂಪಗಳನ್ನು ಸಮಾನ ಭಾವದಿಂದ ಕಾಣುವ ಮನಃಸ್ಥಿತಿ ಬೆಳೆಸಿಕೊಳ್ಳಬೇಕು.

(ಸಶೇಷ)

## ಶ್ರೀ ಅರವಿಂದರ

# “ವೇದದ ಪ್ರತಿಮಾತತ್ತ್ವ”

**ಮೂಲ ಇಂಗ್ಲೀಷ: ಶ್ರೀ ಎಂ.ಪಿ. ಪಂಡಿತ**

**– ಅನುವಾದ: ಪುಟ್ಟು ಕುಲಕರ್ಣಿ**

[ಶ್ರೀ ಅರವಿಂದರ ಹಿಮಾಲಯ ಸದೃಶ ಅಭಿವ್ಯಕ್ತಿಗಳಲ್ಲಿ ರೂಪಣೆಗೊಂಡಿರುವ ಶಬ್ದಗಳ ಹಾಗೂ ಅಭಿವ್ಯಕ್ತಿಗಳನ್ನು ಹಾಗೂ ಅವುಗಳ ಅಂತರಾರ್ಥವನ್ನು ಅರಿತುಕೊಳ್ಳಲು ಶ್ರೀ ಎಂ.ಪಿ. ಪಂಡಿತರು ಅತ್ಯಪರೂಪದ ಪಥವನ್ನು ನಿರ್ಮಿಸಿದ್ದಾರೆ. ಅದರಲ್ಲೂ ಆ ಶಬ್ದಗಳಲ್ಲಿ ಆತ್ಮವಾಗಿರುವ ಅಂಶವನ್ನು ಸರ್ವಗ್ರಾಹ್ಯವಾಗುವಂತೆ, ಭಾಷ್ಯ ಸ್ವರೂಪದ ಸೂತ್ರಗಳನ್ನೂ ಕೊಟ್ಟಿದ್ದಾರೆ. ‘ಸಾವಿತ್ರಿ’, ‘ದಿವ್ಯ ಜೀವನ’, ‘ವೇದ ರಹಸ್ಯ’ಗಳಂತಹ ಬೃಹತ್ ಕೃತಿಗಳಲ್ಲಿ ರೂಪಿತವಾಗಿರುವ ಭಾರತೀಯ ತತ್ತ್ವಶಾಸ್ತ್ರದ, ವೇದದ ಶಬ್ದಾವಳಿಗಳನ್ನು ಆಂಗ್ಲ ಭಾಷೆಯಲ್ಲಿ ಸಂವಹನ ಮಾಡುವಾಗ ಎದುರಾಗಬಹುದಾದ ಅಡೆತಡೆಗಳನ್ನು ನಿವಾರಿಸುವದರ ಸಲುವಾಗಿ ‘ವೇದಿಕ್ ಸಿಂಬಾಲಿಜಮ್’ ಎನ್ನುವ ನಿಘಂಟು ಮಾದರಿಯ ಕೃತಿಯನ್ನು ರೂಪಿಸಿದ್ದಾರೆ. ಈ ಕೃತಿಯು ಅಮೇರಿಕೆಯ ‘ಲೋಟಸ್ ಪ್ರೆಸ್’ ವತಿಯಿಂದ ಜೂನ 14 1988 ರಲ್ಲಿ ಪ್ರಕಾಶನಗೊಂಡಿದೆ. ಕನ್ನಡದಲ್ಲಿಯೂ ಶ್ರೀ ಅರವಿಂದರ ಕೃತಿಗಳ ಅಧ್ಯಯನದ ಸಂದರ್ಭದಲ್ಲಿ, ಇಲ್ಲಿ ರೂಪಿತವಾಗಿರುವ ಆಂತರ್ಯದ ಅರ್ಥೈಸುವಿಕೆಗಳು, ಅಧ್ಯಯನಕ್ಕೆ ಸೂಕ್ತ ಮಾರ್ಗದರ್ಶನ ಕೊಡುತ್ತಿವೆ. ಸಿಂಬಾಲ್ ಎನ್ನುವದು ‘ಸಂಕೇತ’ವೆನ್ನುವ ಅರ್ಥವಿದ್ದರೂ ಇಲ್ಲಿ ಅದನ್ನು ‘ಸಿಂಬಾಲಿಜಮ್’ ಎಂದಿರುವದಕ್ಕೆ, ಈ ಸಂಕೇತವು ಪ್ರತಿಮಾ ಸ್ವರೂಪಕ್ಕೆ ಆರೋಹಣಗೊಳ್ಳುತ್ತದೆ. ಹೀಗಾಗಿ ಇಲ್ಲಿ ‘ವೇದದ ಪ್ರತಿಮಾತತ್ತ್ವ’ವೆಂದು ಪರಿಗಣಿಸಲಾಗಿದೆ (ಸಂ)].

### ವೇದದ ಪ್ರತಿಮಾತತ್ತ್ವದ ಅಂತರಾರ್ಥ

**“ವೇದವು ತನಗೆ ತಾನೇ ವೇದದ–ಸೂತ್ರಗಳನ್ನು ರೂಪಿಸಿಕೊಂಡಿದೆ” ಎನ್ನುವ ಮಾತಿದೆ.** ಮಾನವನಲ್ಲಿ ಚಿಂತನಾ ವ್ಯವಸ್ಥೆಯು ರೂಪಣೆಗೊಳ್ಳುತ್ತಿರುವ ಹಂತದಲ್ಲಿ, ಅದೂ ಧಾರ್ಮಿಕ–ವಿಧಿವಿಧಾನ ಸಂಸ್ಕೃತಿಯು ಪಾಕಗೊಳ್ಳುತ್ತಿರುವ ಪ್ರಕ್ರಿಯೆಯ

ಅವಧಿಯಲ್ಲಿ ಈ ಋಕ್‌ಗಳು ರೂಪಿತಗೊಂಡಿವೆ. ಇದೇ ಸ್ವರೂಪದಲ್ಲಿಯೇ ಸರಿಸುಮಾರಾಗಿ ಅದೇ ಅವಧಿಯಲ್ಲಿ ಗ್ರೀಕ್ ಮತ್ತು ಇತರೇ ಪ್ರಾಚೀನ ದೇಶಗಳಲ್ಲಿಯೂ ಸಹಿತ ಈ ತೆರನಾದ ಅಭಿವ್ಯಕ್ತಿಗಳು ರೂಪಿತಗೊಂಡಿವೆ. ಆದರೆ ಇಲ್ಲಿ ಪ್ರಮುಖವಾಗಿ ಎರಡು ಆಯಾಮಗಳಲ್ಲಿ ಈ ರೀತಿಯ ಅಭಿವ್ಯಕ್ತಿಗಳು ರೂಪಣೆಗೊಂಡಿರುವದನ್ನು ಕಾಣಬಹುದು. ಒಂದು 'ಜನ ಸಾಮಾನ್ಯರಿಗಾಗಿ ಬಾಹ್ಯಾಭಿವ್ಯಕ್ತಿ' (ಪ್ರೊಫ್ಯಾನಮ್ಮ ವಲ್ಗಸ್), ಮತ್ತೊಂದು 'ಸೂತ್ರಬದ್ಧಗೊಳಿಸಿಕೊಳ್ಳಲು ಪ್ರಾರಂಭ ಮಾಡಿರುವವರಿಗೆ ಆಂತರಂಗಿಕ ವ್ಯವಸ್ಥೆ'ಯಲ್ಲಿ ರೂಪುಗೊಂಡಿವೆ. ಜೊತೆಗೆ ಇದು 'ರಹಸ್ಯಗಳ ಯುಗವೂ ಆಗಿತ್ತು.'

ವೇದ ಕಾಲದ ಋಷಿಗಳು ಈ ರೀತಿಯ 'ರಹಸ್ಯ'ವನ್ನು ಕಂಡುಕೊಂಡಿದ್ದರು. ಅದು ಅಂತರಂಗದೊಳಗೇ ಅರಳುತ್ತಿರುವದನ್ನೂ ಅನುಭವಿಸಿದ್ದರು. ಅಂತರ್ಜ್ಞಾನದ ಮೂಲಕವೇ ಆ ರಹಸ್ಯವೂ ಪ್ರಕಾಶನಗೊಳ್ಳುತ್ತಿತ್ತು. ಹೀಗಾಗಿ ಈ ರಹಸ್ಯಗಳ ಸಲುವಾಗಿ ಆ ಸೂತ್ರಗಳನ್ನು ನಿಗದಿಗೊಳಿಸಿಕೊಂಡಿರಬಹುದಾದ ಸಂದರ್ಭಗಳಿವೆ. ಅದಕ್ಕಾಗಿಯೇ ಸೂಕ್ತವಾಗಿರುವ ಆದಿಸೂತ್ರಗಳನ್ನೂ ರಚಿಸಿದ್ದರು. ದುಷ್ಪಪ್ರಭಾವಗಳು ಯಾವುದೇ ರೀತಿಯಲ್ಲಿಯೂ ಇವುಗಳಿಗೆ ಧಕ್ಕೆ ತಾರದಂತೆ, ಸುರಕ್ಷಾ ಕವಚವನ್ನೂ ನಿರ್ಮಿಸುವ ಸಲುವಾಗಿ 'ಆ ಮೂಲಾಕ್ಷರಗಳನ್ನೇ ಸಂಕೇತ'ವಾಗಿರಿಸಿಕೊಂಡಿದ್ದರು. ಈ ಮೂಲಾಕ್ಷರಗಳಲ್ಲಿ ಅಡಕಗೊಂಡಿರುವ ರಹಸ್ಯವು, ಯಾವುದೇ ರೀತಿಯ ಗಾಢವಾದ ಅಧ್ಯಯನದ ಕ್ರಮಾಂಕವಿಲ್ಲದೇ ಪ್ರಕಾಶಗೊಳ್ಳುತ್ತಿರಲಿಲ್ಲ. ಆದರೆ ಯಾವಾಗ ಜ್ಞಾನದ ಮಾರ್ಗದಲ್ಲಿ ಸೂಕ್ತವಾಗಿ ಸಾಗುತ್ತಾರೋ ಆಗ ಈ ಮೂಲಾಕ್ಷರಗಳಲ್ಲಿ ಅಡಕವಿರುವ ಅಂತರಾರ್ಥವು ಅರಿವಿಗೆ ಬರುವಂತೆ ಸಾಧನಾ ಪಥವಿತ್ತು.

ಈ 'ಸಂಕೇತಗಳು' ತ್ಯಾಗ–ಸಮರ್ಪಣೆ ಮತ್ತು ಚಿಂತನಾ ಮಾರ್ಗಗಳಿಂದಲೇ ಅಂತರ್ಗತವಾಗಿದ್ದು ಅದೇ ಕೇಂದ್ರ ಸ್ಥಾನವೂ ಆಗಿದೆ. ಇದು ತ್ಯಾಗ ಮತ್ತು ಸಮರ್ಪಣೇಯ ಸಲುವಾಗಿ ರೂಪಿತವಾಗಿದ್ದು, ಇದು ವೈಶ್ವಿಕ ಸ್ವರೂಪವನ್ನೂ ಹೊಂದಿದ್ದವು. ಆಗ ಪ್ರಚಲಿತದಲ್ಲಿದ್ದ ಆರಾಧನಾ ಪಂಥವನ್ನು ಒಂದು ಸಾಂಸ್ಥಿಕ ಸ್ವರೂಪಕ್ಕೆ ಪರಿವರ್ತಿಸುವ ವಿಷಯವನ್ನು ಒಳಗೊಂಡಿತ್ತು. ಹೀಗಾಗಿ ಈಗ ರೂಪಣೆಗೊಂಡಿರುವ ಋಕ್‌ಗಳೆಲ್ಲವೂ ಈ ಸಾಂಸ್ಥಿಕ ಸ್ವರೂಪದಲ್ಲಿ ಸಂರಚನೆಗೊಳ್ಳುವಲ್ಲಿಯೇ ಪ್ರಕ್ರಿಯೆಗೆ ಒಳಪಟ್ಟವು. ಆದರೆ ತದನಂತರದ ಅವಧಿಯಲ್ಲಿ ಇವುಗಳ ಮೂಲಾರ್ಥವನ್ನು ಬದಿಗೊತ್ತಿ, ಭಿನ್ನವಾದ ತಪ್ಪು

ಅರ್ಥೈಸುವಿಕೆಯಲ್ಲಿಯೇ ಚಿಂತನಗಳು ಮುಂದುವರೆದವು. ಮೂಲದಲ್ಲಿ ಇವುಗಳನ್ನು, ನಿಸರ್ಗ–ಸಹಜ ದೇವತೆಗಳಾದ ಇಂದ್ರ, ಅಗ್ನಿ, ಸೂರ್ಯ, ಸಾವಿತ್ರಿ, ವರುಣ, ಮಿತ್ರ ಮತ್ತು ಭಗ, ಅಶ್ವಿನಿ ದೇವತೆಗಳು, ರಿಭುಗಳು, ಮಾರುತರು, ರುದ್ರ, ವಿಷ್ಣು, ಸರಸ್ವತಿ ದೇವತೆಗಳಿಗೆ, ಇವರಿಂದ ವರವನ್ನು(ಕೃಪೆಯನ್ನು) ಪಡೆದುಕೊಳ್ಳುವ ಸಲುವಾಗಿ ಅವರಿಗೆ ಆಕಳು(ಗೋ), ಕುದುರೆಗಳು, ಬಂಗಾರ ಹಾಗೂ ಇನ್ನಿತರ ವಸ್ತುಗಳನ್ನು ಸಮರ್ಪಣೆ ಮಾಡುತ್ತಲೇ, ತಮ್ಮ ಸಂಪತ್ತನ್ನು ಹೆಚ್ಚಿಸಲು, ಶತ್ರುಗಳ ವಿರುದ್ಧ ವಿಜಯ ಸಾಧಿಸಲು, ಪ್ರಯಾಣದ ಅವಧಿಯಲ್ಲಿ ಸುರಕ್ಷತೆಯನ್ನು ಅಪೇಕ್ಷಿಸಿ, ಪುತ್ರ ಸಂತತಿಗಾಗಿ, ಆಳು–ಕಾಳುಗಳಿಗಾಗಿ, ವೈಭವಕ್ಕಾಗಿ ಹೀಗೆ ಹತ್ತು ಹಲವು ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ ಮತ್ತು ಇವೆಲ್ಲ ಲೌಕಿಕಾನುಭವಗಳ ಮೂಲಕ ತಮ್ಮ ತಮ್ಮ ಭವಿಷ್ಯವನ್ನು ಉತ್ತಮಗೊಳಿಸಿಕೊಳ್ಳಲು ಸಮರ್ಪಣೆ ಮಾಡುತ್ತಿದ್ದರು.

ಆದರೆ ಈ ರೀತಿಯಲ್ಲಿ ರೂಪಿತಗೊಂಡಿರುವ ಈ ಪ್ರಾಚೀನ ಹೊದಿಕೆಯ ಹಿಂದೆ, ಲೌಕಿಕ ಸಮೃದ್ಧಿಯ ಅಭಿಲಾಶೆಯ ಹಿಂದೆ, ನಿರ್ಮಿತಿಗೊಂಡಿದ್ದ ಬೇರೊಂದು ಸಂಗತಿ ಇದೆ. ಇಲ್ಲಿ ‘ಅಲೌಕಿಕ ಪಂಥ(ಮಾರ್ಗ)ದಲ್ಲಿ ಸ್ವಯಂಪ್ರಕಾಶನಗೊಳ್ಳುವ ಮೂಲಕ ಅಲ್ಲಿ ಪ್ರವೇಶ ಪಡೆದುಕೊಳ್ಳುವ ಪಥವೊಂದು ಇದೆ. ಇದೇ ವೇದದ ನೈಜ ‘ಸಂಕೇತ’ವೂ ಆಗಿದೆ. ಈ ವಿಷಯವನ್ನು ಸೂಕ್ತವಾಗಿ ಅರ್ಥೈಸಿಕೊಂಡಲ್ಲಿ ಹಾಗೂ ಅಧ್ಯಯನ ಮಾಡಿದಲ್ಲಿ, ಇಡೀ ಋಗ್ವೇದವೇ ಅತ್ಯಂತ ಸುಸ್ಪಷ್ಟವಾಗಿ ಅರ್ಥವಾಗುತ್ತದೆ. ಆ ರೀತಿಯಲ್ಲಿಯೇ ಅದು ಪರಿಣಾಮ ಸ್ವರೂಪದಲ್ಲಿಯೂ ಇದೆ. ಏಕೆಂದರೆ ಅದು ಅದೇ ರೀತಿಯಲ್ಲಿಯೇ ಸಂಯೋಜಿಸಲ್ಪಟ್ಟಿದೆ. ನೇರಾತಿನೇರವಾಗಿರುವ ಸಂರಚನಾಂಶಗಳನ್ನೂ ಹೊಂದಿದೆ. ಶ್ರೀ ಅರವಿಂದರ ಅಭಿಪ್ರಾಯದಂತೆಯೇ ಇದರ ಅಂತರಾರ್ಥವನ್ನು ಅರಿಯುವ ಈ ಅಲೌಕಿಕ ಪಂಥದ ಪಥದಲ್ಲಿ, ಇಲ್ಲಿ ಬಾಹ್ಯದಲ್ಲಿ ಸಮರ್ಪಣೆಯ ಅಥವಾ ಬಲಿಯ ಸ್ವರೂಪದಲ್ಲಿ ಸಲ್ಲಿಸಲಾಗುತ್ತಿದ್ದ ಆರಾಧನೆಗಳು, ನಿಜವಾಗಿಯೂ ಅಂತರಂಗಿಕವಾಗಿ ತನ್ನನ್ನು ತಾನೇ ಸಮರ್ಪಿಸಿಕೊಳ್ಳುವದನ್ನು ಸಂಕೇತಿಸುವಂತಿದ್ದವು. ಆ ಮೂಲಕವಾಗಿ, ದೇವತೆಗಳ ಜೊತೆಗೆ ತನ್ನನ್ನೂ ಸಮೀಕರಿಸಿಕೊಳ್ಳಲು ಇರುವ ಮಾರ್ಗಗಳಾಗಿದ್ದವು. ಇವೆಲ್ಲವೂ ಈ ದೇವತೆಗಳ ಶಕ್ತಿಗಳೇ ಆಗಿವೆ. ಭೌತಿಕ ಸ್ವರೂಪದಲ್ಲಿ, ಬಾಹ್ಯದಲ್ಲಿ, ಆಂತರಂಗಿಕವಾಗಿಯೂ ಭೌತಿಕ ಅಂಶಗಳನ್ನು ಒಳಗೊಂಡಂತೆ ಇರುವ ಸ್ವರೂಪದಲ್ಲಿ ಇದ್ದವು.

ಹೀಗಾಗಿ **'ಅಗ್ನಿ'**(ಬೆಂಕಿ)ಯು ಬಹಿರಂಗದಲ್ಲಿ ಅಗ್ನಿಯ ತತ್ತ್ವವಾಗಿದೆ. ಆದರೆ ಅಂತರಾರ್ಥದಲ್ಲಿ ಮಾತ್ರ ಇದು ದೈವೀ ಸ್ವರೂಪದ ಚೈತ್ಯಾತ್ಮನ ಜ್ವಾಲೆಯಾಗಿದೆ. ಅದರ ಬಲವಾಗಿದೆ. ಇಚ್ಛೆಯಾಗಿದೆ. ಜೊತೆಗೆ ತಪಸ್ಸೂ ಆಗಿದೆ. ಇನ್ನು **"ಸೂರ್ಯ"** ಬಹಿರಂಗದಲ್ಲಿ ಪ್ರಕಾಶವನ್ನು ಕೊಡುವ ಸೂರ್ಯನಾಗಿದ್ದು, ಆಂತರ್ಯದಲ್ಲಿ ಸ್ವಯಂಪ್ರಕಾಶನಗೊಳ್ಳುವ ತೇಜಪೂರ್ಣವಾಗಿರುವ ಜ್ಞಾನವಾಗಿದ್ದಾನೆ. **'ಸೋಮ'**ನು ಬಹಿರಂಗದಲ್ಲಿ ಚಂದ್ರನಾಗಿದ್ದಾನೆ, ಸೋಮರಸವಾಗಿದ್ದಾನೆ, ಸೋಮರಸ ಉತ್ಪತ್ತಿಯ ಸಸ್ಯವಾಗಿದ್ದಾನೆ. ಆದರೆ ಆಂತರ್ಯದಲ್ಲಿ ಅವನು 'ಆಧ್ಯಾತ್ಮಿಕ ಪರಮಾನಂದವಾಗಿದ್ದಾನೆ' .ಆನಂದ ಸ್ವರೂಪನಾಗಿದ್ದಾನೆ.

ವೇದದ ಈ ಅಂತರಂಗದ ಪಂಥ(ಪಥ)ದ ಪ್ರಧಾನವಾಗಿರುವ ಭೌತಿಕ ಸ್ವರೂಪದ ಬೋಧಶಕ್ತಿ (ಪರಿಕಲ್ಪನೆ) ಎಂದರೆ, ಇದೇ ಸತ್ಯಂ, ಋತಂ, ಬೃಹತ್, ಈ ಸತ್ಯ, ವಿಶ್ವ ನಿಯಮ, ವ್ಯಾಪ್ತತೆ, ಪೃಥ್ವಿ, ವಾಯು ಮತ್ತು ಸ್ವರ್ಗ ಇವುಗಳೆಲ್ಲ ಸಂಕೇತವಾಗಿರಸಲ್ಪಟ್ಟಿರುವ ಆ ಭೌತಿಕ, ಪ್ರಾಣಿಕ ಮತ್ತು ಮನೋಸ್ತರದ ಅಸ್ತಿತ್ವದ ಚಿಂತನಗಳಾಗಿವೆ. ಆದರೆ ಇವುಗಳಿಗೆಲ್ಲಕ್ಕೂ ಮೂಲಾಧಾರವಾಗಿರುವ "ಋತ"ವು ಮಾತ್ರ ಆ ಪರಮೋಚ್ಚ ಊರ್ಧ್ವದಲ್ಲಿರುವ ಸ್ವರ್ಗದಲ್ಲಿದೆ. ತ್ರೈಗುಣದ ಸ್ವರೂಪದಲ್ಲಿರುವ ಅನಂತತೆಯ ಆಧಾರದಲ್ಲಿಯೇ ರೂಪುಗೊಂಡಿದೆ. ಇದನ್ನೇ ಸುಸ್ಪಷ್ಟವಾಗಿ ವೇದದ ಋಕ್‌ಗಳಲ್ಲಿ ಅಭಿವ್ಯಕ್ತಗೊಳಿಸಲಾಗಿದೆ. ಹೀಗಾಗಿ ಇದು ಆಧ್ಯಾತ್ಮಿಕ ಮತ್ತು ಅತಿಮಾನಸೀಯ ಜ್ಯೋತಿಪ್ರಕಾಶದ ಚಿನ್ಮಯಕಾಂತಿಯಾಗಿದೆ. ಪೃಥ್ವಿಯು ತದುತ್ತರವನ್ನು ಸ್ಪರ್ಶಿಸಲು ಮತ್ತು ಅದರೊಡನೆ ಸ್ಪಂದಿಸಲು ಮತ್ತು ಸ್ವರ್ ಹಂತದಲ್ಲಿ ಆಕಾಶದೊಡನೆಯೂ ಸ್ಪಂದಿಸಲು, ಮತ್ತೆ ಸೂರ್ಯ ಲೋಕವನ್ನೂ ತಲುಪಲು, ಆ ಪರಮಶಾಂತಿಯ ತಾಣವನ್ನು – ಅದು ದೇವತೆಗಳ ನಿವಾಸ ಸ್ಥಾನವಾಗಿರುವದನ್ನು ದೃಷ್ಟಿಸಿ – ತಲುಪಿದ್ದು, ನಮ್ಮ ಪೂರ್ವಪಿತಾಮಹರ ಮಹತ್–ಸಾಧನೆಯಾಗಿದೆ. (ಪೂರ್ವೇ ಪಿತರಃ). ಅಲ್ಲದೇ ವೇದದ ಪಥವನ್ನೂ ನಿರ್ಮಿಸಿದ ಏಳು ಜನ ಆಂಗೀರಸರ ಸಾಧನೆಯೂ ಇದಾಗಿದೆ. ಈ ಸೂರ್ಯ ದೇವತೆಗಳು, ಅನಂತತೆಯ ಶಿಶುಗಳು, ಆದಿತ್ಯ ಇವರೆಲ್ಲರು ಈ ಋತದಿಂದಲೇ ಉಗಮಿಸಿದ್ದಾರೆ. ಹೀಗಾಗಿ ಈ ಸತ್ಯವೇ ಅವರ ನಿವಾಸ ಸ್ಥಾನವೂ ಆಗಿದೆ. ಆದರೆ ಅವರು ಅಲ್ಲಿಂದ ಅವತರಣಗೊಂಡು (ಕೆಳಗೆ ಇಳಿದು ಬಂದು) ಕೆಳಗಿನ ಸ್ತರದಲ್ಲಿರುವ ಪ್ರತಿಯೊಂದು ಸ್ತರದಲ್ಲಿಯೂ ಸೂಕ್ತವಾಗಿರುವ ರೀತಿಯಲ್ಲಿಯೇ ಆಯಾ ಸ್ವರೂಪದಲ್ಲಿಯೇ ಸ್ಥಿತಗೊಳ್ಳುತ್ತಾರೆ. ಕ್ರಿಯೆಗೆ ತೊಡಗುತ್ತಾರೆ – ಅವರ

ಮಾನಸಿಕ, ಪ್ರಾಣಿಕ ಮತ್ತು ಭೌತಿಕ ಜೊತೆಗೆ ವೈಶ್ವಿಕ–ಭೌತಿಕದ ಸ್ವರೂಪದಲ್ಲಿಯೂ ತೊಡಗಿಕೊಳ್ಳುತ್ತಾರೆ. ಹೀಗಾಗಿ ಇವರು ಮಾನವನಲ್ಲಿ ಸತ್ಯವನ್ನು ಪ್ರಗತಿಗೊಳಿಸುವ ಸಲುವಾಗಿ, ಅವರ ರಕ್ಷಕರಾಗಿ, ಪ್ರಗತಿಯ ಸಲುವಾಗಿ ಮಾರ್ಗದರ್ಶಕರಾಗಿ ಇರುತ್ತಾರೆ. ಏಕೆಂದರೆ ಇದು ಆ ಋತದಿಂದಲೇ ಅವತರಣಗೊಂಡಿರುತ್ತದೆ. (ಇದನ್ನೇ ಋತಸ್ಯ ಪಥಃ ಎನ್ನುವದು). ಈ ಪಥವೇ ಮಾನವರನ್ನು ಅಮರತ್ವದೆಡೆಗೆ ಮತ್ತು ಪರಮ ಸತ್ಯದ ನೆಲೆಗೆ ಕರೆದೊಯ್ಯುತ್ತದೆ. ಇದರಿಂದಲೇ ಇವುಗಳನ್ನು ಮಾನವ ಸ್ವರೂಪದ ಅಸ್ತಿತ್ವಗಳೆಂದೇ ಕರೆಯಲಾಗುತ್ತದೆ. ಈ ಮೂಲಕವೇ ಪ್ರಗತಿಗೊಳ್ಳುತ್ತ ತಮ್ಮ ತಮ್ಮ ಕ್ರಿಯೆಗಳಲ್ಲಿ ನಿಗದಿಗೊಂಡಂತೆ ಮಾನವನನ್ನು ರೂಪಾಂತರಗೊಳಿಸುತ್ತಾ, ಕರೆದೊಯ್ಯಲಾಗುತ್ತದೆ. ಇಲ್ಲವೇ ಜನ್ಮಕ್ಕೆ ಕಾರಣವಾಗುತ್ತದೆ. ಇದನ್ನು ದೇವಾವೀತಿ ಎಂದು, ವಿಸ್ತರಿಸಲ್ಪಟ್ಟ 'ದೇವಾವೀತಿ' ಎಂದು ರೂಪಿತವಾಗಿದೆ. ಇವೆಲ್ಲವೂ ತಮ್ಮ ವೈಶ್ವಿಕನೆಲೆಯಲ್ಲಿಯೇ ಸಂಯೋಗೊಂಡಿರುವ ಹಂತದಲ್ಲಿ (ವೈಶ್ವದೇವ್ಯಾ) ಇರುತ್ತವೆ.

ಈ ತ್ಯಾಗ ಅಥವಾ ಬಲಿ ಅಥವಾ ಸಮರ್ಪಣೆಯ ಅವಧಿಯಲ್ಲಿ ಆರಾಧನೆ ಮತ್ತು ದೇವತೆಗಳಿಗೆ ಸಲ್ಲಿಸುವ ಕಾಣಿಕೆಗಳ ಪ್ರಾತಿನಿಧಿಕ ಸ್ವರೂಪವಾಗಿದ್ದವು. ಇದು ಸಂಪೂರ್ಣವಾಗಿ ದೇವತೆಗಳಿಂದ ಸಹಾಯವನ್ನು ಪಡೆದುಕೊಳ್ಳುವ ಉದ್ದೇಶ ಹೊಂದಿಯೇ ಕಾರ್ಯತತ್ಪರರಾಗಿದ್ದ ಆರ್ಯ ಜನಾಂಗ ಮತ್ತು ಅದನ್ನು ತಡೆಯುವ ಸಲುವಾಗಿ ಹೋರಾಡುತ್ತಿದ್ದ ವಿನಾಶಕಾರೀ ಪ್ರವೃತ್ತಿಯ ಅಥವಾ ದೈತ್ಯದೇಹಿಗಳ ಮಧ್ಯದಲ್ಲಿ ಘಟಿಸಿರುವ ಸಂಗತಿ ಇದಾಗಿದೆ. ಈ ರೀತಿಯಲ್ಲಿ ಅಡೆತಡೆಗಳನ್ನು ನೀಡುತ್ತಿದ್ದವರನ್ನು ದಸ್ಯಗಳು, ವೃತ್ತರು, ಪಾಣಿಗಳು, ರಾಕ್ಷಸರು – ನಂತರದ ಅವಧಿಯಲ್ಲಿ ಇವರನ್ನು ದೈತ್ಯರೆಂದು ಮತ್ತು ಅಸುರರೆಂದು ಕರೆಯಲಾಯಿತು, ಇವರೆಲ್ಲರೂ ಭ್ರಮಾಧೀನ, ವಿಚ್ಛಿದ್ರಗೊಂಡ ಹಾಗೂ ತಮದಿಂದ ಕೂಡಿದ ಸಮೂಹವಾಗಿದ್ದ ಸಮಯ ಇದಾಗಿತ್ತು.

ಸಮರ್ಪಣೆಯು ಭೂವಲಯದಿಂದ ದೇವ ಲೋಕದೆಡೆಗೆ ಚಲನೆ ಹೊಂದಿರುವ ಯಾನವಾಗಿದೆ. ಅದೂ ಸ್ವರ್ಗದಲ್ಲಿರುವ ದೇವತೆಗಳ ಎಡೆಗೆ ಸಾಗುವ ಪಯಣವಿದಾಗಿದೆ. ಆದರೆ ಇದು ಮಾನವ ತನ್ನನ್ನು ತಾನೇ ಆ ಋತದ ನೆಲೆಗೆ ಸಾಗಿಸುವ ಸಲುವಾಗಿ ರೂಪಿತಗೊಂಡ ಘಟನೆಯಾಗಿದೆ. ಈ ಪಯಣವನ್ನು ವಿರೋಧಿಸುತ್ತಿರುವರನ್ನೇ ದಸ್ಯುಗಳೆಂದು, ಕಳ್ಳರೆಂದು, ದರೋಡೆಕೋರರೆಂದು, ಛಿದ್ರಗೊಳಿಸುವವರೆಂದು ಮತ್ತು ಸದಾ ಪ್ರತಿರೋಧ

ಒಡ್ಡುವವರು ಎಂದೇ ಇದ್ದುದರಿಂದ, ಇದೊಂದು 'ಯುದ್ಧದ ರೀತಿಯಲ್ಲಿ' ರೂಪುಗೊಂಡಿದೆ.

ಇಲ್ಲಿ 'ಸಮರ್ಪಣೆ'ಯಾಗಬೇಕಾಗಿರುವದು "ಆಂತರ್ಯ" ಮಾತ್ರ. ಬಾಹ್ಯದಲ್ಲಿ ಸಲ್ಲಿಸಲ್ಪಡುತ್ತಿರುವ ಯಾವುದೇ ಸಮರ್ಪಣೆಯೂ, ಅದು ಗೋವು ಆಗಿರಬಹುದು ಅಥವಾ ಅದರ ಉತ್ಪನ್ನಗಳಾಗಿರಬಹುದು, ಅಥವಾ ಕುದುರೆ(ಅಶ್ವ)ವಾಗಿರಬಹುದು, ಇಲ್ಲವೇ ಸೋಮರಸವೂ ಆಗಿರಬಹುದು, ಒಟ್ಟಿನಲ್ಲಿ ಇವೆಲ್ಲವೂ ಅಂತರಂಗದ ಶಕ್ತಿಯ ಹಾಗೂ ಅನುಭವಗಳ ನಿಷ್ಠಾಪೂರ್ಣ ನಿವೇದನೆಗಳೇ ಆಗಿದ್ದು ಅವೆಲ್ಲವೂ ಆ ಋತದ ಅಧಿಪತಿಗೆ ಸಲ್ಲಿಸುವ ಕ್ರಿಯೆಯಾಗಿವೆ. ಈ ದೈವೀ ಕಾಣಿಕೆಗಳು – ಅಂದರೆ ಸೂರ್ಯನ ದೈವೀ ಪ್ರಕಾಶವನ್ನು ಸಂಕೇತಿಸುತ್ತಿರುವ ಗೋ–ಸಮೂಹ, ಅಶ್ವದ ಸಾಮರ್ಥ್ಯವನ್ನು ಮತ್ತು ಅದರ ಶಕ್ತಿಯನ್ನು, ಆ ಸೂರ್ಯನೋಪಾದಿಯಲ್ಲಿರುವ ಅದೂ ಆಂತರ್ಯದಲ್ಲಿಯೇ ಇರುವ ಪರಮದೇವನಿಗೆ ಸಲ್ಲಿಸುವ ರೀತಿಯಲ್ಲಿವೆ. ಅದು ರೂಪಿತಗೊಂಡ ವಿಧಾನವೇ ಹಾಗಿತ್ತು.

ಆದರೆ ಈ ಸಂಕೇತಗಳನ್ನೇ ನಕಲು ಮಾಡಿಕೊಂಡು, ಎರಡೆರಡು ಅರ್ಥಗಳನ್ನು ಅದಕ್ಕೆ ಸಂಯೋಜಿಸಿ, ವೇದದ ಶಬ್ದಾರ್ಥಗಳನ್ನು ರೂಪಿಸಲಾಯಿತು. ಉದಾಹರಣೆಗೆ, 'ಗೋ' ಎನ್ನುವದನ್ನು 'ಆಕಳು' ಎಂದು ಮತ್ತು 'ಕಿರಣ'ವೆಂದು ಅರ್ಥೈಸಲಾಯಿತು. ಉಷಾ ಸೂರ್ಯನ ಕಿರಣಗಳನ್ನು ಸೂರ್ಯನ ಆಕಳುಗಳು ಎಂದೇ ಕರೆಯಲಾಗಿದೆ. ಸ್ವರ್ಗದ ವರದಾನಗಳೂ, (ಹೆಲಿಯೋಯಿಯೋ – ಹವಾನಿಯನ್ ಶಬ್ದ,) ಜೊತೆಗೆ ಸೂರ್ಯ ದೇವನ ಕರಣಗಳೂ ಆಗಿವೆ. ಹೀಗಾಗಿ ಇವನನ್ನು 'ರಹಸ್ಯೋದ್ಘಾಟನದ ಅಧಿಪತಿ' ಎಂದೇ ಗೌರವಿಸಲಾಗಿದೆ. ಇದೇ ಭಾವದಲ್ಲಿಯೇ ಗ್ರೀಕ ದೇಶದ ಪುರಾಣಗಳಲ್ಲಿಯೂ ಸಹಿತ "ಅಪೋಲೋ" ಎಂದರೆ ಅಲ್ಲಿಯ ಸೂರ್ಯನಾಗಿದ್ದಾನೆ. ಇಲ್ಲಿ ಅಪೋಲೋ ಕಾವ್ಯ ಮತ್ತು ಪ್ರವಾದಿತ್ವದ ಅಧಿಪತಿಯನ್ನಾಗಿಸಲಾಗಿದೆ. "ಘೃತ" ಎಂದರೆ ತುಪ್ಪ. ಆದರೆ ಇದು ಅಂತರಾರ್ಥದಲ್ಲಿ 'ಪ್ರಜ್ವಲನವಾಗಿದೆ, ಇನ್ನು 'ಸೋಮ' ಎಂದರೆ, ಸೋಮರಸವೆಂದು ಬಾಹ್ಯದಲ್ಲಿ ಇದ್ದರೆ, ಆಂತರ್ಯದ ಅರ್ಥದಲ್ಲಿ ಇದು ತೋಷ, ಮಧು. ಮಧೂರತೆ ಎಂದೆಲ್ಲಾ ಕರೆಯಲಾಗಿದೆ. ಇದೇ ಇಲ್ಲಿರುವ ಆಂತರ್ಯವಾಗಿದೆ.

# ಸಾವಿತ್ರಿ ಉಪನಿಷತ್ತು ಮತ್ತು ಶ್ರೀ ಅರವಿಂದರ ‘ಸಾವಿತ್ರಿ’

– ಪುಟ್ಟು ಕುಲಕರ್ಣಿ

**ಹರಿಃ ಓಂ ॥**

**1**

**ಕಃ ಸವಿತಾ ಕ ಸಾವಿತ್ರೀ ಅಗ್ನಿರೇವ ಸವಿತಾ ಪೃಥಿವೀ ಸಾವಿತ್ರೀ ಸ**
**ಯತ್ರಾಗ್ನಿಸ್ತತ್ ಪೃಥಿವೀ ಯತ್ರ ವೈ ಪೃಥಿವೀ ತತ್ರಾಗ್ನಿಸ್ತೆ ದ್ವೆ ಯೋನೀ ತದೇಕಂ ಮಿಥುನಮ್॥**



ಕಾಲದಾ ಛಿದ್ರ–ವಿಚ್ಛಿದ್ರ ಹೃದಯವದು ಗೈದ ಸರ್ವ ಘಟನೆ
ಈಗಿದೋ ಶಮನಗೊಂಡಿಹವು ಮತ್ತೆ ಹಸಿರುಕ್ಕಿ ಪುಟಿದು ತಾನೆ,
ಬೆಂದ–ಬೇಗೆಯದು ದುಃಖ–ದುಮ್ಮಾನ ಏನೊಂದು ಉಳಿಯದಿಹುದು
ಪ್ರಕೃತಿಯಾ ಹೃದಯದಲ್ಲೀಗ ಇವಕೆ ಇನಿತೊಂದು ತಾಣ ಸಿಗದು

ಹೃತ್ಕರ್ಣ ಮತ್ತೆ ಹೃತ್ಕುಕ್ಷಿ ಎಲ್ಲ ದಿಗ್ಬಂಧಗೊಂಡು ಇರಲು
ಅಲ್ಲಿರುವ ದೇವ ತಾ ವಾಸವಾಗಿ ತನ್ನದೇ ನೆಲೆಯಲಿರಲು,
ಆತ್ಮವದು ತನ್ನ ತೇಜಮಯ ಕಿರಣ ಊಡುತಲಿ ಕಾಂತಿಗೊಳಿಸಿ
ಜಾಗ್ರತದ ದೇಹವನು ಮತ್ತೆ ಸ್ಪಂದ – ಛಂದದಲಿ ವರ್ಣಗೊಳಿಸಿ

ಭೂತ–ಭೌತಿಕದ ದ್ರವ್ಯ ತಾನದುವು ಚೈತನ್ಯದೊಡನೆ ಸ್ಪಂದ
ಸಂಲಗ್ನಗೊಂಡು ತನ್ಮಯತೆಯಲ್ಲಿ ಏಕತ್ವ ಭಾವ–ಛಂದ

**ಶ್ರೀ ಅರವಿಂದರ ಸಾವಿತ್ರಿ; ದಳ 2 ರೇಣು 8 ಪುಟ 232**

**2**

**ಕಃ ಸವಿತಾ ಕಾ ಸಾವಿತ್ರೀ ವರುಣ ಏವ ಸವಿತಾಪಃ ಸಾವಿತ್ರೀ ಸ ಯತ್ರ**
**ವರುಣ–ಸ್ತದಾಪೋ ಯತ್ರ ವಾ ಆಪಸ್ತದ್ವರುಣಸ್ತೆ ದ್ವೆ ಯೋನಿಸ್ತದೇಕಂ ಮಿಥುನಮ್ ॥**

ಇದು ಗ್ರಂಥಿಯಿಹುದು ತಾರೆ–ತಾರೆಗಳ ಬಾಂಧವ್ಯ ಬೆಸುಗೆ ಇಟ್ಟು;
ಆ ದ್ವಂದ್ವಮೂಲ ಮೂಲದಲಿ ಏಕ ಇದು ಸರ್ವ ಶಕ್ತಿ ಗುಟ್ಟು,
ಆ ದ್ವಂದ್ವಮೂಲ ಮೂಲದಲಿ ಏಕ ತಾವಿರಲು ಹಂತದಲ್ಲಿ
ವಸ್ತು–ವಿಷಯಗಳ ಆಂತರ್ಯ ಜೊತೆಗೆ ಮಾಬಲದಿ ಹಕ್ಕಿನಲ್ಲಿ

ಈ ಲೋಕವನ್ನು ಮತ್ತದರ ಜೊತೆಗೆ ಅವಳನ್ನು ಸಹಿತವಾಗಿ
ನಿಶ್ಶಬ್ದ ಬ್ರಹ್ಮನಂತವನು ಶಾಂತ, ಅವನಾತ್ಮ ಸತತವಾಗಿ
ಪೋಷಿಸುತ ಘನದಿ, ಉತ್ಪತ್ತಿ – ಸ್ಥಿತಿಯ ಲಯಬದ್ಧ ಮೌನವಾಣಿ
ಅವನ ಕ್ರಿಯೆ ತೇಜ ಅವಳ ದೈವಾಜ್ಞೆಯಾ ದಾಖಲಾತಿ ಸರಣಿ

ಸಂತುಷ್ಟನಾಗಿ ಅವಳ ಪದತಲದಿ ಜಡತೆಯಲಿ ವಾಸವಾಗಿ;
ಅವನೆದೆಯ ತಾಣದಲಿ ನಿತ್ಯ ಬ್ರಹ್ಮಬ್ರಹ್ಮಾಂಡನೃತ್ಯಕಾಗಿ
ಅವಳಿಗೀ ತೆರದಿ ಹೃದ್ಗತವನಿತ್ತ ತನ್ನಾತ್ಮ ಸ್ಪಂದವಾಗಿ
ನಮ್ಮ ಬದುಕುಗಳು ನಮ್ಮ ಭಾವಗಳಿ ಕಂಪಿತದ ರಂಗವಾಗಿ

ಅವನ ಆಹ್ಲಾದದಾರ್ಣವದ ವರ್ಣ–ವರ್ಣಗಳ ಜ್ಯೋತಿ–ಬಿಂದು
ಸ್ಫುರಣೆಯಲಿ ಸತತ ವಿಸ್ತರಣೆಗೊಂಡು ಸ್ವಾರಾಜ್ಯ ತೇಜವಿಂದು
ಸರ್ವಾತ್ಮ ಭಾವದಲಿ ಸರ್ವಸತ್ತೆ ಸರ್ವಾಧಿವಾಸದಲ್ಲಿ
ನಿಷ್ಪಂದಗೊಳಲು ಏನೊಂದು ಇರದು ಸಾನಂದ ಭರತದಲ್ಲಿ
ಅವಳಿಚ್ಛೆಗೊಂಡು ಪತ್ರಿಸಿದ ರೂಹು ಸಾಕಾರಗೊಳುವ ತೆರದಿ
ಅವನ ಭಾವಗಳು ಪಡಿಮೂಡಿಕೊಂಡು ಅವನ ಕಾರ್ಯಗಳ ಸರದಿ

ಅವನ ಸತ್ತೆಯದು ಅವಳಪಾರದಾ ದರ್ಪಣದ ರೂಪವಾಗಿ;
ಉತ್ಥಾನಗೊಳುವ ಅವಳ ಆಶ್ವಾಸದಿಂದುಲಿವ ಮತ್ತೆ ಸಾಗಿ;

**ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 4 ಪುಟ 63**

**3**

**ಕಃ ಸವಿತಾ ಕ ಸಾವಿತ್ರೀ ವಾಯುರೇವ ಸವಿತಾಕಾಶಃ ಸಾವಿತ್ರೀ ಸ ಯತ್ರ**
**ವಾಯುಸ್ತದಾಕಾಶೋ ಯತ್ರ ವಾ ಆಕಾಶಸ್ತದ್ವಾಯುಸ್ತೇ ದ್ವೇ ಯೋನಿಸ್ತದೇಕಂ ಮಿಥುನಮ್॥**

ಉಜ್ವಲೋಜ್ವಲದ ಝಗಮಗದ ಮಿನುಗು–ಮಿನುಗುಗಳ ಮೇಳದಲ್ಲಿ
ಧನಂಜಯವಾಯುವೀಗಿಲ್ಲಿ ಶುದ್ಧ–ಪರಿಶುದ್ಧ ತೇಜಗಳಲಿ
ಪರಿಪೂರ್ಣ ಮುಕ್ತ ಆ ಸರ್ವಶಕ್ತ ಚೈತನ್ಯದಾತ್ಮ ಭಿತ್ತಿ
ಆ ಭಾವದುಂಬೆ ಈ ನೀಲಕಮಲದೆದೆಯಲ್ಲಿ ಬೀಜ ಬಿತ್ತಿ.

**ಶ್ರೀ ಅರವಿಂದರ ಸಾವಿತ್ರಿ; ದಳ 2 ರೇಣು11 ಪುಟ 264**

**4**

**ಕಃ ಸವಿತಾ ಕಾ ಸಾವಿತ್ರೀ ಯಜ್ಞ ಏವ ಸವಿತಾ ಛನ್ದಾಂಸಿ ಸಾವಿತ್ರೀ ಸ**
**ಯತ್ರ ಯಜ್ಞಸ್ತತ್ರ ಛನ್ದಾಂಸಿ ಯತ್ರ ವಾ ಛನ್ದಾಂಸಿ ಸ ಯಜ್ಞಸ್ತೇ ದ್ವೇ ಯೋನಿಸ್ತದೇಕಂ ಮಿಥುನಮ್॥**

ಜೋಡಿ–ಮನಗಳಿವು ಕೂಡಿಕೊಂಡಿರಲು ನಿತ್ಯಾನುಸಂಧದಲ್ಲಿ
ಸಂಯೋಗ ಯುಗಳ ಸಂಗಮದ ರಂಗು ರಂಗಿನಾ ನೃತ್ಯದಲ್ಲಿ
ಚಿಂತನದ –ಚಿತ್ತ ಚಿತ್ತ–ಚಿಂತನದ ಆಂತರ್ಯ ಗ್ರಹಿಸಿ ಈಗ
ದೃಷ್ಟಿಯನು ದೃಷ್ಟಿ ದೃಷ್ಟಿಸಿದೆ ಈಗ ಸಂಪುಷ್ಟಗೊಳ್ಳಲಾಗ

ಬರಿ ಮಾತು–ಮಾತಿನಲಿ ಹೂತುಕೊಳುವ ಅವಕಾಶವಿಲ್ಲದಂತೆ;
ಯುಗ್ಮ ಹೃದಯಕಿದು ಉತ್ತಾಪದಲ್ಲಿ ಉತ್ತಾಪ ಯೋಗದಂತೆ,
ನರನಾಡಿಗಳಲಿ ಭರತದೊಲು ಪುಲಕ ಉಕ್ಕುಕ್ಕಿ ಪುಟಿದು ಬಂದು
ಮಾಂಸಪೇಶಿಗಳು ಸಂಮೋದದಲೆಯ ಸಂಸ್ಪರ್ಶ ಪಡೆದುಕೊಂಡು

ಮೇಲೇರಿ ಏರಿ ಅರಳುತಲಿ ಹರಡಿ ಅವಕಾಶ ತುಂಬಲೆಂದು
ಅವರೀಗ ಅವರ ಅನುಭೂತಿಗಾಗಿ ಅನುನಯದಿ ಮಗ್ನರಿಂದು

ಇಬ್ಬಗೆಯನಳಿದು ಒಬ್ಬರಲ್ಲೊಬ್ಬರಾಗುತಲಿ ಕರಗಿ ಕರಗಿ
ಬೆಳೆಬೆಳೆದರೀಗ  ಕಳೆದುಂಬಿಕೊಂಡು ಹೊಳೆಹೊಳೆದು ಅಮಿತವಾಗಿ
ಕಾಯದ್ವಯಗಳಿವು ಎಂದು ದಹಿಸುವವೊ ಸಹನೆಯಲ್ಲಿ ಕಾದು ಕಾದು
ಅಗ್ನಿಯಲಿ ಅಗ್ನಿ ಸಂಲಗ್ನಗೊಳಲು ಸಂಯೋಗ ಸೃಷ್ಟಿ ನೇದು;

**ಶ್ರೀ ಅರವಿಂದರ ಸಾವಿತ್ರಿ; ದಳ 2 ರೇಣು 6 ಪುಟ 186**

**5**

**ಕಃ ಸವಿತಾ ಕಾ ಸಾವಿತ್ರೀ ಸ್ತನಯಿತ್ನುರೇವ ಸವಿತಾ ವಿದ್ಯುತ್ಸಾವಿತ್ರೀ ಸ**
**ಯತ್ರ ಸ್ತನಯಿತ್ನುಸ್ತದ್ವಿದ್ಯುತ್ ಯತ್ರ ವಾ ವಿದ್ಯುತ್ತ್ರ ಸ್ತನಯಿತ್ನುಸ್ತೇ ದ್ವೆ ಯೋನಿಸ್ತದೇಕಂ ಮಿಥುನಮ್॥**

ಖೇದ ಬಾಧನೆಗೆ ಭೇದಗೊಳ್ಳದಿಹ ಮುದಮೋದ ಸ್ವಾದದಿಂತು
ಅವನ ಛಂದದಾ ಬಂಧಾನುಬಂಧದಾಲಿಂಗದಲ್ಲೊ ಇಂತು
ಅವಳ ಆ ಸ್ನಿಗ್ಧ–ಲಾವಣ್ಯವನ್ನು ಅವತರಣಗೊಳಿಸಿ ಪೂರ
ಹೂ–ಮುತ್ತಿಗಾಗಿ ಅವಳಧರವೀಗ ತುಂತುಂಬಿ ಅಮೃತ–ಮಧುರ



ಮತ್ತಿದೋ ಅವಳ ಎದೆದುಂಬಲೆಂದು ಸೆಳೆಸೆಳೆದುಕೊಂಡು ಒಳಗೆ
ಮಹಿಮೆದುಂಬಿರುವ ಓರ್ವ ಪರಿಚಲನ–ಪ್ರಮುಖನನು ಇಂತು ಬಳಿಗೆ
ಆಧಾರಮೂಲ ಅವಳ ನೆಲೆಯಾಗಿ ರೂಪಾನುರೂಪಗೊಳಿಸಿ
ಗಗನವದು ಸಹಿತ ಬಲು ಕ್ಷೀಣ ತಾನು, ಘನವ್ಯೋಮ ವ್ಯಾಪ್ತ ವಾಸಿ.

**ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 11 ಪುಟ 275**

ಋತದ ಚೈತನ್ಯಕಿದೋ ಸಾರೂಪ್ಯ ಉಜ್ವಲದ ಸೂರ್ಯ–ಕಾಂತಿ
ಸ್ಮೃತಿಯರಳಿ ಖಚಿತ ಪ್ರಜ್ಞೆಯಲಿ ಹ್ಲಾದ–ಆನಂದ ಚಂದ್ರ–ಕಾಂತಿ
ನನ್ನ ಪಥವನ್ನು ಬೆಳಗುಗೊಳಿಸಲೆನೆ ಕಳೆಕಳೆಯ ತಳೆದವಿಂದು
ಋತಬೋಧೆ ತತ್ತ್ವ ಪ್ರಜ್ಞಾನ ಸತ್ವ ವಿಜ್ಞಾನ ಘನಕೆ ಸಂದು

**ಶ್ರೀ ಅರವಿಂದರ ಸಾವಿತ್ರಿ ; ದಳ 7 ರೇಣು 4 ಪುಟ 512**

6

**ಕಃ ಸವಿತಾ ಕಾ ಸಾವಿತ್ರೀ ಆದಿತ್ಯ ಏವ ಸವಿತಾ ದ್ಯೌಃ ಸಾವಿತ್ರೀ ಸ**
**ಯತ್ರಾದಿತ್ಯಸ್ತದ್ದ್ಯೌರ್ಯತ್ರ ವಾ ದ್ಯೌಸ್ತದಾದಿತ್ಯಸ್ತೆ ದ್ವೇ ಯೋನಿಸ್ತದೇಕಂ ಮಿಥುನಮ್ ॥**

ವೈಭವದ ಭವ್ಯ ಏಕಾಂತ–ದಿವ್ಯದಾ ಅಂತರಾಲಗಳಲಿ
ಭೌತಿಕದ–ದ್ರವ್ಯ ಜೊತೆ ಆತ್ಮಜ್ಯೋತಿ ಚೈತನ್ಯ ಮಿಲನದಲ್ಲಿ
ನಲುಮೆಯಲಿ ಒಲಿದ ನಲ್ಲ–ನಲ್ಲೆಯರು ಬಲು ಗೂಢ ತಾಣದಲ್ಲಿ
ಏಕಾಂತದಲ್ಲಿ ಸಮಸ್ಪಂದಗೊಳುವ ತಲ್ಲೀಯ ರೀತಿಯಲ್ಲಿ

ಅನುರಾಗ ತುಂಬಿ ರಾಗದಾವೇಗ ಭಾವದುದ್ವೇಗ ಛಂದ
ಇದುವರೆಗು ಅದುವು ಖೇದವನು ತರದ ಅನುಭೂತಿ ಭಾವ–ಬಂಧ
ಅವರಾತ್ಮ ಬಲವು ಜೊತೆ ಹರ್ಷ–ತೋಷ ಮಾಧುರ್ಯಗಳನು ಈಗ
ಸಂಮಿಲಗೊಳಿಸಿಕೊಂಡಿರಲು ಅವರು, ಸಂತೃಪ್ತ ಭಾವರಾಗ

ಅಭಿನಿವೇಶದಲಿ ಸಂಲಗ್ನಗೊಂಡು ಅಕ್ಷೋಭ್ಯ ಸ್ಥಿತಿಯಲೀಗ
ಅಧಿಲೋಕ ಮತ್ತೆ ಅಧೋಲೋಕಕಿದೊ ಏಕಾತ್ಮ ಮಿಡಿತವಾಗ.

**ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 2 ಪುಟ 105**



ಉಭಯವಿರೆ ಅಲ್ಲಿ ಆದರೂ ಏಕ, ಹಲ–ಲೀಲೆ ಕರ್ಮಗಳಲಿ
ದ್ವಂದ್ವಭಾವವದು ತಾನಳಿದು ಘನದ ತತ್ತ್ವದಾ ಕ್ರಿಯೆಗಳಲ್ಲಿ;
ಅರಿವಿನಲಿ ಮತ್ತೆ ಮರೆವಿನಲಿ ಅವರು ಸಂವಾದ ಜೊತೆಗೆ ಮಿಲನ
ಚಿಜ್ಜ್ಯೋತಿ ಮತ್ತೆ ಘನಮಾಯೆಯವರ ಪರಿವರ್ತ ದಿಟ್ಟಿ–ಯಾನ

ನಮ್ಮ ತೋಷ ಜೊತೆ ಕ್ಲೇಶ ಈಗವರ ಪರಿವೇದ ಮಲ್ಲಯುದ್ಧ
ನಮ್ಮ ಧ್ಯೇಯಗಳು ನಮ್ಮ ಬಯಕೆಗಳವರ ಕಥನಕಾತ್ಮಸಿದ್ಧ;
ನಮ್ಮ ಜೀವನದಿ ಮತ್ತೆ ಚಿಂತನದಿ ಸಂಯೋಗಗೊಳ್ಳಲೆಂದು
ಪರಮಗೋಪ್ಯದಲಿ ಅವರು ಸಂಲಗ್ನದಲ್ಲೀಗ ಐಕ್ಯಗೊಂಡು

**ಶ್ರೀ ಅರವಿಂದರ ಸಾವಿತ್ರಿ; ದಳ 1 ರೇಣು 4 ಪುಟ 61**

ಉಜ್ವಲದ ಶೋಭೆ ಸಂದೀಪ್ತಶೀಲದೇಕಾಂತ ಸಾಂತ ಘನವು
ಅದರ ಉಪಕಕ್ಷೆಯಾ ದಿವ್ಯ ತಾಣಗಳಲೀಗ ಸ್ಪಂದವಿದುವು
ಲೌಕಿಕದ–ಭಾವ ಆತ್ಮದನುಭಾವ ಅನುಭೂತಿಗೊಳಲು ಮಿಲನ
ತನ್ಮಯದಲೀಗ ಸಮ್ಮಿಲನ–ಮೇಳ ಚಿನ್ಮಯದ ನಾದ–ತಾನ ॥1॥

ಜೀವನೋಲ್ಲಾಸ ಆಮೋದ–ಲಾಸ್ಯ ಮುದಗೊಳುವ ಪ್ರೇಮ–ಜೋಡಿ
ಏಕಾಂತವಾದ ಆ ತಾಣದಲ್ಲಿ ಬಂಧಾನುಬಂಧ ಹೊಂದಿ.

ಖೇದಬಾಧನೆಯು ತಾನೊದಗದಿರುವ ರಾಗಾನುರಾಗದಲ್ಲಿ
ಉದ್ವೇಗದಲ್ಲಿ ಸಂಯೋಗಗೊಂಡು ಏಕೈಕವಾಗುವಲ್ಲಿ ॥2॥

ಅವರಾತ್ಮ ಶಕ್ತಿ ಅವರಾತ್ಮ ಮಧುರ–ಮಾಧುರ್ಯವನ್ನು ಇರಿಸಿ
ಮತ್ತಿದೋ ಪರಮ ಸಂತೃಪ್ತಿ–ತೋಷ ಯೋಗಾನುಬಂಧಗೊಳಿಸಿ
ಈ ಮಿಲನದಲ್ಲಿ ಆ ಊರ್ಧ್ವ–ಗಗನದೌನತ್ಯಲೋಕವೀಗ
ಬುವಿಯ–ಹೃನ್ಮನದ ಜೊತೆಗೀಗ ಮಿಡಿತ ಏಕಾತ್ಮ ಸ್ಪಂದವಾಗ ॥3॥

**ಶ್ರೀ ಅರವಿಂದರ ಸಾವಿತ್ರಿ; ದಳ 2 ರೇಣು 2 ಪುಟ 105**

**7**

**ಕಃ ಸವಿತಾ ಕಾ ಸಾವಿತ್ರೀ ಚನ್ದ್ರ ಏವ ಸವಿತಾ ನಕ್ಷತ್ರಾಣಿ ಸಾವಿತ್ರೀ ಸ**
**ಯತ್ರ ಚನ್ದ್ರಸ್ತನ್ನಕ್ಷತ್ರಾಣಿ ಯತ್ರ ವಾ ನಕ್ಷತ್ರಾಣಿ ಸ ಚನ್ದ್ರಮಾಸ್ತೇ ದ್ವೇ ಯೋನಿಸ್ತದೇಕಂ ಮಿಥುನಮ್॥**

ಜೋಡಿ–ಮನಗಳಿವು ಕೂಡಿಕೊಂಡಿರಲು ನಿತ್ಯಾನುಸಂಧದಲ್ಲಿ
ಸಂಯೋಗ ಯುಗಳ ಸಂಗಮದ ರಂಗು ರಂಗಿನಾ ನೃತ್ಯದಲ್ಲಿ



ಚಿಂತನದ–ಚಿತ್ತ ಚಿತ್ತ–ಚಿಂತನದ ಆಂತರ್ಯ ಗ್ರಹಿಸಿ ಈಗ
ದೃಷ್ಟಿಯನು ದೃಷ್ಟಿ ದೃಷ್ಟಿಸಿದೆ ಈಗ ಸಂಪುಷ್ಟಗೊಳ್ಳಲಾಗ

ಬರಿ ಮಾತು–ಮಾತಿನಲಿ ಹೂತುಕೊಳುವ ಅವಕಾಶವಿಲ್ಲದಂತೆ;
ಯುಗ್ಮ ಹೃದಯಕಿದು ಉತ್ತಾಪದಲ್ಲಿ ಉತ್ತಾಪ ಯೋಗದಂತೆ,
ನರನಾಡಿಗಳಲಿ ಭರತದೊಲು ಪುಲಕ ಉಕ್ಕುಕ್ಕಿ ಪುಟಿದು ಬಂದು
ಮಾಂಸಪೇಶಿಗಳು ಸಂಮೋದದಲೆಯ ಸಂಸ್ಪರ್ಶ ಪಡೆದುಕೊಂಡು
ಮೇಲೇರಿ ಏರಿ ಅರಳುತಲಿ ಹರಡಿ ಅವಕಾಶ ತುಂಬಲೆಂದು
ಅವರೀಗ ಅವರ ಅನುಭೂತಿಗಾಗಿ ಅನುನಯದಿ ಮಗ್ನರಿಂದು
ಇಬ್ಬಗೆಯನಳಿದು ಒಬ್ಬರಲ್ಲೊಬ್ಬರಾಗುತಲಿ ಕರಗಿ ಕರಗಿ
ಬೆಳೆಬೆಳೆದರೀಗ ಕಳೆದುಂಬಿಕೊಂಡು ಹೊಳೆಹೊಳೆದು ಅಮಿತವಾಗಿ

ಕಾಯದ್ವಯಗಳಿವು ಎಂದು ದಹಿಸುವವೊ ಸಹನೆಯಲ್ಲಿ ಕಾದು ಕಾದು
ಅಗ್ನಿಯಲಿ ಅಗ್ನಿ ಸಂಲಗ್ನಗೊಳಲು ಸಂಯೋಗ ಸೃಷ್ಟಿ ನೇದು;

**ಶ್ರೀ ಅರವಿಂದರ ಸಾವಿತ್ರಿ; ದಳ 2 ರೇಣು 6 ಪುಟ 186**

ವೈಭವದ ಭವ್ಯ ಏಕಾಂತ–ದಿವ್ಯದಾ ಅಂತರಾಲಗಳಲಿ
ಭೌತಿಕದ–ದ್ರವ್ಯ ಜೊತೆ ಆತ್ಮಜ್ಯೋತಿ ಚೈತನ್ಯ ಮಿಲನದಲ್ಲಿ
ನಲುಮೆಯಲಿ ಒಲಿದ ನಲ್ಲ–ನಲ್ಲೆಯರು ಬಲು ಗೂಢ ತಾಣದಲ್ಲಿ
ಏಕಾಂತದಲ್ಲಿ ಸಮಸ್ಪಂದಗೊಳುವ ತಲ್ಲೀಯ ರೀತಿಯಲ್ಲಿ

ಅನುರಾಗ ತುಂಬಿ ರಾಗದಾವೇಗ ಭಾವದುದ್ವೇಗ ಛಂದ
ಇದುವರೆಗು ಅದುವು ಖೇದವನು ತರದ ಅನುಭೂತಿ ಭಾವ–ಬಂಧ
ಅವರಾತ್ಮ ಬಲವು ಜೊತೆ ಹರ್ಷ–ತೋಷ ಮಾಧುರ್ಯಗಳನು ಈಗ
ಸಂಮಿಲಗೊಳಿಸಿಕೊಂಡಿರಲು ಅವರು, ಸಂತೃಪ್ತ ಭಾವರಾಗ

ಅಭಿನಿವೇಶದಲಿ ಸಂಲಗ್ನಗೊಂಡು ಅಕ್ಷೋಭ್ಯ ಸ್ಥಿತಿಯಲೀಗ
ಅಧಿಲೋಕ ಮತ್ತೆ ಅಧೋಲೋಕಕಿದೊ ಏಕಾತ್ಮ ಮಿಡಿತವಾಗ.

**ಶ್ರೀ ಅರವಿಂದರ ಸಾವಿತ್ರಿ; ದಳ 2 ರೇಣು 2 ಪುಟ 105**

8

**ಕಃ ಸವಿತಾ ಕಾ ಸಾವಿತ್ರೀ ಮನ ಏವ ಸವಿತಾ ವಾಕ್ ಸಾವಿತ್ರೀ ಸ ಯತ್ರ**
**ಮನಸ್ತದ್‌ವಾಕ್ ಯತ್ರ ವಾ ವಾಕ್ ತನ್‌ಮನಸ್ತೇ ದ್ವೇ ಯೋನಿಸ್ತದೇಕಂ ಮಿಥುನಮ್॥**



ಜ್ಞಾನ–ಸಂಪನ್ನ ಲೋಕಪ್ರಾವಿಣ್ಯ ಧೀಃಶಕ್ತಿ ಆತ್ಮಸ್ಪರ್ಶಿ
ಗುಹ್ಯಗೊಂಡಿರುವ ಸುಪ್ತಲೋಕವನು ತಾನರಿತು ಮಾರ್ಗದರ್ಶಿ;
ಅನಿಮೇಷದಲ್ಲಿ ಆ ಋತದ ದೃಷ್ಟಿ ಸಾರೂಪ್ಯಗೊಳಿಸಿತೀಗ
ತನ್ನದೇ ಸತ್ತೆ–ಸಾಮಗ್ರಿ–ಸರ್ವ ದೃಷ್ಟಾಂತಗಳನು ಈಗ

ಸೃಷ್ಟಿಗೊಂಡಿರುವ ಸೃಷ್ಟಿಯೌನತ್ಯದಾಮೇರು ಮೇರುಗಳಲಿ
ತಂತಾನೆ ಉದಿತ ಮೋದದಲಿ ನಿನದ ಆ ವಾಣಿ ನಾದದಲ್ಲಿ,
ಶಾಶ್ವತದ ಘೋಷ ತಾ ಸ್ವನನಗೊಂಡು ಧ್ವನಿಯಾಗಿ ಉದಿಸಿತಿಲ್ಲಿ
ಪಾರ್ಥಿವದ ಗೋಲ–ವಲಯದಲಿ ಜೀವಕರ್ಥವನೆ ತುಂಬುತಲ್ಲಿ,

ನಿರಾಕಾರಮಯ ನಿಶ್ಶೂನ್ಯ ದೃಶ್ಯಗಳ ಸರ್ವಾತಿ ಸರ್ವವನ್ನು
ದೃಷ್ಟಿಸುತಲೀಗ ದೃಷ್ಟಾರನಾಗಿ ಆ ಘೋಷಕಾರನಾಗಿ,
ತಾತ್ಪರ್ಯದುಂಬಿದಾಕೃತಿಯ ಶ್ರೇಣಿ ಚಿಂತನದ ರೂಹುಗಳಲಿ
ಬಿತ್ತಿರಲು ಚಿತ್ತದಾಕಾರಗಳನು ಸಾಕಾರಗೊಳಿಸುವಲ್ಲಿ

ಕಾಲ ವಿಕಸನದ ಹಂತ–ಹಂತಗಳು ಆಯಾಮ ಪಡದುಕೊಂಡು
ತಾವುದಿತಗೊಂಡು ಬೆಳೆಬೆಳೆದುದೀಗ ಬಿತ್ತಿರುವ ಬೀಜವಿಂದು.

**ದಳ 2 ರೇಣು 11 ಪುಟ 271**



ಅಮೃತತ್ವವನ್ನು ಅವನಲ್ಲಿ ತಾನೆ ಚಿದ್ರೂಪಗೊಳಿಸಿ ಅವಳು
ತಜ್ಜನಿತ ಲೋಕದೀ ಸೃಷ್ಟಿ–ಕಾರ್ಯಗಳ ಅನಾವರಣ ಸಾಲು
ದರ್ಶನಕೆ ಅವಳ ವದನವಿದೆ ಅವನ ವದನಾರವಿಂದದಿಂದ
ಅವಳಕ್ಷಿ ಕಾಂತಿ–ದಿಟ್ಟಿಯದು ತಾನು ಅವನಕ್ಷಿ ತೇಜದಿಂದ

ಆಗಲ್ಲಿ ಮುಕ್ತ–ದಿವ್ಯತೆಯು ಮನುಜನೆದೆಯಲ್ಲಿ ಉದಿತಗೊಂಡು
ಮೂರ್ತವಾಗದಾ ಅವಳ ಬಲಗಳಿಗೆ ರೂಹುಗಳು ಪ್ರತಿಮೆಗೊಂಡು
ಪ್ರಕ್ಷೋಭ್ಯಬಲದ ರಾಶಿಗಳ ಜೊತೆ–ಜಡದ ಏಕತ್ವದಾಗ ಅಲ್ಲಿ
ಪರಮದೇವನಾ ಯೋಗಚಿಹ್ನೆಯದು ಸಂಯೋಗವಾಗಲಲ್ಲಿ

**ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 24**

ನಮಗೆಂದೆ ಅವನ ಪರಮ–ಆನಂದ ಸ್ಮಿತಗೊಳುತ ಬೆಳಗುತಿರಲು
ಇಲ್ಲದಿರೆ ಅದುವು ತಾ ಸುಪ್ತವಾಗಿ ಆಹ್ವಾನ ಕೊಡುತಲಿರಲು
ಆ ದೂರದಿಂದ ಉಲಿ–ಉಲಿದು ತೇಲಿ ಬರಲಿರುವ ಶ್ರುತಿಯ ತೆರದಿ
ಅದೃಶ್ಯದಲ್ಲಿ ಸಾದೃಶ್ಯಗೊಳುವ ಮೋಹನದ–ವೇಣು ಮುದದಿ



ರಜತ–ಚಂದ್ರಿಕೆಯ–ಕಾಂತಿ–ಲೇಪನದಿ ಶಾಖೋಪಶಾಖೆಗಳಲಿ
ಸತತ–ಕಂಪಿತದ ಮುದಿತ ಹೃದಯದಾ ಸ್ಪಂದನದ ವನಗಳಲ್ಲಿ
ರಾಗ ತುಂಬಿರುವ ಸಮ್ಮೋಹದಲ್ಲಿ ಶೋಧಾನುಸಂಧ ಸಾರಿ
ಜೊತೆಗಿದೋ ಭಾವದುದ್ದೀಪ್ತ–ದೀಪ್ತಿ ಮಧುರ–ಯಾತನೆಯ ಲಹರಿ

**ಶ್ರೀ ಅರವಿಂದರ 'ಸಾವಿತ್ರಿ'; ದಳ 10 ರೇಣು 2 ಪುಟ 614**

ಉಭಯವಿರೆ ಅಲ್ಲಿ ಆದರೂ ಏಕ, ಕೆಲ–ಲೀಲೆ–ಕರ್ಮದೊಳಗೆ
ದ್ವಂದ್ವ ಭಾವವದು ತಾನಳಿದು ಘನದ ತತ್ತ್ವದಾ ಕ್ರಿಯೆಯ ಒಳಗೆ
ಅರಿವಿನಲಿ ಮತ್ತೆ ಮರೆವಿನಲಿ ಅವರು ಸಂವಾದ ಜೊತೆಗೆ ಮಿಲನ
ಚಿಜ್ಜ್ಯೋತಿ ಮತ್ತೆ ಘನಮಾಯೆಯವರ ಪರಿವರ್ತ ದಿಟ್ಟಿ ಮಾನ
ನಮ್ಮ ತೋಷ ಜೊತೆ ಕ್ಲೇಷಕೀಗವರ ಪರಿವೇದ ಮಲ್ಲಯುದ್ಧ
ನಮ್ಮ ಧ್ಯೇಯಗಳು ನಮ್ಮ ಬಯಕೆಗಳವರ ಕಥನಕಾತ್ಮ ಸಿದ್ಧ
ನಮ್ಮ ಜೀವನದಿ ಮತ್ತೆ ಚಿಂತನದಿ ಸಂಯೋಗಗೊಳ್ಳಲೆಂದು
ಪರಮಗೋಪ್ಯದಲಿ ಅವರು ಸಂಯೋಗದಲ್ಲಿಂದು ಐಕ್ಯಗೊಂಡು

**ಶ್ರೀ ಅರವಿಂದರ ಸಾವಿತ್ರಿ; ದಳ 1 ರೇಣು 5 ಪುಟ 61**

**ಟಿಪ್ಪಣಿ: 1**

ಗ್ರಂಥಿ (Knot): ಇದನ್ನು Cosmic Gravitation ಎನ್ನುತ್ತಾರೆ. ಕೋಟ್ಯಾಂತರ ಬೆಳಕಿನ ವರ್ಷದ ದೂರದಲ್ಲಿ ಸ್ಥಿತವಿರುವ ಅಸಂಖ್ಯಾದತ ಪ್ರಜ್ವಲಿತ ಆಕಾಶ ಕಾಯಗಳು, ಜ್ಞಾತವಾಗುತ್ತ ಬರುತ್ತಿದ್ದರೂ, ಇನ್ನೂ ಇನ್ನೂ ಅಜ್ಞಾತವಾಗಿರುವ ನಿತ್ಯ ನಿರಂತರ ಅವಕಾಶದಲ್ಲಿ ಇರುವ ಜ್ಯೋತಿಪುಂಜಗಳ ಮಧ್ಯೆ ಇರುವ 'ಸೇತುಬಂಧವಾಗಿರುವ' ಗುರುತ್ವಾಕರ್ಷಣೆ.

ನಿಶ್ಶಬ್ದ (Silent): (ನಿಶ್ಶಬ್ದಂ ಬ್ರಹ್ಮ ಉಚ್ಯತೆ..)

ಬ್ರಹ್ಮಬ್ರಹ್ಮಾಂಡ ನೃತ್ಯ (Cosmic-Dance): ಇಡೀ ಬ್ರಹ್ಮಾಂಡದಲ್ಲಿ ಘಟಿಸುತ್ತಿರುವ ನಿಯತಿಯ ಘಟನಾವಳಿಗಳ ಸೃಷ್ಟಿ–ಸ್ಥಿತಿ–ಲಯಗಳ ಸರಣಿ.

ಧನಂಜಯ ವಾಯು (Amethyst air): ಇದು ಬ್ರಹ್ಮರಂಧ್ರ ಸ್ಥಾನದಲ್ಲಿ ಇರುತ್ತದೆ. ಇದರ ವರ್ಣ ನೀಲವರ್ಣ. ಕರ್ಣದಲ್ಲಿ ಆರ್ಣವದ (ಅವಕಾಶದಲ್ಲಿರುವ ಸಮುದ್ರದ) ಘೋಷ ಮೊಳಗಿಸುತ್ತದೆ. ಇದು ವ್ಯಕ್ತಿಯ ಮರಣ ಕಾಲಕ್ಕೆ ನಿರ್ಘೋಷವಾಗುತ್ತದೆ ಎನ್ನುವ ವಿವರಗಳಿವೆ.

ಇದೇ ಮಾನವ ದೇಹದಲ್ಲಿ ಪ್ರವೇಶವಾದಾಗ "ಪ್ರಾಣವಾಯು"ವಾಗಿ ಹೃದಯ ಸ್ಥಾನದಲ್ಲಿ ಇದ್ದು, ಅಂಗುಷ್ಠದಿಂದ ಘ್ರಾಣಾಗ್ರಪರ್ಯಂತ ಸಪ್ರಾಣಿಸಿಕೊಂಡು, ಶಾಸ್ವೋಚ್ಛ್ವಾಸದಲ್ಲಿ ಕ್ರಿಯೆಗೆ ತೊಡಗುತ್ತದೆ; ಅನ್ನವನ್ನು ಜೀರ್ಣಿಸಿ ಶಕ್ತಿಯನ್ನು ಒದಗಿಸುತ್ತದೆ. ಇದರ ವರ್ಣ "ಇಂದ್ರನೀಲ" ನೀಲಕಮಲ ಎಂದರೆ ಹೃದಯ.


**ಟಿಪ್ಪಣಿ 5**: ಕೇವಲ ಭೌತಿಕ ತೃಪ್ತಿಯ ಅಂಶಕ್ಕಾಗಿ ಸಂಯೋಗೊಳ್ಳುವದು ಅತ್ಯಂತ ಸೀಮಿತವಾದದ್ದು. ತದನಂತರದಲ್ಲಿ ಈ ತೃಪ್ತಿಯು 'ಖೇದಕಾರಕವಾಗಿಯೂ' ಪರಿಣಮಿಸಬಹುದು. ಆದರೆ, ಈ ಶಾಶ್ವತತೆ ಮತ್ತು ದಿವ್ಯತ್ವ ಇವೆರಡೂ ಸಂಯೋಗಗೊಂಡಲ್ಲಿ, ಆಗ ಅಲ್ಲಿ ಯಾವ ಕಾಲಕ್ಕೂ ಯಾವುದೇ ರೀತಿಯ ಖೇದಕಾರಕ ಅಂಶಗಳು ಉದ್ಭವಿಸುವದಿಲ್ಲ. ಇಲ್ಲಿ 'clasp' ಎನ್ನುವದು 'ದ್ವಿತ್ವವಿದ್ದದ್ದು ಏಕ'ವಾಗುವ ಪ್ರತಿಮೆ. ಇದು ನಾವು ನಮಸ್ಕಾರ ಮಾಡುವಾಗ ನಮ್ಮ ಅಂಗೈಗಳೆರಡನ್ನೂ ಜೋಡಿಸಿ ದೇವನನ್ನು ಪ್ರಾರ್ಥಿಸಿದ ಹಾಗೆ ಇರುತ್ತದೆ.

ಇಲ್ಲಿ ‘ಶಕ್ತಿ ಮತ್ತು ಪ್ರಕಾಶ’(Energy and Light)ಗಳು ಒಂದಾದಾಗಲೂ ಆಗಲಿ ಅಥವಾ ಬೇರೆ ಬೇರೆಯಾಗಿದ್ದಾಗಲಾದರೂ ಸರಿ, ಅಲ್ಲಿ ಯಾವುದೇ ರೀತಿಯಿಂದಲೂ “ಖೇದಕಾರಕ ಸಂದರ್ಭ”ವಿರುವದಿಲ್ಲ.

ಶಾರ್ವರೀ ನಾಮ ಸಂವತ್ಸರದ ಯುಗಾದಿ, ಇದು ಚಾಂದ್ರಮಾನ ಹಾಗೂ ಸೌರಮಾನ ಯುಗಾದಿಯ ತತ್ತ್ವಗಳು ಸಂಯೋಗಗೊಳುವ ಸುವರ್ಣ ಸಂಧಿ. ಇದು ಸಂಕ್ರಮಣದ ಅವಧಿಯೂ ಹೌದು. ಇದನ್ನೇ ‘ವಿಜ್ಞಾನ ತತ್ತ್ವ’ ಎನ್ನುತ್ತಾರೆ. ಇಲ್ಲಿ ವಿಜ್ಞಾನ ಎನ್ನುವದನ್ನು ನಮ್ಮ ಭೌತಿಕ ಶಿಕ್ಷಣ ವ್ಯವಸ್ಥೆಯ ವಿಜ್ಞಾನಕ್ಕೆ ಸೀಮಿತಗೊಳ್ಳಬೇಕಾಗಿಲ್ಲ. ಈಗಿನ ವಿಜ್ಞಾನದ ವ್ಯಾಪ್ತಿ ಭೌತಿಕ ಸ್ವರೂಪದ ತೃಪ್ತಿಗೆ ಮಾತ್ರ ಸೀಮಿತಗೊಂಡಿದೆ. ಆದರೆ ‘ವಿಜ್ಞಾನ ತತ್ತ್ವ’ ಬ್ರಹ್ಮಾಂಡದ ನಿಯಮಗಳನ್ನು ಅನುಸರಿಸಿ ಘಟಿಸುತ್ತದೆ.

# ಶ್ರೀ ಅರವಿಂದರ 150ನೇ ಜನ್ಮದಿನದ ವಾರ್ಷಿಕೋತ್ಸವ






ದಿನಾಂಕ 21–01–2022 ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ ಶ್ರೀ ಅರವಿಂದರ 150ನೇ ಜನ್ಮದಿನದ ವಾರ್ಷಿಕೋತ್ಸವದ ಅಂಗವಾಗಿ ಶ್ರೀಮತಿ ಶಾರದ ಸಂಪತ್, ಮುಖ್ಯ ಪೋಸ್ಟ್‌ಮಾಸ್ಟರ್ ಜನರಲ್, ಕರ್ನಾಟಕ ವೃತ್ತ ರವರು ಮೇಘದೂತ ಸಭಾಂಗಣದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಶ್ರೀ ಅರವಿಂದರ ವಿಶೇಷ ಲಕೋಟೆಯನ್ನು ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್ ಗೌರವ ಅತಿಥಿಯಾಗಿ ಭಾಗವಹಿಸಿ ಶ್ರೀ ಅರವಿಂದರ ಜೀವನ ಮತ್ತು ಸಾಧನೆಗಳ ಕುರಿತು ಸಂಕ್ಷಿಪ್ತವಾಗಿ ನೆರೆದಿದ್ದ ಸಭಿಕರಿಗೆಲ್ಲರಿಗೂ ತಿಳಿಸಿದರು. ಅಂಚೆ ಇಲಾಖೆ ಕರ್ನಾಟಕ ವೃತ್ತದ ಹಿರಿಯ ಅಧಿಕಾರಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು.

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 01–01–2022 ಶನಿವಾರ ನೂತನ ವರ್ಷ ಮತ್ತು ಸಂಸ್ಥಾಪಕರ ದಿನ ಆಚರಿಸಲಾಯಿತು. ತತ್ಸಬಂಧ ಬೆಳಿಗ್ಗೆ 10.00 ರಿಂದ 10.20 ವರೆಗೆ ಸಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ನಂತರ 10.30 ರಿಂದ 11.30 ವರೆಗೆ "Love and Death" ಎಂಬ ವಿಡಿಯೋ ತೋರಿಸಲಾಯಿತು. ಮತ್ತು "A Captive of Her Love" ವಿಷಯ ಕುರಿತು ದಿನಾಂಕ 25ನೇ ಡಿಸೆಂಬರ್ 2021 ರಿಂದ 20ನೇ ಫೆಬ್ರವರಿ 2022 ವರೆಗೂ ಶ್ರೀ ಅರವಿಂದೋ ಸಂಕೀರ್ಣದ ಸಾಂಸ್ಕೃತಿಕ ಭವನದಲ್ಲಿ ಫೋಟೋ ಚಿತ್ರಪ್ರದರ್ಶನ ಆಯೋಜಿಸಲಾಗಿದೆ.

ದಿನಾಂಕ 08–01–2022 ಶನಿವಾರ ಸಂಜೆ 4.00 ರಿಂದ 5.30 ಗಂಟೆಯವರೆಗೆ ಶ್ರೀ ಪುಟ್ಟು ಕುಲಕರ್ಣಿ, ಸಂಪಾದಕರು – ಅಖಿಲ ಭಾರತ ಪತ್ರಿಕೆ ಇವರು ಶ್ರೀ ಅರವಿಂದರ 150ನೇ ಜನ್ಮದಿನದ ವಾರ್ಷಿಕೋತ್ಸವದ ಅಂಗವಾಗಿ "ಕಾಳಿದಾಸ ಮತ್ತು ಶ್ರೀ ಅರವಿಂದರು: ಕಾಣ್ಕೆ ಮತ್ತು ಸೃಷ್ಟಿ" ಎಂಬ ವಿಷಯವಾಗಿ ಆನ್‌ಲೈನ್ ಮೂಲಕ ಉಪನ್ಯಾಸ ನೀಡಿದರು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು.

ದಿನಾಂಕ 26–01–2022 ಬುಧವಾರದಂದು ಮಿರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಪ್ರಾಂಶುಪಾಲರು ಧ್ವಜಾರೋಹಣ ಮಾಡಿದರು. ಶಾಲಾ ವಿದ್ಯಾರ್ಥಿ ವೃಂದ ದೇಶಭಕ್ತಿ ಗೀತೆ ಮತ್ತು ಗಣರಾಜ್ಯದ ಮಹತ್ವ ಕುರಿತು ಭಾಷಣ ಮಾಡಿದರು. ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಂದೇಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ದಿನಾಂಕ 29–01–2022 ಶನಿವಾರ ಸಂಜೆ 4.00 ರಿಂದ 5.30 ಗಂಟೆಯ–ವರೆಗೆ ಶ್ರೀ ನಾರದ್ (Richard M Eggenberger) ಶ್ರೀ ಅರವಿಂದೋ ಆಶ್ರಮ, ಪುದುಚೇರಿ ಇವರು ಶ್ರೀ ಅರವಿಂದರ 150ನೇ ಜನ್ಮದಿನದ ವಾರ್ಷಿಕೋತ್ಸವದ ಅಂಗವಾಗಿ "ಸಾವಿತ್ರಿ–ಪರ್ವ ಒಂದು, ಸರ್ಗ ಎರಡು: ಸಮಸ್ಯೆ" ಎಂಬ ವಿಷಯವಾಗಿ ಆನ್‌ಲೈನ್ ಮೂಲಕ ಉಪನ್ಯಾಸ ನೀಡಿದರು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು.



ಜ್ಯೋತಿಯೊಲು ಅಪ್ಪಿ ಮೌನ ಜಾಗರಿಸೆ ಅರಳಿತ್ತು ಲೋಕ–ಲೋಕ
ಪರಮ ಪಾವನಕೆ ಧರ್ಮ–ವಿಧಿಯಾಗಿ ವೃದ್ಧಿಸಿತು ಸರ್ವಲೋಕ
ಕಂಪನದಿ ಪವನ ನೆಲ–ಮುಗಿಲುಗಳಿಗೆ ಸಂಪರ್ಕ ಸೇತುವಾಗಿ
ಈ ಸ್ತುತಿಯ ರೆಕ್ಕೆ ವಿಸ್ತಾರವಾಗಿ ದೃಷ್ಟಾರ ವಾಯುವಾಗಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 1 ರೇಣು 1 ಪು 4)**

**RNI No. 22511/1971**
No. of Pages **68 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ನಿರಪೇಕ್ಷವಾದ ಘಳಿಗೆಯದು ಒಂದು ಲಘುತರದ ಧನ್ಯ ಭಾವ
ತೇಲಲೆನೆ – ಮುಳುಗಿ ಮಿಂಚಲೆನೆ ಬೆಳಗಿ ಹೊಳೆದ ದಿವ್ಯಾನುಭಾವ..

– **ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 2 ಪುಟ 115)**

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.